ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 24 ಸೋಮವಾರ 2022

ಸಂಪುಟ: 43 | ಸಂಚಿಕೆ: 188 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಟಿ20 ವಿಶ್ವಕಪ್: ದೇಶದ ಜನತೆಗೆ ಟೀಂ ಇಂಡಿಯಾದಿಂದ ದೀಪಾವಳಿ ಡಬಲ್ ಧಮಾಕಾ...



ವಿರಾಟ್ ಕೊಹ್ಲಿ ಅಬ್ಬರ; ಪಾಕ್ ತತ್ತರ



- ನಾಲ್ಕು ವಿಕೆಟ್‌ಗಳಿಂದ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ಮಣಿಸಿ ಭಾರತ ಶುಭಾರಂಭ
- ಕೈತಪ್ಪಿದ ಗೆಲುವನ್ನು ಕೊನೆವರೆಗೂ ವೀರೋಚಿತ ಹೋರಾಟದ ಮೂಲಕ ಕಸಿದ ಕೊಹ್ಲಿ

ಮೆಲ್ಬೋರ್ನ್, ಅ.23– ಭಾರೀ ರೋಚಕತೆಯಿಂದ ಕೂಡಿದ್ದ ಪಂದ್ಯದಲ್ಲಿ ಕಿಂಗ್ ಕೊಹ್ಲಿ ಅವರ ಅಬ್ಬರದ ಬ್ಯಾಟಿಂಗ್ ನೆರವಿನಿಂದ ಭಾರತ, ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನದ ವಿರುದ್ಧ 4 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.

ಈ ಗೆಲುವಿನೊಂದಿಗೆ ಟೀಂ ಇಂಡಿಯಾ ಆಸ್ಟ್ರೇಲಿಯಾದಲ್ಲಿ ನಡೆಯುತ್ತಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಶುಭಾರಂಭ ಮಾಡಿದ್ದು, ಹಬ್ಬಕ್ಕೂ ಮುನ್ನವೇ ಭಾರತೀಯರಿಗೆ ದೀಪಾವಳಿ ಹಬ್ಬದ ಉಡುಗೊರೆ ನೀಡಿದೆ.

ಪಾಕಿಸ್ತಾನ ನೀಡಿದ 160 ರನ್‌ಗಳ ಸವಾಲಿನ ಗುರಿ ಬೆನ್ನತ್ತಿದ ಭಾರತ ಕೊನೆ ಎಸೆತದಲ್ಲಿ ಗೆಲುವಿನ ನಗೆ ಬೀರಿತು. ಆದರೆ ಚೇಸಿಂಗ್ ಸುಲಭವಾಗಿರಲಿಲ್ಲ. ಇನ್ನು ಕೆಲವೇ ಬಾಲ್‌ಗಳಿರುವಂತೆ ಒಂದು ಹಂತದಲ್ಲಿ ಗೆಲುವಿನ ಅವಕಾಶ ಪಾಕಿಸ್ತಾನಕ್ಕೆ 79% ಇದ್ದರೆ, ಭಾರತಕ್ಕೆ ಕೇವಲ 21%ರಷ್ಟಿತ್ತು. ಆದರೆ ಕ್ರೀಸ್‌ನಲ್ಲಿ ಕೊಹ್ಲಿ, ಪಾಂಡ್ಯ ಇರುವುದು ಭಾರತೀಯರಲ್ಲಿ ಗೆಲುವಿನ ವಿಶ್ವಾಸ ತಂದಿತ್ತು. ಈ ನಡುವೆ ಇನ್ನೇನು ಗೆದ್ದೇ ಬಿಟ್ಟಿತು ಅನ್ನುವಷ್ಟರಲ್ಲೂ ವಿಕೆಟ್ ಪತನ ಟೀಂ ಇಂಡಿಯಾ ಆತಂಕಕ್ಕೆ ಕಾರಣವಾಗಿತ್ತು. ಆದರೆ ಕೊಹ್ಲಿಯ ದಿಟ್ಟ ಹೋರಾಟ ಭಾರತೀಯರ ದೀಪಾವಳಿ ಸಂಭ್ರಮ ಡಬಲ್ ಮಾಡಿತು.

ಭಾರತದ ಪರ ಇನ್ನಿಂಗ್ಸ್ ಆರಂಭಿಸಿದ ನಾಯಕ ರೋಹಿತ್ ಶರ್ಮಾ ಹಾಗೂ ಕನ್ನಡಿಗ ಕೆ.ಎಲ್.ರಾಹುಲ್ ತಲಾ 4 ರನ್ ಗಳಿಸಿ ಬಹುಬೇಗ ಪೆವಿಲಿಯನ್ ▶ 8ನೇ ಪುಟಕ್ಕೆ

ದೇಶಾದ್ಯಂತ ಸಂಭ್ರಮಾಚರಣೆ

ಮೆಲ್ಬೋರ್ನ್ ಕ್ರೀಡಾಂಗಣದಲ್ಲಿ ಸೇರಿದ್ದ 90 ಸಾವಿರಕ್ಕೂ ಹೆಚ್ಚು ಮಂದಿ ಅಭಿಮಾನಿಗಳ ಅಬ್ಬರದ ನಡುವೆ ಪಾಕ್ ವಿರುದ್ಧದ ರೋಚಕ ಹಣಾಹಣಿಯಲ್ಲಿ ಭಾರತ ತಂಡ ಗೆಲುವು ಸಾಧಿಸುತ್ತಿದ್ದಂತೆಯೇ ಭಾರತದಲ್ಲಿ ದೀಪಾವಳಿ ಸಂಭ್ರಮ ದ್ವಿಗುಣವಾಗಿದ್ದು, ದೇಶದೆಲ್ಲೆಡೆ ಕ್ರಿಕೆಟ್ ಅಭಿಮಾನಿಗಳು ಸಿಹಿ ಹಂಚಿ ಪಟಾಕಿ ಸಿಡಿಸಿ, ಸಂಭ್ರಮಿಸುತ್ತಿದ್ದಾರೆ. ಸಾಂಪ್ರದಾಯಿಕ ಎದುರಾಳಿ ವಿರುದ್ಧ ಸೋಲಿನ ಸುಳಿಗೆ ಸಿಲುಕಿದ್ದ ಭಾರತ ಗೆಲುವು ಸಾಧಿಸುತ್ತಿದ್ದಂತೆ ದೇಶದ ವಿವಿಧೆಡೆ ಕ್ರಿಕೆಟ್ ಅಭಿಮಾನಿಗಳು ಕುಣಿದು ಕುಪ್ಪಳಿಸಿದರು. ಅಲ್ಲದೇ ಭಾರತದ ಪರ ಘೋಷಣೆ ಕೂಗಿ ಸಂಭ್ರಮಿಸಿದರು. ಹಲವೆಡೆ ಪಟಾಕಿ ಸಿಡಿಸಿ ಸಂಭ್ರಮ ಆಚರಿಸಿದರೆ, ಇನ್ನೂ ಹಲವು ಭಾಗಗಳಲ್ಲಿ ಸಿಹಿ ಹಂಚಿ ಸಂಭ್ರಮ ಆಚರಿಸಲಾಗುತ್ತಿದೆ. ರಾಷ್ಟ್ರಧ್ವಜ ಹಿಡಿದು ಬೈಕ್ ರ್‍ಯಾಲಿ ನಡೆಸುವ ಮೂಲಕ ಕಿಂಗ್ ಕೊಹ್ಲಿ ಇಸ್ ಬ್ಯಾಕ್ ಎಂಬ ಘೋಷಣೆಗಳನ್ನು ಮೊಳಗಿಸಿದರು.



ಮೆಲ್ಬೋರ್ನ್‌ನಲ್ಲಿ ಅಪ್ಪು ಗಂಧದ ಗುಡಿ ಪೋಸ್ಟರ್!

ಭಾರತ ಹಾಗೂ ಪಾಕಿಸ್ತಾನ ನಡುವಿನ ಟಿ20 ವಿಶ್ವಕಪ್ ಪಂದ್ಯದ ನಡುವೆ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಕೊನೆಯ ಚಿತ್ರ 'ಗಂಧದ ಗುಡಿ' ಪೋಸ್ಟರ್ ರಾರಾಜಿಸಿದೆ. ಟೀಂ ಇಂಡಿಯಾ ಕ್ರಿಕೆಟ್ ಅಭಿಮಾನಿ ಸುಗುಮಾರ್ ಅಪ್ಪು 'ಗಂಧದ ಗುಡಿ' ಪೋಸ್ಟರ್ ಹಿಡಿದು ಮೆಲ್ಬೋರ್ನ್ ಕ್ರೀಡಾಂಗಣದಲ್ಲಿ ಹಾಜರಾಗಿದ್ದಾರೆ. ಇತ್ತ ಹಲವು ಅಪ್ಪು ಅಭಿಮಾನಿಗಳು ಪೋಸ್ಟರ್ ಜೊತೆ ಪೋಸ್ ನೀಡಿದ್ದಾರೆ.

ಕೊಹ್ಲಿ ಹೊತ್ತು ಕುಣಿದ ರೋಹಿತ್ ಶರ್ಮಾ

ಮೆಲ್ಬೋರ್ನ್: ಪಾಕಿಸ್ತಾನ ವಿರುದ್ಧದ ಪಂದ್ಯದಲ್ಲಿ ತಮ್ಮ ಏಕಾಂಗಿ ಹೋರಾಟ ಹಾಗೂ ಅಮೋಘ ಬ್ಯಾಟಿಂಗ್ ಮೂಲಕ ಭಾರತಕ್ಕೆ ಗೆಲುವು ತಂದುಕೊಟ್ಟ ವಿರಾಟ್ ಕೊಹ್ಲಿ ಅವರನ್ನು ನಾಯಕ ರೋಹಿತ್ ಶರ್ಮಾ ತಬ್ಬಿ ಎತ್ತಿಕೊಂಡು ಕುಣಿದು ಕುಪ್ಪಳಿಸಿದರು. ಪಂದ್ಯ ಗೆಲುವಿನ ದಡ ತಲುಪುತ್ತಿದ್ದಂತೆ ತಕ್ಷಣ ರೋಹಿತ್ ಶರ್ಮಾ ಕ್ರೀಡಾಂಗಣಕ್ಕೆ ಓಡಿ ಬಂದು ವಿರಾಟ್ ಕೊಹ್ಲಿ ಅವರನ್ನು ತಬ್ಬಿ ಎತ್ತಿಕೊಂಡು ಕುಣಿದಾಡಿದರು. ಇದೀಗ ಈ ವಿಡಿಯೊ ಫೋಟೊಗಳು ವೈರಲ್ ಆಗಿವೆ.

ನಾನು ನೋಡಿದ ಅತ್ಯುತ್ತಮ ಪಂದ್ಯ: ಇನ್ನು ಜಯದ ಬಗ್ಗೆ ತಮ್ಮ ಪತಿ ವಿರಾಟ್ ಕೊಹ್ಲಿ ಅವರ ಬಗ್ಗೆ ಹೃದಯ ತುಂಬಿ ಮಾತನಾಡಿರುವ ಕೊಹ್ಲಿ ಅವರ ಪತ್ನಿ ಅನುಷ್ಕಾ ಶರ್ಮಾ ಅವರು, ▶ 8ನೇ ಪುಟಕ್ಕೆ



ಭಲೇ ಜೋಡಿ

ಮಾತುಗಳೇ ಬರುತ್ತಿಲ್ಲ: ಕೊಹ್ಲಿ

ಮೆಲ್ಬೋರ್ನ್: ಪಾಕಿಸ್ತಾನ ವಿರುದ್ಧದ ಪಂದ್ಯದಲ್ಲಿ ಅಮೋಘ ಪ್ರದರ್ಶನ ತೋರುವ ಮೂಲಕ ವಿಶ್ವ ಕ್ರಿಕೆಟ್ ದಿಗ್ಗಜರು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಮಾಡಿದ ವಿರಾಟ್ ಕೊಹ್ಲಿ, ಇದೀಗ ಪಂದ್ಯದ ಬಗ್ಗೆ ಹೇಳಲು ಪದಗಳೇ ಸಾಲುತ್ತಿಲ್ಲ ಎಂದಿದ್ದಾರೆ.

ಪಂದ್ಯದ ಬಳಿಕ ಮಾತನಾಡಿರುವ ಕೊಹ್ಲಿ, ಪ್ರಾಮಾಣಿಕವಾಗಿ ಹೇಳುವುದಾದರೆ ನನ್ನಲ್ಲಿ ಮಾತುಗಳೇ ಇಲ್ಲ. ಇದೆಲ್ಲ ಹೇಗಾಯಿತು ಎಂಬುದೂ ಗೊತ್ತಾಗುತ್ತಿಲ್ಲ. ಜೊತೆಯಾಟದ ವೇಳೆ ಪಾಂಡ್ಯ, ಕೊನೆವರೆಗೂ ನಾವು ಆಡುತ್ತೇವೆ ಎಂಬ ನಂಬಿಕೆ ಇರಲಿ ಎಂದು ಹೇಳುತ್ತಲೇ ಇದ್ದ ಎಂದಿದ್ದಾರೆ. ಪಾಕ್ ಬೌಲರ್‌ಗಳ 150 ಕಿ.ಮೀ ವೇಗದಲ್ಲಿ ಬರುತ್ತಿದ್ದ ಎಸೆತವನ್ನು ನಿರಾಯಾಸವಾಗಿ ಎದುರಿಸಿದ ಕೊಹ್ಲಿಯ ಇನಿಂಗ್ಸ್‌ನಲ್ಲಿ 6 ಬೌಂಡರಿ ಮತ್ತು 4 ಸಿಕ್ಸರ್‌ಗಳಿದ್ದವು.

ರನ್ ಗತಿ ಹೆಚ್ಚಿಸಲು ನಿರ್ಧರಿಸಿದ್ದು ಯಾವಾಗ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಬಹುಶಃ ಶಾಹೀನ್ ಅಫ್ರಿದಿ (17ನೇ ಓವರ್) ಬೌಲಿಂಗ್ ಮಾಡಲು ಬಂದಾಗ ಮೇಲುಗೈ ಸಾಧಿಸಬೇಕು ಎಂದು ಪಾಂಡ್ಯಗೆ ಹೇಳಿದೆ. ನಮ್ಮ ಲೆಕ್ಕಾಚಾರ ತುಂಬಾ ಸರಳವಾಗಿತ್ತು. ಮೊಹಮದ್ ನವಾಜ್‌ಗೆ ಒಂದು ಓವರ್ ▶ 8ನೇ ಪುಟಕ್ಕೆ

ನನಗೂ ಮನೆ ಕೊಡಿ ಸ್ವಾಮಿ ಅಂತಾ ಬಂದ ಮಹಿಳೆಗೆ ಸಚಿವ ಸೋಮಣ್ಣ ಕಪಾಳಮೋಕ್ಷ!

- ಗುಂಡ್ಲುಪೇಟೆ ತಾಲೂಕು ಹಂಗಳ ಗ್ರಾಮದಲ್ಲಿ ಘಟನೆ
- ಸಚಿವರು ನನಗೆ ಹೊಡೆಯಲಿಲ್ಲ: ಸಂತ್ರಸ್ತೆ ಸ್ಪಷ್ಟನೆ; ಸಚಿವರ ಕ್ಷಮೆ ಯಾಚನೆ



ಗುಂಡ್ಲುಪೇಟೆ,ಅ.23–ಕಾಲಿಗೆರಗಿ ಸಮಸ್ಯೆ ನಿವೇದಿಸಿಕೊಳ್ಳಲು ಬಂದ ಮಹಿಳೆಗೆ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರೂ ಆದ ವಸತಿ ಸಚಿವ ವಿ.ಸೋಮಣ್ಣ ಕಪಾಳ ಮೋಕ್ಷ ಮಾಡಿರುವ ಪ್ರಸಂಗ ತಾಲೂಕಿನ ಹಂಗಳ ಗ್ರಾಮದಲ್ಲಿ ನಡೆದಿದ್ದು, ▶ 3ನೇ ಪುಟಕ್ಕೆ

ಕ್ಷಮೆ ಯಾಚಿಸಿದ ಸಚಿವ ಸೋಮಣ್ಣ

ಕೊಳ್ಳೇಗಾಲ,ಅ.23–ಗುಂಡ್ಲುಪೇಟೆ ತಾಲೂಕಿನ ಹಂಗಳದಲ್ಲಿ ಶನಿವಾರ ನಡೆದ ಘಟನೆ ಸಂಬಂಧ ಸಚಿವ ವಿ.ಸೋಮಣ್ಣ ಭಾನುವಾರ ಕೊಳ್ಳೇಗಾಲದಲ್ಲಿ ಕ್ಷಮೆ ಯಾಚಿಸಿದ್ದಾರೆ. ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಸಚಿವ ಸೋಮಣ್ಣ, ನನ್ನ 45 ವರ್ಷಗಳ ರಾಜಕೀಯ ಜೀವನದಲ್ಲಿ ಹಲವು ಏಳುಬೀಳುಗಳನ್ನು ಕಂಡಿದ್ದೇನೆ. ಶನಿವಾರ ಹಂಗಳದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಣ್ಣ ಅಪಚಾರವೂ ನನ್ನಿಂದ ಆಗಿಲ್ಲ. ಆದರೂ ಯಾರಿಗಾದರೂ ನನ್ನಿಂದ ನೋವಾಗಿದ್ದರೆ ಕ್ಷಮೆ ಯಾಚಿಸುತ್ತೇನೆ ಎಂದಿದ್ದಾರೆ.

ನಿವೇಶನ ಹಕ್ಕುಪತ್ರ ವಿತರಣೆ ವೇಳೆ ಆ ಹೆಣ್ಣುಮಗಳು ಪದೇ ಪದೆ ವೇದಿಕೆ ಮೇಲೆ ಬರುತ್ತಿದ್ದಳು. ತಾಯಿ ಎಷ್ಟು ಸಾರಿ ಬರುತ್ತೀಯಾ ಎಂದು ವಿಚಾರಿಸಿದೆ. ನಿನ್ನ ಸಮಸ್ಯೆ ಬಗೆಹರಿಸುತ್ತೇನೆ ಬಿಡು ಎಂದು ಕೈಯ್ಯಲ್ಲಿ ಪಕ್ಕಕ್ಕೆ ಸರಿಸಿದ್ದೇನೆಯೇ ವಿನಃ ಬೇರೆ ಉದ್ದೇಶ ನನಗಿರಲಿಲ್ಲ. ಈಗಾಗಲೇ ಆ ಮಹಿಳೆಗೆ ನಿವೇಶನ ಹಕ್ಕುಪತ್ರ ವಿತರಿಸಿ, ವಸತಿ ನಿರ್ಮಾಣಕ್ಕೆ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಹೆಣ್ಣು ಮಕ್ಕಳ ಬಗ್ಗೆ ನನಗೆ ಅಪಾರ ಗೌರವ, ಮಮಕಾರವಿದೆ. ನಾನು ಪ್ರತಿಯೊಬ್ಬ ಮಹಿಳೆಯನ್ನೂ ಅಮ್ಮ, ತಾಯಿ ಎಂದೇ ಗೌರವದಿಂದ ಮಾತನಾಡಿಸುತ್ತೇನೆ. ನನ್ನಿಂದ ಯಾರಿಗಾದರೂ ನೋವಾಗಿದ್ದರೆ ವಿಷಾದ ವ್ಯಕ್ತಪಡಿಸುತ್ತೇನೆ ಎಂದು ಸ್ಪಷ್ಟಪಡಿಸಿದ್ದಾರೆ.

SC, ST ಸಮುದಾಯಕ್ಕೆ ಸಿಎಂ ಬೊಮ್ಮಾಯಿ ದೀಪಾವಳಿ ಗಿಫ್ಟ್

ಸುಗ್ರೀವಾಜ್ಞೆಗೆ ರಾಜ್ಯಪಾಲರ ಅಂಕಿತ


ಗೆಜೆಟ್ ಪ್ರಕಟಣೆ; ಮುಂದಿನ ಅಧಿವೇಶನದಲ್ಲಿ ಮಂಡನೆ

ಬೆಂಗಳೂರು: ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಮೀಸಲಾತಿ ಹೆಚ್ಚಳ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸರ್ಕಾರ ಹೊರಡಿಸಿದ್ದ ಸುಗ್ರೀವಾಜ್ಞೆಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅಂಕಿತ ಹಾಕಿದ್ದಾರೆ. ಈ ಮೂಲಕ ಎರಡು ಸಮುದಾಯದ ಬಹು ವರ್ಷಗಳ ಬೇಡಿಕೆ ಈಡೇರಿದೆ.

ಸುಗ್ರೀವಾಜ್ಞೆಗೆ ರಾಜ್ಯಪಾಲ ಗೆಹ್ಲೋಟ್‌ರಿಂದ ಅಂತಿಮ ಮುದ್ರೆ ಬಿದ್ದಿದ್ದು, ನಾಳೆಯಿಂದಲೇ (ಅಕ್ಟೋಬರ್ 24) ಎಸ್ಸಿ, ಎಸ್ಟಿ ಸಮುದಾಯದ ಮೀಸಲಾತಿ ಹೆಚ್ಚಳವಾಗಲಿದೆ. ಮೀಸಲಾತಿ ಹೆಚ್ಚಳ ಸಂಬಂಧ ಗೆಜೆಟ್ ನೋಟಿಫಿಕೇಶನ್ ಪ್ರಕಟವಾಗಿದೆ. ಮುಂದಿನ ವಿಧಾನಮಂಡಲ ಅಧಿವೇಶನದಲ್ಲಿ ಪ್ರಸ್ತಾಪ ಮಂಡಿಸಿ, ಅನುಮೋದನೆ ನಂತರ ಶಾಶ್ವತ ಶಾಸನವಾಗಲಿದೆ. ▶ 8ನೇ ಪುಟಕ್ಕೆ

ಪ್ರವಾಸಿಗರಿಗೆ ಬೃಂದಾವನ ಮುಕ್ತ

ಚಿರತೆ ಸೆರೆಗೆ ಕಾರ್ಯಾಚರಣೆ ಮುಂದುವರಿಕೆ



ಬೃಂದಾವನದಲ್ಲಿ ಪ್ರವಾಸಿಗರ ವಿಹಾರ.



ಅರಣ್ಯ ಇಲಾಖೆ ಸಿಬ್ಬಂದಿ ಚಿರತೆ ಸೆರೆಗೆ ಬೋನು ಇಟ್ಟಿರುವುದು.


ಶ್ರೀರಂಗಪಟ್ಟಣ, ಅ.23– ಕೆಆರ್‌ಎಸ್ ಬೃಂದಾವನದಲ್ಲಿ ಚಿರತೆ ಶೋಧನೆ ನಂತರ ಇಂದು ಪ್ರವಾಸಿಗರಿಗೆ ಬೃಂದಾವನವನ್ನು ಮುಕ್ತಗೊಳಿಸಲಾಯಿತು.

ಅಣೆಕಟ್ಟೆ ಬಳಿ ಶನಿವಾರ ಚಿರತೆ ಕಾಣಿಸಿಕೊಂಡಿದ್ದರಿಂದ ಮುಂಜಾಗ್ರತಾ ಕ್ರಮವಾಗಿ ಪ್ರವಾಸಿಗರನ್ನು ನಿರ್ಬಂಧಿಸಿ, ಕೂಂಬಿಂಗ್ ಆರಂಭಿಸಲಾಗಿತ್ತು. ಅರಣ್ಯಾಧಿಕಾರಿಗಳಾದ ಮಹದೇವಸ್ವಾಮಿ ಹಾಗೂ ಅನಿತಾ ನೇತೃತ್ವದಲ್ಲಿ 20ಕ್ಕೂ ಹೆಚ್ಚು ಸಿಬ್ಬಂದಿ ಶನಿವಾರ ಸಂಜೆಯಿಂದಲೇ ಬೃಂದಾವನದ ಉತ್ತರ ಹಾಗೂ ದಕ್ಷಿಣ ದ್ವಾರಗಳು ಸೇರಿದಂತೆ ಅಣೆಕಟ್ಟೆ ಸುತ್ತಮುತ್ತ ಚಿರತೆ ಹೆಜ್ಜೆ ಗುರುತಿನ ಆಧಾರದಲ್ಲಿ ಹುಡುಕಾಟ ನಡೆಸಲಾಗಿತ್ತು.

ಇದೇ ವೇಳೆ ರಾಯಲ್ ಆರ್ಕಿಡ್ ಹೋಟೆಲ್ ಹಿಂಭಾಗದ ಅರಣ್ಯ ಪ್ರದೇಶದಲ್ಲಿ ಚಿರತೆ ಕಾಣಿಸಿಕೊಂಡ ಮಾಹಿತಿ ತಿಳಿದು ಅಲ್ಲಿಯೂ ಕೂಂಬಿಂಗ್ ನಡೆಸಲಾಯಿತು. ಅಲ್ಲಿ ಬೋನ್ ಇಟ್ಟು ಕಾರ್ಯಾಚರಣೆಯನ್ನು ಚುರುಕುಗೊಳಿಸಲಾಗಿತ್ತು. ಶನಿವಾರ ಚಿರತೆ ಪ್ರತ್ಯಕ್ಷಗೊಂಡು ಅಣೆಕಟ್ಟೆ ಬಳಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಅಲ್ಲಿನ ಸಿಬ್ಬಂದಿ ಹಾಗೂ ಪ್ರವಾಸಿಗರು ಭಯಭೀತಗೊಂಡಿದ್ದರು. ನಿರಂತರ ಹುಡುಕಾಟದಲ್ಲೂ ▶ 3ನೇ ಪುಟಕ್ಕೆ

ಕುಕ್ಕರಹಳ್ಳಿ ಕೆರೆಯ ಹೆಚ್ಚುವರಿ ನೀರು ಹೊರ ಹಾಕಲು ಹೊಸ ಸುರಕ್ಷಾ ಕಾಲುವೆ ನಿರ್ಮಾಣ

- 500 ಮೀಟರ್ ಉದ್ದವಿರಲಿದೆ ಈ ಕಾಲುವೆ
- ಈಗಾಗಲೇ ತೂಬಿನಿಂದ ಅಪಾರ ಪ್ರಮಾಣದ ನೀರು ಹೊರ ಹಾಕಲಾಗುತ್ತಿದೆ
- ಕುಕ್ಕರಹಳ್ಳಿ ಕೆರೆಯಲ್ಲಿ ತಗ್ಗಲಿದೆ ನೀರಿನ ಪ್ರಮಾಣ



ತುರ್ತು ಸಂದರ್ಭ ಹೆಚ್ಚುವರಿ ನೀರನ್ನು ಹೊರ ಹಾಕಲು ಕಾಲುವೆ ತೋಡುತ್ತಿರುವುದು.

> ಕೆರೆಯಿಂದ ಹೆಚ್ಚಿನ ನೀರು ಹೊರ ಬಿಡುತ್ತಿರುವುದರಿಂದ ಕೆಲವೆಡೆ ಜಲಾವೃತಗೊಂಡಿದ್ದ ಕೆರೆ ಆವರಣದ ವಾಯುವಿಹಾರಿ ಮಾರ್ಗ ಯಥಾಸ್ಥಿತಿಗೆ ಬಂದಿದೆ. ಇದರಿಂದ ವಾಯುವಿಹಾರಿಗಳಿಗೆ ಅವಕಾಶ ನೀಡಲಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಯುಜಿಸಿ ಕೇಂದ್ರದ ಬಳಿ ಚಾಚಿಕೊಂಡಿದ್ದ ಕೆರೆ ಹಿನ್ನೀರು ಹಂತ–ಹಂತವಾಗಿ ಇಳಿಮುಖವಾಗುತ್ತಿದ್ದು, ಕೆರೆ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

ಮೈಸೂರು,ಅ.23(ಎಂಟಿವೈ)– ಮೈಸೂರಲ್ಲಿ ಸುರಿದ ಭಾರೀ ಮಳೆಯಿಂದ ಕುಕ್ಕರಹಳ್ಳಿ ಕೆರೆಯಲ್ಲಿ ಅಪಾಯ ಮಟ್ಟಕ್ಕಿಂತ ಹೆಚ್ಚಿನ ನೀರು ಸಂಗ್ರಹವಾಗಿ ಆತಂಕವುಂಟು ಮಾಡಿದ್ದ ಹಿನ್ನೆಲೆಯಲ್ಲಿ ಇದೀಗ ಕೆರೆಯಿಂದ ಹೆಚ್ಚುವರಿ ನೀರು ಸರಾಗವಾಗಿ ಹರಿದು ಹೋಗಲು ಹೊಸದಾಗಿ ಕಾಲುವೆಯೊಂದನ್ನು ನಿರ್ಮಿಸಲಾಗುತ್ತಿದೆ.

ಎಡೆಬಿಡದೆ ಸುರಿದ ಮಳೆಯಿಂದ ಕೆರೆಗೆ ಹೆಚ್ಚಿನ ಪ್ರಮಾಣದ ನೀರು ಹರಿದು ಬಂದಿತ್ತು. ಕೆರೆಯಲ್ಲಿ ನೀರು ಅಪಾಯ ಮಟ್ಟ ತಲುಪುತ್ತಿದ್ದಂತೆ ತೂಬಿನ(ಕ್ರೆಸ್ಟ್ ಗೇಟ್) ಮೂಲಕ ಹೆಚ್ಚುವರಿ ನೀರನ್ನು ಕೆರೆಯಿಂದ ಹೊರಕ್ಕೆ ಬಿಡಲಾಗಿತ್ತು ಹಲವು ವರ್ಷಗಳಿಂದ ತೂಬಿನ ನಿರ್ವಹಣೆ ಮಾಡದ ಕಾರಣ ಕೆರೆಯಿಂದ ಹೆಚ್ಚುವರಿ ನೀರನ್ನು ಹೊರ ಹಾಕಲು ಪರದಾಡಬೇಕಾಯಿತು. ಎರಡು ದಿನಗಳಿಂದ ಸಾಕಷ್ಟು ಕಸರತ್ತು ನಡೆಸಿ, ಕೊನೆಗೂ ತೂಬು ದುರಸ್ತಿಯಾಗಿ, ಈಗ ಕಾರ್ಯ ನಿರ್ವಹಿಸುತ್ತಿದ್ದು, ಕೆರೆಯಿಂದ ನೀರನ್ನು ಮೈಸೂರು–ಬೋಗಾದಿ ರಸ್ತೆಗೆ ಹೊಂದಿಕೊಂಡಂತಿರುವ ಚರಂಡಿ ಮೂಲಕ ರಾಜಕಾಲುವೆಗೆ ಹರಿಸಲಾಗುತ್ತಿದೆ. ಎರಡು ದಿನದಿಂದ ನೀರು ನಿರಂತರವಾಗಿ ಕೆರೆಯಿಂದ ಹೊರ ಹರಿಯುತ್ತಿರುವುದು ಹಾಗೂ ಕೆರೆಗೆ ಒಳಹರಿವು ಕಡಿತವಾಗಿರುವುದರಿಂದ ಕೆರೆ ಅಪಾಯದ ಆತಂಕ ದೂರಾಗಿದೆ.

ತುರ್ತು ಚಾನಲ್ ನಿರ್ಮಾಣ: ಮುಂದೆಯೂ ಮಳೆ ಬಂದರೆ ಕೆರೆಗೆ ಭಾರೀ ಪ್ರಮಾಣದ ನೀರು ಹರಿದು ಬರುವ ಸಾಧ್ಯತೆ ಇರುವುದರಿಂದ ಕೆರೆಯನ್ನು ಅಪಾಯದಿಂದ ಪಾರು ಮಾಡುವ ನಿಟ್ಟಿನಲ್ಲಿ ಕುಕ್ಕರಹಳ್ಳಿ ಕೆರೆ ಏರಿಯುದ್ದಕ್ಕೂ ಹೊಸದಾಗಿ ಕಾಲುವೆಯೊಂದನ್ನು ತೋಡಲಾಗುತ್ತಿದೆ. ಕೆರೆಯಲ್ಲಿ ಹೆಚ್ಚಿನ ನೀರು ಸಂಗ್ರಹವಾದರೆ, ಅದನ್ನು ಹೊರ ಹಾಕಲು ಹೊಸದಾಗಿ ತೋಡಿರುವ ಚಾನಲ್ ಸಹಕಾರಿಯಾಗಲಿದೆ. ಕೆರೆ ಭಾಗದ ಪ್ರದೇಶ ಇಳಿಜಾರಾಗಿರುವ ಸುರಕ್ಷಿತ ಜಾಗವನ್ನು ಅವಲೋಕಿಸಿ, ರೈಲ್ವೆ ಸೇತುವೆ ಗೇಟ್ ದಿಕ್ಕಿಗೆ ಸ್ಥಳ ಗುರುತಿಸಿ ಕಾಲುವೆ ತೋಡಲಾಗಿದೆ.





ಕುಕ್ಕರಹಳ್ಳಿ ಕೆರೆಯ ತೂಬು ಸರಿಪಡಿಸಲಾಗಿದ್ದು, ಕೆರೆ ಸುರಕ್ಷತೆ ದೃಷ್ಟಿಯಿಂದ ಅಪಾರ ಪ್ರಮಾಣದ ಹೆಚ್ಚುವರಿ ನೀರು ಹೊರ ಬಿಡಲಾಗುತ್ತಿದೆ.

ಇದರಿಂದ ಕೆರೆ ಏರಿಯಲ್ಲಿ ಎರಡು ಕಡೆ ಪಾದಚಾರಿ ಮಾರ್ಗಕ್ಕೆ ಅಡ್ಡಲಾಗಿ ದೊಡ್ಡ ಗಾತ್ರದ ಪೈಪ್ ಅಳವಡಿಸಲಾಗುತ್ತಿದೆ.

ಹೆಚ್ಚುವರಿ ನೀರು ಸರಾಗವಾಗಿ ಹರಿದು ಹೋಗಲೆಂಬ ಕಾರಣಕ್ಕೆ ಹೊಸ ಕಾಲುವೆಯನ್ನು ಕುಕ್ಕರಹಳ್ಳಿ ಕೆರೆ ಆವರಣದಲ್ಲಿರುವ ಕುವೆಂಪು ವನದ ಮುಂಭಾಗದ ಖಾಲಿ ಜಾಗ ಬಳಸಿಕೊಂಡು ಬೋಗಾದಿ ರಸ್ತೆಯ ಬದಿಯಲ್ಲಿರುವ ಹಳೆ ತೂಬಿನವರೆಗೂ ತೋಡಲಾಗಿದೆ 18 ಅಡಿ ಆಳ, 5 ಅಡಿ ಅಗಲದ ಕಾಲುವೆ ತೋಡಲಾಗಿದ್ದು, ವಾಯುವಿಹಾರಿಗಳ ಸುರಕ್ಷತೆಯ ದೃಷ್ಟಿಯಿಂದ ಹೊಸ ಕಾಲುವೆ ಉದ್ದಕ್ಕೂ ಪಟ್ಟಿಯನ್ನು ಕಟ್ಟಿ, ಎಚ್ಚರಿಕೆ ನೀಡಲಾಗಿದೆ. ▶ 8ನೇ ಪುಟಕ್ಕೆ

ವಿಜಯ ವಿಠಲದಲ್ಲಿ ಪೇಜಾವರ ಶ್ರೀಗಳ ಪುತ್ಥಳಿ ಅನಾವರಣ



ಮೈಸೂರಿನ ಸರಸ್ವತಿಪುರಂನಲ್ಲಿರುವ ವಿಜಯ ವಿಠಲ ವಿದ್ಯಾಸಂಸ್ಥೆಗಳಲ್ಲಿ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಪುತ್ಥಳಿಯನ್ನು ಪೇಜಾವರ ಅಧೋಕ್ಷಜ ಮಠದ ಶ್ರೀಗಳಾದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಭಾನುವಾರ ಅನಾವರಣಗೊಳಿಸಿದರು. ಕಾರ್ಯಕ್ರಮದಲ್ಲಿ ವಿಜಯ ವಿಠಲ ವಿದ್ಯಾಸಂಸ್ಥೆಗಳ ಅಧ್ಯಕ್ಷರಾದ ಆರ್.ಗುರು, ಗೌರವ ಕಾರ್ಯದರ್ಶಿ ಆರ್.ವಾಸುದೇವ ಭಟ್, ಟ್ರಸ್ಟಿಗಳಾದ ರವಿಕುಮಾರ್, ಎಸ್.ಫಣಿರಾಜ್, ಕೆ.ಎನ್.ಪ್ರಸಾದ್, ವಿಶ್ವನಾಥ್ ಮತ್ತು ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು. ಆಶೀರ್ವಚನದ ನಂತರ ಸ್ವಾಮೀಜಿಯವರು ಸಂಸ್ಥೆಯ ನೂತನ ಸಭಾಂಗಣದಲ್ಲಿ ಶ್ರೀರಾಮವಿಠ್ಠಲ ದೇವರ ಸಂಸ್ಥಾನ ಪೂಜೆಯನ್ನು ನೆರವೇರಿಸಿದರು.

ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಇಂದು ಬೆಳಕಿನ ಹಬ್ಬ

ಮೈಸೂರು,ಅ.23–ಅಂತರರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾ ಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಯಾದವಗಿರಿ ಜ್ಞಾನ ಪ್ರಕಾಶ ಭವನದಲ್ಲಿ ನಾಳೆ (ಸೋಮವಾರ) ಸಂಜೆ 6.30ಕ್ಕೆ ಬೆಳಕಿನ ಹಬ್ಬ–2022 ಸಡಗರ, ಸಂಭ್ರಮದಿಂದ ಆಚರಣೆ ಮಾಡಲಾಗುವುದು ಎಂದು ಸಂಸ್ಥೆಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ಜಯಂತೀಜಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ದಿವ್ಯ ಸಾನ್ನಿಧ್ಯವನ್ನು ಅಬು ಪರ್ವತ ಮಾಧ್ಯಮ ವಿಭಾಗದ ಅಧ್ಯಕ್ಷರಾದ ರಾಜಯೋಗಿ ಬ್ರಹ್ಮಾಕುಮಾರ ಕರುಣಾಜಿ ವಹಿಸಲಿದ್ದಾರೆ. ಮೈಸೂರು ಉಪವಿಭಾಗದ ಈಶ್ವರೀಯ ವಿಶ್ವವಿದ್ಯಾಲಯದ ಮುಖ್ಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜಿ ಆಶೀರ್ವಚನ ನೀಡಲಿದ್ದಾರೆ. ಅಪರ ಜಿಲ್ಲಾಧಿಕಾರಿ ಡಾ.ಮಂಜುನಾಥಸ್ವಾಮಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮೇಯರ್ ಶಿವಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲಾ ಕಾರಾಗೃಹದ ಅಧೀಕ್ಷಕಿ ಕೆ.ಸಿ.ದಿವ್ಯಶ್ರೀ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಕೆ.ಆರ್.ಕ್ಷೇತ್ರದಿಂದ ಎನ್.ಭಾಸ್ಕರ್‌ಗೆ ಕಾಂಗ್ರೆಸ್ ಟಿಕೆಟ್ ನೀಡಲು ಮನವಿ

ಮೈಸೂರು, ಅ.23–ಮೈಸೂರು ನಗರದ ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು 40 ಸಾವಿರಕ್ಕೂ ಹೆಚ್ಚು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಾಂಗವಿದ್ದು, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ದಲಿತ ಸಮುದಾಯಕ್ಕೆ ಸೇರಿರುವ ಕೆಪಿಸಿಸಿ ಮಾಜಿ ಸದಸ್ಯರೂ ಹಾಗೂ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್‌ಗೆ ಟಿಕೆಟ್ ನೀಡುವುದರೊಂದಿಗೆ ದಲಿತ ಸಮುದಾಯವನ್ನು ಪ್ರೋತ್ಸಾಹಿಸಬೇಕೆಂದು ಕರ್ನಾಟಕ ದಲಿತ ವೇದಿಕೆ ಮೈಸೂರು ವಿಭಾಗ ಮನವಿ ಮಾಡಿದೆ. ಎನ್.ಭಾಸ್ಕರ್, ಕಾಂಗ್ರೆಸ್ ಪಕ್ಷದಲ್ಲಿ ಸುಮಾರು 20 ವರ್ಷಗಳಿಂದ ಪಕ್ಷದ ವಿವಿಧ ಘಟಕಗಳ ಪದಾಧಿಕಾರಿಯಾಗಿ ಸೇವೆ ಸಲ್ಲಿಸಿ, ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿದ್ದಾರೆ. ಈ ಭಾಗದಲ್ಲಿ ಭಾಸ್ಕರ್, ಎಲ್ಲಾ ಜಾತಿ, ಜನಾಂಗದ ಮುಖಂಡರ ವಿಶ್ವಾಸಕ್ಕೆ ಪಾತ್ರರಾಗಿದ್ದು, ಇವರಿಗೆ ಕಾಂಗ್ರೆಸ್ 2023ರ ಚುನಾವಣೆಯಲ್ಲಿ ಟಿಕೆಟ್ ನೀಡಬೇಕೆಂದು ವೇದಿಕೆ ಮೈಸೂರು ವಿಭಾಗದ ಅಧ್ಯಕ್ಷ ನಾಗನಹಳ್ಳಿ ರೇವಣ್ಣ, ನಾಗರಿಕ ಹಕ್ಕು ರಕ್ಷಣಾ ಸಮಿತಿ ರಾಜ್ಯಾಧ್ಯಕ್ಷ ಗೋವಿಂದರಾಜು ಮನವಿ ಮಾಡಿದ್ದಾರೆ.

ಅ.26ರಂದು ಗ್ರಹಣ ಶಾಂತಿ ಹೋಮ

ಮೈಸೂರು,ಅ.23–ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಅ.25ರ ಮಂಗಳವಾರ ಕೇತುಗ್ರಸ್ತ ಸೂರ್ಯ ಗ್ರಹಣ ಸಂಭವಿಸಲಿದ್ದು, ಈ ಹಿನ್ನೆಲೆಯಲ್ಲಿ ಅ.26ರಂದು ಗ್ರಹಣ ಶಾಂತಿ ಹೋಮವನ್ನು ಏರ್ಪಡಿಸಲಾಗಿದೆ.

ಚಿತ್ತ, ಸ್ವಾತಿ, ವಿಶಾಖ, ಆರಿದ್ರಾ, ಶತಭಿಷ ನಕ್ಷತ್ರಗಳು ಹಾಗೂ ತುಲಾ, ಮೀನಾ, ವೃಶ್ಚಿಕ, ಕರ್ಕಾಟಕ, ಕನ್ಯಾ ರಾಶಿಯವರಿಗೆ ಶಾಂತಿಯೋಗ ಬೇಕಿದ್ದು, ಅ.26ರಂದು ಬೆಳಗ್ಗೆ 10 ಗಂಟೆಗೆ ಮೈಸೂರು ದಿವಾನ್ಸ್ ರಸ್ತೆಯಲ್ಲಿರುವ ಅಮೃತೇಶ್ವರ ದೇವಸ್ಥಾನದಲ್ಲಿ ಶಾಂತಿ ಹೋಮಗಳನ್ನು ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ.ಸಂಖ್ಯೆ 9535413361, 9886678091 ಸಂಪರ್ಕಿಸುವುದು.

ಮುತಾಲಿಕ್ ವಿರುದ್ಧ ಶಿಸ್ತು ಕ್ರಮಕ್ಕೆ ಆಗ್ರಹ


ಮೈಸೂರು,ಅ.23–ಸಮಾಜದ ಸ್ವಾಸ್ಥ್ಯ ಹಾಳು ಮಾಡುವ, ಶಾಂತಿ ಕದಡುವ ಹೇಳಿಕೆ ನೀಡುತ್ತಿರುವ ಶ್ರೀರಾಮಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಲ್ಪಸಂಖ್ಯಾತರ ವಿಭಾಗದ ರಾಜ್ಯ ಸಂಘಟನಾ ಕಾರ್ಯದರ್ಶಿ ಸೈಯದ್ ಫರೂಖ್ ಆಗ್ರಹಿಸಿದ್ದಾರೆ.

ಭಾರತ ಸರ್ವ ಜನಾಂಗದ ಶಾಂತಿಯ ತೋಟ, ಜಾತ್ಯತೀತ ರಾಷ್ಟ್ರ ಎಂಬುದನ್ನು ಮರೆತು ಮುಸಲ್ಮಾನರಲ್ಲಿ ಸಾಮಗ್ರಿ ಖರೀದಿಸಬೇಡಿ ಎಂದು ಹೇಳುವುದು ಸರಿಯಲ್ಲ. ವಿಧಾನಸಭೆ ಚುನಾವಣೆ ಸಮೀಪಿಸುತ್ತಿದ್ದಾಗ ಇಂತಹ ಹೇಳಿಕೆಗಳಿಂದ ಗಂಭೀರ ಪರಿಣಾಮಗಳು ಉಂಟಾಗಬಹುದು. ಆದ್ದರಿಂದ ಇವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸೈಯದ್ ಫರೂಖ್ ಆಗ್ರಹಿಸಿದ್ದಾರೆ.

ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಅರ್ಜಿ ಆಹ್ವಾನ

ಮೈಸೂರು, ಅ.23– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಬಿ, 3ಎ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಮತ್ತು ಇತರೆ ಜನಾಂಗಗಳಿಗೆ ಸೇರಿದ ಮೆಟ್ರಿಕ್ ನಂತರದ ಸಾಮಾನ್ಯ ಪದವಿ ಕೋರ್ಸ್ ವಿದ್ಯಾರ್ಥಿಗಳಿಗೆ 2022–23 ನೇ ಸಾಲಿಗೆ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ನವೆಂಬರ್ 10ರ ಒಳಗಾಗಿ ಅರ್ಜಿಯನ್ನು ಸಲ್ಲಿಸಲು ತಿಳಿಸಿದೆ. ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ವಯೋಮಿತಿ 16 ರಿಂದ 26 ವರ್ಷದೊಳಗಿರಬೇಕು. ವಿದ್ಯಾರ್ಥಿಗಳು ಪೋಷಕರ ಆದಾಯ ಮಿತಿಯು ಪ್ರವರ್ಗ–1 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ 2.50 ಲಕ್ಷದೊಳಗಿರಬೇಕು. ಪ್ರವರ್ಗ–2ಎ, 2ಬಿ, 3ಬಿ, 3ಎ, ಇತರ ಹಿಂದುಳಿದ ವರ್ಗ ಇತರೆ 1 ಲಕ್ಷದೊಳಗಿರಬೇಕು. ಅರ್ಜಿ ಸಲ್ಲಿಸುವ ಆಸಕ್ತ ವಿದ್ಯಾರ್ಥಿಗಳು ಇಲಾಖೆಯ ವೆಬ್‌ಸೈಟ್ www.bcwd.karnataka.gov.in ಸಂಪರ್ಕಿಸಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳ ಆದಲ್ಲಿ bcwd.hostels @karnataka.gov.in ಇ–ಮೇಲ್ ಮುಖಾಂತರ ಅಥವಾ ಜಿಲ್ಲಾ ತಾಲೂಕು ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸಬಹುದು. ತಾಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿ ನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ www.bcwd.karnataka.gov.in ನೋಡಬಹುದು. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 080–8050370006 ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ



ಉದಯಕುಮಾರ್

ಮೈಸೂರು,ಅ.23–ನಗರದ ಮೇಟಗಳ್ಳಿಯ ನಿವಾಸಿ ಉದಯಕುಮಾರ್ (42) ಭಾನುವಾರ ಬೆಳಗ್ಗೆ ನಿಧನರಾದರು. ಮೃತರಿಗೆ ಪತ್ನಿ, ಓರ್ವ ಪುತ್ರ, ಪುತ್ರಿ ಇದ್ದಾರೆ. ಇವರ ಅಂತ್ಯಸಂಸ್ಕಾರ ಭಾನುವಾರ ಮಧ್ಯಾಹ್ನ ಬನ್ನಿಮಂಟಪದ ಜೋಡಿ ತೆಂಗಿನಮರದ ರಸ್ತೆಯಲ್ಲಿರುವ ಸ್ಮಶಾನದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಾಂಪ್ರದಾಯಿಕ 'ದೂರ'ದ ದೀಪಾವಳಿ ದೀಪಗಳ ದೂರ ಮಾಡುತ್ತಿರುವ ತೋರಿಕೆ ದೀಪಗಳು

- ಸ್ಥಳೀಯವಾಗಿ ತಯಾರಾದ ದೀಪಗಳ ಬೆಳಗಲು ನಮ್ಮ ಜನರಲ್ಲಿ ನಿರಾಸಕ್ತಿ
- ರಾಸಾಯನಿಕ ವಸ್ತು ಬಳಸಿ ಯಂತ್ರದಿಂದ ತಯಾರಾಗುವ ದೀಪಗಳ ಮೇಲೇ ಮೋಹ
- ಕುಂಬಾರಿಕೆ ಕುಲಕಸುಬುದಾರರ ಕೈಯಲ್ಲಿ ಅರಳುವ ದೀಪಗಳಿಗೆ ಬೇಡಿಕೆ ಕುಸಿತ

ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು,ಅ.23–ಕೊರೊನಾ ಹಿನ್ನೆಲೆಯಲ್ಲಿ ಎರಡು ವರ್ಷದ ನಂತರ ಬೆಳಕಿನ ಹಬ್ಬ ದೀಪಾವಳಿಯನ್ನು ಸಂಭ್ರಮದಿಂದ ಆಚರಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದ್ದು, ಪ್ರತಿವರ್ಷ ದೀಪಾವಳಿ ಹಬ್ಬಕ್ಕಾಗಿ ಮಣ್ಣಿನ ದೀಪ ಮಾಡುತ್ತಿದ್ದ ಕುಂಬಾರರ ಕುಲಕಸುಬಿಗೆ ಹೊರ ರಾಜ್ಯಗಳ ಮೌಲ್ಡ್ ದೀಪಗಳ ಪೈಪೋಟಿ ಭಾರೀ ಹೊಡೆತ ನೀಡಿದೆ.



ದೂರ ಗ್ರಾಮದಲ್ಲಿ ದೀಪ ತಯಾರಿಕೆಯಲ್ಲಿ ಮಗ್ನರಾಗಿರುವ ಸಂಘದ ಸದಸ್ಯರು.







ಕಳೆದ ಎರಡು ದಶಕಗಳಿಂದ ಮೈಸೂರು, ಚಾಮರಾಜನಗರ ಜಿಲ್ಲೆಯ ವಿವಿಧೆಡೆ ದೀಪಾವಳಿ ಹಬ್ಬಕ್ಕಾಗಿ ಮಣ್ಣಿನ ದೀಪ ತಯಾರಿಸಿ ಸರಬರಾಜು ಮಾಡುತ್ತಿದ್ದ ಮೈಸೂರು ತಾಲೂಕಿನ ಜಯಪುರ ಹೋಬಳಿ ದೂರ ಗ್ರಾಮದ ಕುಂಬಾರ ಕುಶಲ ಕೈಗಾರಿಕಾ ಸಂಘದ ಮಣ್ಣಿನ ದೀಪಗಳಿಗೆ ಬೇಡಿಕೆ ಗಣನೀಯ ಪ್ರಮಾಣದಲ್ಲಿ ಕುಸಿದಿದೆ. ಪ್ರತಿ ವರ್ಷ 4–5 ಲಕ್ಷ ಮಣ್ಣಿನ ದೀಪ(ಹಣತೆ) ಸರಬರಾಜು ಮಾಡುತ್ತಿದ್ದ ಈ ಸಂಘದ ಸದಸ್ಯರು ಈ ಬಾರಿ 40–50 ಸಾವಿರ ಮಣ್ಣಿನ ದೀಪ ತಯಾರಿಸಿ, ಬೇಡಿಕೆ ಇದ್ದೆಡೆ ಸರಬರಾಜು ಮಾಡಿದ್ದಾರೆ.

ಕೊರೊನಾ ಹಿನ್ನೆಲೆಯಲ್ಲಿ ಎರಡು ವರ್ಷ ಮಣ್ಣಿನ ಹಣತೆ ತಯಾರಿಸುವ ಕುಂಬಾರ ಕುಲಕಸುಬುದಾರರಿಗೆ ಕೆಲಸವೇ ಇರಲಿಲ್ಲ. ಈ ಬಾರಿ ಅದ್ಧೂರಿ ದೀಪಾವಳಿ ಆಚರಿಸುತ್ತಿರುವುದು ಹರ್ಷ ತಂದಿತ್ತು. ಹೆಚ್ಚಿನ ಬೇಡಿಕೆ ಬರಬಹುದು ಎಂಬ ನಿರೀಕ್ಷೆಯಿತ್ತು. ಆದರೆ, ನಿರೀಕ್ಷೆಗಳು ಹುಸಿಯಾಗಿದ್ದು, ಮೌಲ್ಡ್ ದೀಪಗಳ ಮಾರಾಟದಿಂದ ಕುಲಕಸುಬಿನ ಮೇಲೆ ಅಡ್ಡ ಪರಿಣಾಮ ಬೀರಿರುವುದರಿಂದ ಕುಂಬಾರಿಕೆ ಮಾಡುವವರು ಆತಂಕ ಪಡುವಂತಾಗಿದೆ.

ಅಂದ ಚೆಂದಕ್ಕೆ ಮರುಳಾಗುತ್ತಾರೆ: ತಮಿಳುನಾಡು, ಬೆಂಗಳೂರು ಸೇರಿದಂತೆ ವಿವಿಧೆಡೆ ಮೌಲ್ಡ್(ಅಚ್ಚು)ನಿಂದ ತಯಾರಿಸಿರುವ ಅಲಂಕಾರಿಕ ದೀಪಗಳು ಜನರನ್ನು ಆಕರ್ಷಿಸುತ್ತಿವೆ. ಬರೀ ತೋರಿಕೆಗೆ ಮಾರುಹೋಗಿ ಹೆಚ್ಚು ಹಣ ನೀಡಿ ಜನ ಖರೀದಿಸುತ್ತಿದ್ದಾರೆ. ಆಕರ್ಷಕ ಪ್ಯಾಕಿಂಗ್‌ನಲ್ಲಿ ಅಲಂಕಾರಿಕ ದೀಪಗಳನ್ನು ಸರಬರಾಜು ಮಾಡಲಾಗಿದೆ. ನಾಜೂಕಾದ ದೀಪಗಳ ಮುಂದೆ ಗುಡಿ ಕೈಗಾರಿಕೆಯಲ್ಲಿ ತಯಾರಿಸಿದ ಮಣ್ಣಿನ ದೇಸೀ ದೀಪಗಳಿಗೆ ಬೇಡಿಕೆ ಕುಸಿಯುತ್ತಿದೆ. ಇನ್ನಾದರೂ ಕುಂಬಾರರು ತಯಾರಿಸುತ್ತಿರುವ ಮಣ್ಣಿನ ದೀಪಗಳ ಬಳಕೆ ಹೆಚ್ಚಿಸಲು ಕ್ರಮ ಕೈಗೊಳ್ಳುವ ಅಗತ್ಯವಿದೆ.

ಕೈ ಹಿಡಿದಿದ್ದ ಸಹಕಾರ ಸಂಘ: ಬೇಡಿಕೆ ಕುಸಿತ, ಶೂನ್ಯ ಸಂಪಾದನೆ ಹೀಗೆ ಹಲವು ಸಮಸ್ಯೆ ಹಾಗೂ ಸವಾಲು ಎದುರಿಸಲಾಗದೇ ಕುಲಕಸುಬಿಗೆ ತಿಲಾಂಜಲಿ ಹೇಳುತ್ತಿರುವ ಸಂದರ್ಭದಲ್ಲಿ ದೂರ ಗ್ರಾಮದಲ್ಲಿ 14 ಕುಟುಂಬಗಳು ಒಂದೆಡೆ ಸೇರಿ, ಕುಲಕಸುಬು ಕುಂಬಾರಿಕೆ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗುವ ಸಲುವಾಗಿ ಮೂರು ದಶಕದ ಹಿಂದೆ ದೂರ ಗ್ರಾಮದಲ್ಲಿ 'ಕುಂಬಾರ ಕುಶಲ ಕೈಗಾರಿಕಾ ಸಹಕಾರ ಸಂಘ' ಸ್ಥಾಪಿಸಲಾಗಿದೆ. ಸಂಘಕ್ಕೆ ಗ್ರಾಮದ ಕುಂಬಾರ ಸಮುದಾಯದ ಹಿರಿಯರು ಮುಕ್ಕಾಲು ಗುಂಟೆ ಭೂಮಿಯನ್ನು ದಾನವಾಗಿ ನೀಡಿದ್ದು, ಅದರಲ್ಲಿ ಖಾದಿ ಬೋರ್ಡ್‌ನಿಂದ ಸಾಲ ಪಡೆದು ಶೆಡ್ ನಿರ್ಮಿಸಲಾಗಿದೆ. ಇಲ್ಲಿ 14 ಕುಟುಂಬಗಳ ಸದಸ್ಯರು ದೀಪ ಸೇರಿದಂತೆ ಇನ್ನಿತರ ಮಣ್ಣಿನ ಉತ್ಪನ್ನ ತಯಾರಿಸುತ್ತಿದ್ದಾರೆ.

ಒಲೆಗೂಡಲ್ಲಿ ಬೇಯಿಸಲಾಗುತ್ತದೆ: ದೀಪಾವಳಿ ಹಬ್ಬಕ್ಕೆ ಎರಡು ತಿಂಗಳ ಮುನ್ನವೇ ದೀಪ ತಯಾರಿಕೆ ಆರಂಭವಾಗುತ್ತದೆ. ನಾಲ್ಕು ಪ್ರತ್ಯೇಕ ಗಾತ್ರದ, ವಿವಿಧ ವಿನ್ಯಾಸದ ದೀಪಗಳನ್ನು ತಯಾರಿಸಲಾಗುತ್ತದೆ. ಜೇಡಿಮಣ್ಣಿನಿಂದ ತಯಾರಿಸಿದ ದೀಪವನ್ನು 10 ದಿನ ಒಣಗಿಸಲಾಗುತ್ತದೆ. ಆ ನಂತರ ಒಲೆಗೂಡಿನಲ್ಲಿ ತೆಂಗಿನ ಗರಿ ಹಾಗೂ ತೆಂಗಿನಮಟ್ಟೆ ಬಳಸಿ ಮಣ್ಣಿನ ದೀಪವನ್ನು 5–6ಗಂಟೆ ಬೇಯಿಸಲಾಗುತ್ತದೆ. ಮರುದಿನ ಒಲೆಗೂಡನ್ನು ತೆರೆಯಲಾಗುತ್ತದೆ. ಅದರೊಳಗಿರುವ ದೀಪವನ್ನು ಗಾತ್ರ, ವಿನ್ಯಾಸಕ್ಕನುಗುಣವಾಗಿ ವಿಂಗಡಿಸಿ, ಜೋಡಿಸಲಾಗುತ್ತದೆ. ಚಿಕ್ಕ ದೀಪವೊಂದಕ್ಕೆ 1 ರೂ., 2 ರೂ., ದೊಡ್ಡ ದೀಪಗಳಿಗೆ 6 ರೂ, 8 ರೂ., ಅಯ್ಯಪ್ಪಸ್ವಾಮಿ ದೀಪಕ್ಕೆ 10 ರೂ. ದರ ನಿಗದಿ ಮಾಡಲಾಗಿದೆ. ಮಾರಾಟಗಾರರು ದೂರ ಗ್ರಾಮಕ್ಕೆ ಬಂದು ದೀಪಗಳನ್ನು ಕೊಂಡೊಯ್ಯುತ್ತಾರೆ.

30 ವರ್ಷದಿಂದಲೂ ದೀಪ ತಯಾರಿಸುತ್ತಿದ್ದೇವೆ

"ಕುಂಬಾರಿಕೆ ಕುಲಕಸುಬು ನಮ್ಮದು. ಮೂರು ತಲೆಮಾರುಗಳಿಂದಲೂ ಮಾಡಿಕೊಂಡು ಬರುತ್ತಿದ್ದೇವೆ. ನಾಲ್ಕು ಬಗೆಯ, ಬೇರೆ ಬೇರೆ ಗಾತ್ರ ಹಾಗೂ ವಿವಿಧ ವಿನ್ಯಾಸದ ದೀಪಗಳನ್ನು ತಯಾರಿಸುತ್ತಿದ್ದೇವೆ. ಮೊದಲು ಮನೆಗಳ ನಾಡಹಂಚು ತಯಾರಿಸುತ್ತಿದ್ದೆವು. ಆ ನಂತರ ಹೂ ಕುಂಡ, ಮಡಿಕೆ ತಯಾರಿಸುತ್ತಿದ್ದೆವು. ಆದರೆ ಸಿಮೆಂಟ್ ಹಾಗೂ ಪ್ಲಾಸ್ಟಿಕ್ ಹೂ ಕುಂಡಗಳು ಮಾರುಕಟ್ಟೆಗೆ ಬಂದಿರುವುದರಿಂದ ಮಣ್ಣಿನಿಂದ ತಯಾರಿಸಿರುವ ಹೂ ಕುಂಡಕ್ಕೆ ಬೇಡಿಕೆ ಕಡಿಮೆ ಇದೆ. ದೀಪಾವಳಿ ಹಾಗೂ ಕಾರ್ತಿಕ ಮಾಸದಲ್ಲಿ ಬಳಸುವ ಮಣ್ಣಿನ ದೀಪಕ್ಕೂ ಈಗ ಮೌಲ್ಡ್ ದೀಪಗಳು ಸಂಚಕಾರ ತಂದಿವೆ. ಜನರು ಸ್ಥಳೀಯವಾಗಿ ಉತ್ಪಾದನೆಯಾಗುವ ದೀಪವನ್ನು ಬಳಸಲು ಮುಂದಾಗಬೇಕು. **–ಸೋಮಣ್ಣ, ಕುಂಬಾರಿಕೆ ಕಸುಬುದಾರ, ದೂರ**

ಕುಂಬಾರಿಕೆ ಕುಲ ಕಸುಬಿಗೆ ಮನ್ನಣೆ ನೀಡಬೇಕು

"ಪ್ರಸ್ತುತ ಸಂದರ್ಭದಲ್ಲಿ ಕುಂಬಾರ ಕುಲಕಸುಬು ಮುಂದುವರೆಸಲು ಕಷ್ಟವಾಗುತ್ತಿದೆ. ದೂರ ಗ್ರಾಮದಲ್ಲಿ ಈ ಹಿಂದೆ 50ಕ್ಕೂ ಹೆಚ್ಚು ಕುಟುಂಬಗಳು ಈ ವೃತ್ತಿ ಮಾಡುತ್ತಿದ್ದರು. ಹೊರಗಿನಿಂದ ಬರುವ ಬರೀ ತೋರಿಕೆ ವಸ್ತುಗಳಿಗೆ ಬೇಡಿಕೆ ವ್ಯಕ್ತವಾಗುತ್ತಿರುವುದರಿಂದ ನಮ್ಮ ನೈಜ ಉತ್ಪನ್ನಗಳಿಗೆ ಬೇಡಿಕೆ ಕಡಿಮೆಯಾಗಿದೆ. ಇದರಿಂದ ಹಲವು ಮಂದಿ ಕುಲಕಸುಬಿಗೆ ಗುಡ್‌ಬೈ ಹೇಳಿದ್ದಾರೆ. ನಾವು 14 ಕುಟುಂಬಗಳು ಸಹಕಾರ ಸಂಘ ರಚಿಸಿಕೊಂಡು, ಪರಸ್ಪರ ಸಹಕಾರದಿಂದ ವೃತ್ತಿ ಮುಂದುವರೆಸಿಕೊಂಡು ಬರುತ್ತಿದ್ದೇವೆ. ದೀಪಾವಳಿ ಸೀಜûನ್‌ನಲ್ಲಿ ದೀಪ ತಯಾರಿಸುತ್ತೇವೆ. ಉಳಿದ ದಿನಗಳಲ್ಲಿ ಹೂಕುಂಡ, ತುಳಸಿ ಕಟ್ಟೆ, ಧೂಪದ ಆರತಿ, ಮಣ್ಣಿನ ಟೇಬಲ್ ವಾಸ್ ಸೇರಿದಂತೆ ಇನ್ನಿತರ ವಸ್ತುಗಳನ್ನು ತಯಾರಿಸಿ, ಜೀವನ ನಿರ್ವಹಿಸುತ್ತಿದ್ದೇವೆ. ಸರ್ಕಾರ, ಮೌಲ್ಡ್ ದೀಪಗಳ ಆಮದು ಹಾಗೂ ಮಾರಾಟ ನಿರ್ಬಂಧಿಸಬೇಕು. ಕುಂಬಾರರ ಕುಲಕಸುಬಿಗೆ ಪ್ರೋತ್ಸಾಹ ನೀಡಬೇಕು **–ಗೋವಿಂದರಾಜು, ಕುಂಬಾರ ಕುಶಲ ಕೈಗಾರಿಕಾ ಸಹಕಾರ ಸಂಘದ ಸದಸ್ಯ**

ನಾಡಪ್ರಭು ಕೆಂಪೇಗೌಡರ ಪ್ರತಿಮೆ ಸ್ಥಾಪನೆ ಸ್ವಾಗತಾರ್ಹ; ಆದರೆ ಇದು ನೈಜ ಕಾಳಜಿ ಅಲ್ಲ

ಬಿಜೆಪಿಯಿಂದ ಒಕ್ಕಲಿಗರ ಓಲೈಕೆಗೆ ಚುನಾವಣಾ ಗಿಮಿಕ್

ಕೆಪಿಸಿಸಿ ವಕ್ತಾರ ಲಕ್ಷ್ಮಣ್ ಆರೋಪ

ಮೈಸೂರು,ಅ.23(ಪಿಎಂ)–ಬೆಂಗಳೂರು ವಿಮಾನ ನಿಲ್ದಾಣದ ಬಳಿ ನಾಡಪ್ರಭು ಕೆಂಪೇಗೌಡ ಅವರ ಪ್ರತಿಮೆ ಸ್ಥಾಪನೆ ಸ್ವಾಗತಾರ್ಹ. ಆದರೆ ಇದನ್ನು ಕಳೆದ ಎರಡು ವರ್ಷಗಳ ಹಿಂದೆಯೇ ಮಾಡಬಹುದಿತ್ತು. ಇದೀಗ ಚುನಾವಣೆ ದೃಷ್ಟಿಯಲ್ಲಿ ಕೆಂಪೇಗೌಡರ ಪ್ರತಿಮೆ ಮುಂದಿಟ್ಟುಕೊಂಡು ಒಕ್ಕಲಿಗ ಸಮುದಾಯದ ಓಲೈಕೆಗೆ ಬಿಜೆಪಿ ಮುಂದಾಗಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಪ್ರತಿಮೆ ಸ್ಥಾಪನೆಗೆ ನಮ್ಮ ಅಭ್ಯಂತರವಿಲ್ಲ. ಆದರೆ ಚುನಾವಣೆ ದೃಷ್ಟಿಯಲ್ಲಿ ಇವರು ಒಕ್ಕಲಿಗ ಸಮುದಾಯ ಓಲೈಸಿಕೊಳ್ಳಲು ಪ್ರತಿಮೆ ಬಳಸಿಕೊಳ್ಳುತ್ತಿರುವುದು ಸ್ಪಷ್ಟವಾಗುತ್ತದೆ ಎಂದರು.

ಚುನಾವಣೆ ಬಂತೆಂದರೆ ಎಲ್ಲಾ ಸಮುದಾಯದವರು ಇವರಿಗೆ ನೆನಪಾಗುತ್ತಾರೆ. ಒಕ್ಕಲಿಗರ ಅಭಿವೃದ್ಧಿ ನಿಗಮ ಮಾಡಿ ಅದಕ್ಕೊಂದು ಕಚೇರಿ ವ್ಯವಸ್ಥೆಗೊಳಿಸಲು ಇವರಿಗೆ ಬದ್ಧತೆ ಇಲ್ಲ. ಒಕ್ಕಲಿಗ ಸಮುದಾಯವು ಬೆಂಗಳೂರು ಸುತ್ತಮುತ್ತ 3 ಲಕ್ಷ ಎಕರೆ ಭೂಮಿಯನ್ನು ಕಳೆದ 30 ವರ್ಷಗಳಲ್ಲಿ ಕಳೆದುಕೊಂಡಿದೆ. ಅವರ್‍ಯಾರಿಗೂ ಸರ್ಕಾರದಿಂದ ಸರಿಯಾದ ಪರಿಹಾರ ಕೊಡಲಿಲ್ಲ ಎಂದು ದೂರಿದರು.

ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರೇ ಪತ್ರಿಕಾಗೋಷ್ಠಿ ಮೂಲಕ ಈ ಮಾಹಿತಿ ಕೊಟ್ಟಿದ್ದಾರೆ. ಹೀಗೆ ಭೂಮಿ ಕೊಟ್ಟವರು ದುಸ್ಥಿತಿಯಲ್ಲಿದ್ದು, ಬಹುತೇಕರು ಭದ್ರತಾ ಸಿಬ್ಬಂದಿ, ಕೂಲಿ ಕೆಲಸ ಮಾಡಿಕೊಂಡು ಕಡುಕಷ್ಟದ ಬದುಕು ಮಾಡುತ್ತಿದ್ದಾರೆ. 2008ರಿಂದ 2013ರ ಸಂದರ್ಭದಲ್ಲಿ ಹೆಚ್ಚು ಭೂಮಿಯನ್ನು ಸರ್ಕಾರ ವಶಕ್ಕೆ ಪಡೆದಿದೆ. ಈಗಿನ ಬಿಜೆಪಿ ಸರ್ಕಾರದ ಅವಧಿಯಲ್ಲೇ ಹೆಚ್ಚು ಭೂಮಿ ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದರು.

ನಮ್ಮ ಸರ್ಕಾರದ ಕೊಡುಗೆ: ಕೆಂಪೇಗೌಡರ ಜಯಂತಿ ಆಚರಣೆಗೆ 2017ರಲ್ಲಿ ಅಂದಿನ ಇಂಧನ ಸಚಿವ ಡಿ.ಕೆ.ಶಿವಕುಮಾರ್ ಪ್ರಸ್ತಾವನೆ ಮೇರೆಗೆ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಸೂಚನೆ ಹೊರಡಿಸಿದರು. ಇದಕ್ಕೂ ಮೊದಲೇ ಬೆಂಗಳೂರು ವಿಮಾನ ನಿಲ್ದಾಣಕ್ಕೆ 2013ರಲ್ಲಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ನಾಮಕರಣ ಮಾಡಲಾಯಿತು. ಆಗ ರಾಜ್ಯ ಮತ್ತು ಕೇಂದ್ರದಲ್ಲಿ ನಮ್ಮದೇ ಸರ್ಕಾರಗಳಿದ್ದವು ಎಂದು ತಿಳಿಸಿದರು. ಡಿ.ಕೆ.ಶಿವಕುಮಾರ್ ಒಕ್ಕಲಿಗ ಸಮುದಾಯದ ಪ್ರಬಲ ನಾಯಕರು. ಅವರಿಗೆ ಸುಖಾಸುಮ್ಮನೆ ಷಡ್ಯಂತ್ರ ನಡೆಸಿ ಬಿಜೆಪಿಯವರು ಜೈಲಿಗೆ ಕಳುಹಿಸಿದರು. ಸದಾನಂದಗೌಡರನ್ನು ಮುಖ್ಯಮಂತ್ರಿ ಸ್ಥಾನದಿಂದ ಇಳಿಸಿದರು. ಒಕ್ಕಲಿಗ ಸಮುದಾಯ ಬಿಜೆಪಿಯವರ ಗಿಮಿಕ್‌ಗೆ ಮರುಳಾಗಬಾರದು ಎಂದರು.

ಹೊಸ ಉದ್ಯೋಗವಲ್ಲ: 10 ಲಕ್ಷ ಉದ್ಯೋಗ ಸೃಷ್ಟಿಸುವ ಪಿಎಂ ರೋಜ್‌ಗಾರ್ ಉದ್ಯೋಗ ಮೇಳ ಒಂದು ದೊಡ್ಡ ನಾಟಕವಾಗಿದೆ. 2019ರಲ್ಲೇ ನೇಮಕಾತಿ ನೀಡಿದ್ದರೂ ಮತ್ತೆ ಕರೆದು ನೇಮಕಾತಿ ಪತ್ರ ಕೊಡುತ್ತಿದ್ದಾರೆ ಎಂದು ಈಗಾಗಲೇ ಹಲವರು ಹೇಳಿಕೊಂಡಿದ್ದು, ಇವರು ಯಾವುದೇ ಹೊಸ ಉದ್ಯೋಗಗಳನ್ನು ಸೃಜಿಸಿಲ್ಲ ಎಂದು ದೂರಿದರು.

ಸಂಸದರಿಂದ ಅನುದಾನ ದುರ್ಬಳಕೆ: ಮೈಸೂರು–ಕೊಡಗು–ಸಂಸದ ಪ್ರತಾಪ್‌ಸಿಂಹ 2021ರ ಸೆ.5ರಂದು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಕಕ್ಕಿಂಜೆಯಲ್ಲಿರುವ ಬೇಂದ್ರಲಾ ವೆಂಕಟಕೃಷ್ಣ ಈರ್ವತ್ರಯ ಸ್ಮಾರಕ ಟ್ರಸ್ಟ್‌ಗೆ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಿಂದ 18 ಲಕ್ಷ ರೂ. ಮೌಲ್ಯದ ಆಂಬುಲೆನ್ಸ್ ಅನ್ನು ಕೊಡುಗೆಯಾಗಿ ನೀಡಿದ್ದು, ಇದು ಅನುದಾನಕ್ಕೆ ಸಂಬಂಧಿಸಿದಂತೆ ಸರ್ಕಾರದ ಮಾರ್ಗಸೂಚಿಯ ಸ್ಪಷ್ಟ ಉಲ್ಲಂಘನೆ ಎಂದು ಎಂ.ಲಕ್ಷ್ಮಣ್ ಆರೋಪಿಸಿದರು.

ಬಿಜೆಪಿ ಬಡಮಕ್ಕಳ ವಿರೋಧಿ: ಬಿಜೆಪಿಯವರು ಬಡಮಕ್ಕಳ ವಿರುದ್ಧ ಎಂಬುದಕ್ಕೆ ಆರ್‌ಟಿಐ ಅಡಿಯ ಶಿಕ್ಷಣ ಇಲಾಖೆಯಿಂದ ನಾನು ಪಡೆದಿರುವ ಮಾಹಿತಿಯೇ ಸಾಕ್ಷಿ. ಅದರ ಪ್ರಕಾರ 10.12 ಲಕ್ಷ ಮಕ್ಕಳು ಅಂಗನವಾಡಿ ಕೇಂದ್ರಗಳಿಂದ ಹೊರಗುಳಿದಿದ್ದಾರೆ. ಅಲ್ಲದೆ, ಕಳೆದ ಎರಡು ವರ್ಷಗಳಿಂದ 10,378 ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಶಿಕ್ಷಣ ಸಚಿವರ ಕ್ಷೇತ್ರ ವ್ಯಾಪ್ತಿಯ ತುಮಕೂರು ಜಿಲ್ಲೆಯಲ್ಲಿ 53 ಸರ್ಕಾರಿ ಶಾಲೆಗಳನ್ನು ಮುಚ್ಚಲಾಗಿದೆ. ಒಟ್ಟಾರೆ ಕಳೆದ ಎರಡು ವರ್ಷಗಳಲ್ಲಿ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳು ಸೇರಿದಂತೆ ರಾಜ್ಯದಲ್ಲಿ ಒಟ್ಟು 1,110 ಶಾಲೆಗಳು ಮುಚ್ಚಲಾಗಿದೆ. ರಾಜ್ಯದ 4,767 ಸರ್ಕಾರಿ ಶಾಲೆಗಳಲ್ಲಿ ಒಬ್ಬರೇ ಶಿಕ್ಷಕರು ನಿರ್ವಹಣೆ ಮಾಡುತ್ತಿದ್ದಾರೆ. ಇದನ್ನು ಸರಿ ಮಾಡಲು ಇವರಿಗೆ ಯೋಗ್ಯತೆ ಇಲ್ಲ ಎಂದು ಕೆಪಿಸಿಸಿ ವಕ್ತಾರ ಲಕ್ಷ್ಮಣ್ ಟೀಕಾಪ್ರಹಾರ ನಡೆಸಿದರು.

ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಮುಖಂಡ ಜಿ.ಎಲ್.ರಾಮು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.


ವೃದ್ಧ ನಾಪತ್ತೆ



ಮೈಸೂರು,ಅ.23–ಪಿಂಚಣಿ ಹಣ ತರಲು ಅಂಚೆ ಕಚೇರಿಗೆ ಹೋದ ಬುದ್ಧಿಮಾಂದ್ಯ ವೃದ್ಧರೊಬ್ಬರು ನಾಪತ್ತೆಯಾಗಿದ್ದಾರೆ.


ಮಂಡಿ ಪೊಲೀಸ್ ಠಾಣೆ ವ್ಯಾಪ್ತಿಯ ನಿವಾಸಿ ರಾಮು (72) ಅವರು ಅ.19ರಂದು ಬೆಳಗ್ಗೆ 10.30ರ ವೇಳೆಗೆ ಮಂಡಿಯ ನೆಹರು ಸರ್ಕಲ್‌ನಲ್ಲಿರುವ ಅಂಚೆ ಕಚೇರಿಗೆ ಪಿಂಚಣಿ ಹಣ ತರುವುದಾಗಿ ಹೇಳಿ ಹೊರ ಹೋದವರು ಇದುವರೆಗೂ ಮನೆಗೆ ವಾಪಸ್ಸಾಗಿಲ್ಲ ಎಂದು ಇವರ ಪುತ್ರ ಪುರುಷೋತ್ತಮ್ ಮಂಡಿ ಪೊಲೀಸ್ ಠಾಣೆಯಲ್ಲಿ ಅ.20ರಂದು ದೂರು ದಾಖಲಿಸಿದ್ದಾರೆ. ನಾಪತ್ತೆಯಾದವರು ಸಾಧಾರಣ ಮೈಕಟ್ಟು ಹೊಂದಿದ್ದು, ಕನ್ನಡ, ಹಿಂದಿ ಬಲ್ಲವರಾಗಿದ್ದಾರೆ. ಮನೆಯಿಂದ ಹೊರ ಹೋಗುವಾಗ ಬಿಳಿ ಬಣ್ಣದ ಶರ್ಟ್, ಕಪ್ಪು ಬಣ್ಣದ ಪ್ಯಾಂಟ್ ಧರಿಸಿದ್ದರು. ಸುಳಿವು ಸಿಕ್ಕವರು ಪೊಲೀಸ್ ಠಾಣೆ ದೂ. 0821–2418313, ಕಂಟ್ರೋಲ್ ರೂಂ ದೂ.0821–2418339, 2418513, ಮೊ.9845862184 ಸಂಪರ್ಕಿಸಿ.

ನೇಮಕ



ಮೈಸೂರು: ನಗರ ಜೆಡಿಎಸ್ ಸಂಘಟನಾ ಕಾರ್ಯದರ್ಶಿಯನ್ನಾಗಿ ಮಹೇಶ್ ಅವರನ್ನು ನೇಮಕ ಮಾಡಲಾಗಿದೆ ಎಂದು ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ ತಿಳಿಸಿದ್ದಾರೆ.

ಕೃಷ್ಣಪ್ಪ ಆಯ್ಕೆ



ಮೈಸೂರು,ಅ.23– ಶ್ರೀ ಶ್ರೀ ಕೈವಾರ ಯೋಗಿ ನಾರಾಯಣ ಯತೀಂದ್ರರ ಬಲಿಜ (ಬಣಜಿಗ) ಸಂಘದ ಜಿಲ್ಲಾಧ್ಯಕ್ಷರನ್ನಾಗಿ ನಿವೃತ್ತ ಮುಡಾ ನೌಕರ ವಿ.ಕೃಷ್ಣಪ್ಪ ಅವರನ್ನು ಆಯ್ಕೆ ಮಾಡಲಾಗಿದೆ. ಕಿತ್ತೂರಿನ ಕೆ.ಸಿ.ಪ್ರಕಾಶ್ ಅವರು ಸಂಘದ ಜಿಲ್ಲಾ ಗೌರವ ಸಲಹೆಗಾರರಾಗಿ ಆಯ್ಕೆಯಾಗಿದ್ದಾರೆ.

ಚಾಮುಂಡಿಬೆಟ್ಟದ ಬಸ್ ದರ ಇಳಿಕೆಗೆ ಗ್ರಾಮಸ್ಥರ ಆಗ್ರಹ

ಮೈಸೂರು,ಅ.23–ಚಾಮುಂಡಿಬೆಟ್ಟಕ್ಕೆ ಸಂಚರಿಸುವ ಬಸ್‌ಗಳ ದರ ಇಳಿಸುವಂತೆ ಚಾಮುಂಡಿಬೆಟ್ಟದ ಗ್ರಾಮಸ್ಥರು ಕೆ.ಎಸ್.ಆರ್.ಟಿ.ಸಿ ಮೈಸೂರು ಘಟಕದ ವಿಭಾಗೀಯ ನಿಯಂತ್ರಣಾಧಿಕಾರಿಗೆ ಮನವಿ ಸಲ್ಲಿಸಿದ್ದಾರೆ.

ದಸರಾ ವೇಳೆಯಲ್ಲಿ ಚಾಮುಂಡಿ ಬೆಟ್ಟಕ್ಕೆ ಸಂಚರಿಸುವ ಬಸ್‌ಗಳ ದರ ಏರಿಕೆ ಮಾಡಲಾಗಿತ್ತು. ಆದರೆ, ಅದನ್ನು ಮತ್ತೆ ಮೊದಲಿನ ದರವನ್ನೇ ನಿಗದಿಪಡಿಸಬೇಕು. ಇಲ್ಲದಿದ್ದರೆ ರಸ್ತೆ ತಡೆದು ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಸಿದ್ದಾರೆ. ನಗರ ಬಸ್ ನಿಲ್ದಾಣದಿಂದ ಗ್ರಾಮಕ್ಕೆ ನಿತ್ಯ ಸಾಮಾನ್ಯ ಸಾರಿಗೆ ಹಾಗೂ ವೋಲ್ವೋ ಬಸ್‌ಗಳು ಸಂಚರಿಸುತ್ತಿದ್ದು ಕಳೆದ ದಸರಾ ವೇಳೆ ಸರ್ಕಾರದ ಆದೇಶವಿಲ್ಲದೇ ಏಕಾಏಕಿ ಸಾರಿಗೆ ಸಂಸ್ಥೆಗೆ ಲಾಭ ಗಳಿಸುವ ಉದ್ದೇಶದಿಂದ ಸಾಮಾನ್ಯ ಬಸ್‌ಗೆ 20 ರೂ.ಗಳಿಂದ 25 ರೂಗಳಿಗೆ ಹಾಗೂ ವೋಲ್ವೋ ಬಸ್ ದರವನ್ನು 35 ರೂ.ಗಳಿಂದ 40 ರೂ.ಗಳಿಗೆ ದರ ಏರಿಕೆ ಮಾಡಿರುತ್ತೀರಿ. ದಸರಾ ಪ್ರಯುಕ್ತ ಬಸ್ ಪ್ರಯಾಣ ದರ ಏರಿಕೆ ಮಾಡಿದ್ದು, ದಸರಾ ಮುಗಿದ ನಂತರವು ಏರಿಕೆ ಆಗಿರುವ ಪ್ರಯಾಣ ದರ ಕಡಿಮೆ ಮಾಡಿರುವುದಿಲ್ಲ. ಇದರಿಂದ ನಿತ್ಯ ಸಾರಿಗೆ ಬಸ್ ಸಂಚಾರವನ್ನೇ ಅವಲಂಬಿಸಿರುವ ಗ್ರಾಮಸ್ಥರು ಹಾಗೂ ಸಾಮಾನ್ಯರಿಗೆ ತೊಂದರೆ ಆಗಿದ್ದು, ಸಾರಿಗೆ ಇಲಾಖೆಗೆ ಲಾಭ ಮಾಡುವ ಏಕೈಕ ಉದ್ದೇಶದಿಂದ ಚಾಮುಂಡಿ ಬೆಟ್ಟದ ಬಸ್ ಪ್ರಯಾಣ ದರ ಮಾತ್ರ ಏರಿಕೆ ಮಾಡಿರುವುದನ್ನು ಈ ಕೂಡಲೇ ಕಡಿಮೆ ಮಾಡಿ ಎಂದಿನಂತೆ ಪ್ರಯಾಣ ದರ ನಿಗದಿಪಡಿಸಬೇಕಾಗಿ ಗ್ರಾಮಸ್ಥರು ಕೋರಿದ್ದಾರೆ.


ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.10.2022 ಸೋಮವಾರ, ಮಳೆ ನಕ್ಷತ್ರ: ಸ್ವಾತಿ, 24.10.2022 ರಿಂದ ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಆಶ್ವಯುಜ ಮಾಸ, ಕೃಷ್ಣ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ : ಹಸ್ತ, ರಾಹುಕಾಲ: ಸಂಜೆ 7.30ರಿಂದ 9ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ನೃತ್ಯ ಶಿಲ್ಪ ಯಾತ್ರೆ: ಲೇಖನ ಮತ್ತು ಪ್ರಸ್ತುತಿ– ಡಾ.ಬಿ.ಎನ್. ಮನೋರಮ, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರಿ, ವ್ಯಾಖ್ಯಾನ– ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, 10.00 ವಿ. ಕೃಷ್ಣಮೂರ್ತಿ, ನಾಗಸ್ವರ ವಾದನ. **ಮಧ್ಯಾಹ್ನ:** 12.30 ದೇವರನಾಮ, ವೃಂದಗಾನ, ಜಿ.ಪುಷ್ಪಲತಾ, 12.45 ನಮ್ಮ ಆರೋಗ್ಯ ಕಾರ್ಯಕ್ರಮ "ಯುವಜನರಲ್ಲಿ ಕಣ್ಣಿನ ತೊಂದರೆ" ಲಕ್ಷಣಗಳು ಮತ್ತಿ ಚಿಕಿತ್ಸೆ ಕುರಿತು ಡಾ. ಪಿ. ಶುಭ್ರಾ ಎಸ್. ಹೆಗಡೆ ಅವರೊಂದಿಗೆ ಮಾತುಕತೆ, 1.20 ಭಾವಗೀತೆ: ವೃಂದಗಾನ, ರೋಹಿಣಿ ಸುಧಾಮ್, 3.00 ಹರಿಯನ್ನರಸಿದ ವನಿತೆಯರು: ಮಹಿಳಾ ಹರಿದಾಸರನ್ನು ಕುರಿತ ಕಾರ್ಯಕ್ರಮ, ರಚನೆ ಮತ್ತು ಪ್ರಸ್ತುತಿ– ಡಾ.ಸುಕನ್ಯಾ ಪ್ರಭಾಕರ್. **ಸಂಜೆ:** 4.00 ಮಹಿಳಾರಂಗ 'ದೀಪಾವಳಿ ಬದುಕಿನ ರಂಗಾವಳಿ' ಭಾಗವಹಿಸುವವರು ಪ್ರೇಮಾ ಮಹೇಂದ್ರಕರ್, ಮಾಲತಿ ಹೆಗಡೆ ಮತ್ತು ಗೋವಿಂದ್, 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, 6.50 ಕೃಷಿರಂಗ: ಕಿಸಾನ್‌ವಾಣಿ– ಕೃಷಿಯಲ್ಲಿನ ಅನುಭವ ಕುರಿತು ಎಸ್.ಸಂತೋಷ್ ಅವರೊಂದಿಗೆ ಸಂದರ್ಶನ. ಸಂದರ್ಶಕರು– ಎಸ್.ಸಿ.ಹೇಮಕುಮಾರ್. **ರಾತ್ರಿ:** 9.30 'ನೆಲ ಮೂಲ' ಜನಪದ ಆಚರಣೆ ಮತ್ತು ಸಂಪ್ರದಾಯಗಳನ್ನು ಕುರಿತ ಕಾರ್ಯಕ್ರಮ, ರಚನೆ– ಡಾ. ಪಿ.ಕೆ. ರಾಜಶೇಖರ್, ಪ್ರಸ್ತುತಿ– ಡಾ. ಮೈಸೂರು ಉಮೇಶ್, 10.30 ಸವಿನೆನಪು.

- **ಕನ್ನಡ ಜಾನಪದ ಪರಿಷತ್:** ಆರನೇ ವಾರ್ಷಿಕೋತ್ಸವ ಸಮಾರಂಭ, ವಿಶ್ವ ಜಾನಪದ ದಿನಾಚರಣೆ ಹಾಗೂ ವಿಶ್ವ ಬುಡಕಟ್ಟು ದಿನಾಚರಣೆ–2022, ಉದ್ಘಾಟನೆ: ಸಫಾಯಿ ಕರ್ಮಚಾರಿ ಆಯೋಗ ಅಧ್ಯಕ್ಷ ಎಂ. ಶಿವಣ್ಣ, ಅಧ್ಯಕ್ಷತೆ: ಕನ್ನಡ ಜಾನಪದ ಪರಿಷತ್ ಡಾ. ಎಸ್. ಬಾಲಾಜಿ, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಮೈಸೂರು, ಸಮಯ: ಬೆಳಗ್ಗೆ 11 ಗಂಟೆ.
- **ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯ:** ಬೆಳಕಿನ ಹಬ್ಬ–2022 ಸಡಗರ ಸಂಭ್ರಮದ ಆಚರಣೆ, ದಿವ್ಯ ಸಾನ್ನಿಧ್ಯ: ಅಬು ಪರ್ವತ ಈವಿವಿ ಮಾಧ್ಯಮ ವಿಭಾಗದ ಅಧ್ಯಕ್ಷ ರಾಜಯೋಗಿ ಬಿ.ಕೆ. ಕರುಣಾಜಿ, ಉದ್ಘಾಟನೆ: ಮೈಸೂರು ಅಪರ ಜಿಲ್ಲಾಧಿಕಾರಿ ಡಾ. ಬಿ.ಎಸ್. ಮಂಜುನಾಥಸ್ವಾಮಿ, ಅಧ್ಯಕ್ಷತೆ: ಮೇಯರ್ ಶಿವಕುಮಾರ್, ಸ್ಥಳ: ಜ್ಞಾನಪ್ರಕಾಶ ಭವನ, ಯಾದವಗಿರಿ, ಮೈಸೂರು, ಸಮಯ: ಸಂಜೆ 6 ಗಂಟೆ.

ವಚನಗಳಿಂದ ಜ್ಞಾನದ ಬೆಳಕು

ಕೃಷಿ ವಿಜ್ಞಾನಿ ಹೆಚ್.ಆರ್.ಉಮೇಶ್ ಅಭಿಮತ



ಮೈಸೂರು, ಅ.23(ಎಸ್‌ಪಿಎನ್)– ಸಮಾಜದಲ್ಲಿ ಜ್ಞಾನದ ಬೆಳಕನ್ನು ಕಾಣಲು ವಚನಗಳು ಸಹಕಾರಿಯಾಗಿವೆ ಎಂದು ನಾಗನಹಳ್ಳಿ ಕೃಷಿ ಸಂಶೋಧನಾ ಕೇಂದ್ರದ ಅಧಿಕಾರಿ ಹೆಚ್.ಆರ್.ಉಮೇಶ್ ಅಭಿಪ್ರಾಯಪಟ್ಟರು.

ಮೈಸೂರು ತಾಲೂಕು ಜಯಪುರ ಹೋಬಳಿಯ ಸೋಲಿಗರ ಕಾಲೋನಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ವಿಶ್ವವಚನ ಫೌಂಡೇಶನ್ ವತಿಯಿಂದ ವಿದ್ಯಾರ್ಥಿಗಳಿಗೆ ಬ್ಯಾಗ್ ವಿತರಣೆ ಹಾಗೂ ಶಾಲೆಗಳೆಡೆಗೆ ವಚನಗಳ ನಡಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ವಿದ್ಯಾರ್ಥಿಗಳು ವಚನಗಳ ಪಠಣ ಮಾಡಿದರೆ ಜ್ಞಾನ ಮತ್ತು ಪರಿಜ್ಞಾನಗಳ ಸಾರ ಲಭಿಸುತ್ತದೆ. ಇದು ವಿದ್ಯಾರ್ಥಿಗಳ ಮನಸ್ಸಿನಲ್ಲಿ ವಿಶ್ವ ಮಾನವ ಪರಿಕಲ್ಪನೆ ಬೆಳೆಯುತ್ತದೆ ಎಂದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಮಹಿಳಾ ಘಟಕದ ಉಪಾಧ್ಯಕ್ಷೆ ಕಲ್ಯಾಣಿ ನಟರಾಜಪ್ಪ ಮಾತನಾಡಿ, ವಿದ್ಯಾರ್ಥಿಗಳು ವಚನಗಳ ಪಠಣ ಮಾಡಿದರೆ ಸಾಲದು. ಅವುಗಳಲ್ಲಿನ ತತ್ವಾದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ, ಕೇಂದ್ರೀಯ ಸಂಚಾಲಕ ವಿ.ಲಿಂಗಣ್ಣ ಮುಖ್ಯಶಿಕ್ಷಕಿ ಭಾರತಿ, ಸಹ ಶಿಕ್ಷಕ ಎಂ.ರಮೇಶ್, ರಶ್ಮಿ ಉಮೇಶ್, ಎಸ್‌ಡಿಎಂಸಿ ಅಧ್ಯಕ್ಷ ಮಂಜುನಾಥ್, ಶಂಕರ್, ವೆಂಕಟೇಶ್, ಶಿವು, ಹೆಚ್.ಯು.ಲೋಹಿತ್, ಹೆಚ್.ಯು.ಚಿನ್ಮಯಿ ಉಪಸ್ಥಿತರಿದ್ದರು.

ಭಣಗುಡುತ್ತಿರುವ ಮಾರುಕಟ್ಟೆಗಳು!

ಗ್ರಾಹಕರ ನಿರೀಕ್ಷೆಯಲ್ಲಿ ದೇವರಾಜ ಮಾರುಕಟ್ಟೆ ಸೇರಿದಂತೆ ವಿವಿಧೆಡೆಯ ವ್ಯಾಪಾರಿಗಳು



ಮೈಸೂರು, ಅ.23(ಜಿಎ)–ವ್ಯಾಪಾರ ಪರವಾಗಿಲ್ಲ. ಈ ಬಾರಿಯು ದೀಪಾವಳಿ ಹಬ್ಬಕ್ಕೆ ಹೂ, ಹಣ್ಣು ಖರೀದಿ ಮಾಡುವವರ ಸಂಖ್ಯೆ ಕಡಿಮೆ ಇದೆ ಎನ್ನುತ್ತಿರುವ ಮೈಸೂರು ದೇವರಾಜ ಮಾರುಕಟ್ಟೆಯ ವ್ಯಾಪಾರಿಗಳು ನಾಳೆ ಹೆಚ್ಚಿನ ಜನರು ಬರುವ ನಿರೀಕ್ಷೆಯಲ್ಲಿದ್ದಾರೆ. ದೀಪಾವಳಿ ಹಬ್ಬಕ್ಕೆ ಪ್ರತಿ ವರ್ಷ ಹೂ, ಹಣ್ಣು ಖರೀದಿಗಾಗಿ ದೇವರಾಜ ಮಾರುಕಟ್ಟೆ, ವಾಣಿವಿಲಾಸ ಮಾರುಕಟ್ಟೆ ಮತ್ತು ಮಂಡಿ ಮಾರುಕಟ್ಟೆಗೆ ಭಾರೀ ಸಂಖ್ಯೆಯಲ್ಲಿ ಭೇಟಿ ನೀಡುತ್ತಿದ್ದ ಜನತೆ ಈ ಬಾರಿ ಯಾಕೋ ಹೇಳಿಕೊಳ್ಳುವಷ್ಟು ಜನತೆ ಖರೀದಿಗೆ ಮುಂದಾಗಿಲ್ಲ. ಸೋಮವಾರ ಮಾರುಕಟ್ಟೆಗಳಿಗೆ ಬರುವ ಎಂಬ ವಿಶ್ವಾಸದಲ್ಲಿದ್ದಾರೆ.

ಸಾಮಾನ್ಯವಾಗಿ ಹಬ್ಬಗಳು ಎಂದರೆ ಒಂದು ದಿನ ಮುಂಚಿತವಾಗಿ ಮೈಸೂರಿನ ಸಯ್ಯಾಜಿರಾವ್ ರಸ್ತೆ, ಇರ್ವಿನ್ ರಸ್ತೆ, ಶೇಷಾದ್ರಿ ಅಯ್ಯರ್ ರಸ್ತೆ, ಪಡುವಾರಹಳ್ಳಿ, ಅಗ್ರಹಾರ, ದೇವರಾಜ ಮಾರುಕಟ್ಟೆ, ಚಿಕ್ಕಗಡಿಯಾರ, ರಿಂಗ್ ರಸ್ತೆ ಸೇರಿದಂತೆ ವಿವಿಧ ಕಡೆಗಳಲ್ಲಿ ಹೂ, ಹಣ್ಣುಗಳ ಮಾರಾಟ ನಡೆಯುತ್ತದೆ. ಜನತೆ ಬೇರೆ ಕಡೆಗಳಿಗಿಂತ ಸಿಟಿಯಲ್ಲಿ ಕಡಿಮೆ ಬೆಲೆಗೆ ದೊರೆಯುತ್ತದೆ ಎಂದು ದೇವರಾಜ ಮಾರುಕಟ್ಟೆಯಲ್ಲಿ ಖರೀದಿ ಮಾಡುವುದು ವಾಡಿಕೆ.

ಇಂದು ಇಂಡೋ– ಪಾಕ್ ರೋಚಕ ಪಂದ್ಯ ಒಂದು ಕಾರಣವಾಗಿದ್ದರೆ, ಸೋಮವಾರದಿಂದ ಸಾಲು–ಸಾಲು ರಜೆ ಇರುವುದರಿಂದ ಭಾನುವಾರವಾದ ಇಂದು ಕಾರಣ ಮಾರುಕಟ್ಟೆಗೆ ಖರೀದಿ ಮಾಡುವವರ ಸಂಖ್ಯೆ ಇರಬಹುದು ಎಂದು ಕೆಲ ವ್ಯಾಪಾರಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಪ್ರತಿ ಬಾರಿ ಹಬ್ಬಗಳ ಸಂದರ್ಭದಲ್ಲಿ ಇಡೀ ಮಾರುಕಟ್ಟೆ ಕಾಲಿಡದಷ್ಟು ಜನರು ಬೆಳಗ್ಗೆ ಮತ್ತು ಸಂಜೆ ಹೂ, ಹಣ್ಣು ಮತ್ತು ಪೂಜಾ ಸಾಮಾಗ್ರಿಯನ್ನು ಕೊಳ್ಳಲು ಬರುತ್ತಾರೆ. ಈ ಬಾರಿ ಮಾತ್ರ ಅತ್ಯಂತ ಕಡಿಮೆ ಜನ ಕಾಣಿಸುತ್ತಿದ್ದು, ಸಾಮಾನ್ಯವಾಗಿ ದಿನನಿತ್ಯ ಎಷ್ಟು ಜನರು ಬರುತ್ತಾರೆ ಅಷ್ಟೇ ಜನ ಇದ್ದಾರೆ. ಆದರೆ, ನಮ್ಮ ವ್ಯಾಪಾರದಲ್ಲಿ ಏರಿಕೆಯೂ ಆಗಿಲ್ಲ. ಕಡಿಮೆಯೂ ಆಗಿಲ್ಲ. ಒಟ್ಟಾರೇ ವ್ಯಾಪಾರ ಪರವಾಗಿಲ್ಲ. ಎಂದರು.

ಬೆಲೆ ಹೀಗಿದೆ : ಹಣ್ಣುಗಳ ಬೆಲೆಯಲ್ಲಿ ಏರಿಕೆ ಕಂಡಿಲ್ಲ. ಹೂವಿಗೆ ಪ್ರತಿ ಬಾರಿಯಂತೆ ಈ ಬಾರಿಯೂ ಕೊಂಚ ಬೆಲೆ ಏರಿಕೆಯಾಗಿದೆ. ಸೇವಂತಿಗೆ ಮಾರು 40 ರಿಂದ 50 ರೂ., ಮಲ್ಲಿಗೆ ಮೀಟರ್‌ಗೆ 100 ಹಾಗೂ ಮಾರಿಗೆ 200 ರೂ., ಗುಲಾಬಿ ಕೆ.ಜಿಗೆ 200 ರೂ. ಹಾಗೂ ಕನಕಾಂಬರ ಮೀಟರ್‌ಗೆ 100 ರೂ. ಇದ್ದು, ಕೆ.ಜಿಯಲ್ಲಿ ಮಲ್ಲಿಗೆ 800 ರೂ., ಕನಕಾಂಬರ 1200 ರೂ., ಹಾಗೂ ಕಮಲದ ಹೂ ಎರಡಕ್ಕೆ 30 ರೂ., ನಷ್ಟಿದೆ.

ದಾಳಿಂಬೆ 200 ರೂ., ಮೋಸಂಬಿ 80 ರೂ., ಸೇಬು 120 ರೂ., ದ್ರಾಕ್ಷಿ 180 ರೂ., ಸಪೋಟಾ 200 ರೂ., ಕಿತ್ತಳೆ 120 ರೂ.. ಪೈನಾಪಲ್ 80 ರೂ., ಇವೆ.

ವಿಜಯನಗರ ಕ್ರೀಡಾಂಗಣ ಸ್ವಚ್ಛತೆ



ಮೈಸೂರು, ಅ.23(ಎಸ್‌ಪಿಎನ್)–ಸ್ವಚ್ಛ ಮೈಸೂರು ಅಭಿಯಾನದಡಿ ಅಂಬಾಸಿಡರ್ ಲಯನ್ಸ್ ಸಂಸ್ಥೆ ವಿಜಯನಗರ ಒಂದನೇ ಹಂತದ ಕ್ರೀಡಾಂಗಣ ಹಾಗೂ ಸುತ್ತಮುತ್ತಲಿನ ಆವರಣವನ್ನು ಸಂಸ್ಥೆಯ ಅಧ್ಯಕ್ಷ ಮಕಾಳ ಶಿವಕುಮಾರ್ ನೇತೃತ್ವದಲ್ಲಿ ಪದಾಧಿಕಾರಿಗಳು ಭಾನುವಾರ ಸ್ವಚ್ಛಗೊಳಿಸಿ, 10 ಚೀಲ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಿಸಿದರು. ಈ ವೇಳೆ ಕಾರ್ಯದರ್ಶಿ ಟಿ.ಎಚ್.ವೆಂಕಟೇಶ್, ಸದಸ್ಯರಾದ ಹೆಚ್.ಸಿ.ಕಾಂತರಾಜು, ಹೆಚ್.ಕೆ.ಪ್ರಸನ್ನ, ಕೆ.ವಿ.ಶ್ರೀಧರ್, ಸವಿತಾ ಯಶೋಧರಮ್ಮ ಇನ್ನಿತರ ಸದಸ್ಯರು ತ್ಯಾಜ್ಯ ಸಂಗ್ರಹಿಸಿದರು. ಪ್ರತಿ ತಿಂಗಳು ನಗರದ ಬೇರೆ ಸ್ಥಳಗಳಲ್ಲಿರುವ ಪಾರ್ಕ್, ಉದ್ಯಾನವನಗಳಲ್ಲಿ ಸ್ವಚ್ಛಗೊಳಿಸಲು ತೀರ್ಮಾನಿಸಲಾಯಿತು.

ನ.2ರಿಂದ ರಂಗ ತರಬೇತಿ ಶಿಬಿರ

ಮೈಸೂರು: ದೇಸೀರಂಗ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ನ.2ರಿಂದ 22ರವರೆಗೆ 20 ದಿನಗಳ ಕಾಲ ಕಲಾಮಂದಿರದ ತರಬೇತಿ ಕೊಠಡಿಯಲ್ಲಿ ರಂಗ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 7019441509 ಸಂಪರ್ಕಿಸಬಹುದು.

ಸತತ ಮೂರನೇ ಬಾರಿಗೆ ಚೀನಾದ ಅಧ್ಯಕ್ಷರಾದ ಜಿನ್‌ಪಿಂಗ್: ಅಧಿಕೃತ ಘೋಷಣೆ



ಬೀಜಿಂಗ್, ಅ.23– ಚೀನಾ ಅಧ್ಯಕ್ಷರಾಗಿ 69 ವರ್ಷದ ಷಿ ಜಿನ್‌ಪಿಂಗ್ ಸತತ 3ನೇ ಬಾರಿಗೆ ಪುನರಾಯ್ಕೆಯಾಗಿದ್ದಾರೆ. ಭಾನುವಾರ (ಅ 23) ನಡೆದ ಈ ಐತಿಹಾಸಿಕ ಬೆಳವಣಿಗೆಯ ನಂತರ ಮಾತನಾಡಿದ ಅವರು, ಜಗತ್ತಿಗೆ ಈಗ ಚೀನಾದ ಅಗತ್ಯವಿದೆ ಎಂದು ಘೋಷಿಸಿದರು.

ಕಮ್ಯುನಿಸ್ಟ್ ಪಾರ್ಟಿ ಆಫ್ ಚೀನಾದ(ಸಿಪಿಸಿ) 20ನೇ ಕೇಂದ್ರ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಜಿನ್‌ಪಿಂಗ್ ಅವರನ್ನು ಸಮಿತಿಯ ಮೊದಲ ಸರ್ವಸದಸ್ಯ ಸಭೆಯಲ್ಲಿ ಚುನಾಯಿಸಲಾಯಿತು ಎಂದು ಸುದ್ದಿ ಸಂಸ್ಥೆ ಕ್ಸಿನುಹಾ ಭಾನುವಾರ ವರದಿ ಮಾಡಿದೆ.

ಒಂದನೇ ಪುಟದಿಂದ

ಪ್ರವಾಸಿಗರಿಗೆ ಬೃಂದಾವನ ಮುಕ್ತ

ಚಿರತೆ ಸುಳಿವು ದೊರಕದ ಹಿನ್ನೆಲೆಯಲ್ಲಿ ಭಾನುವಾರ ಮಧ್ಯಾಹ್ನ 2 ಗಂಟೆಯಿಂದ ಬೃಂದಾವನ ವೀಕ್ಷಣೆಗೆ ಮುಕ್ತಗೊಳಿಸಲಾಗಿದೆ. ಆದರೂ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದಾರೆ. ಆಯಕಟ್ಟಿನ ಸ್ಥಳಗಳಲ್ಲಿ ಸಿಬ್ಬಂದಿ ನಿಯೋಜಿಸಿ ತೀವ್ರ ನಿಗಾ ವಹಿಸಲಾಗಿದೆ. ಈ ಹಿನ್ನೆಲೆಯಲ್ಲಿ ಇಂದು ಸಾವಿರಾರು ಪ್ರವಾಸಿಗರು ನಿರಾತಂಕವಾಗಿ ಬೃಂದಾವನ ವೀಕ್ಷಿಸಿ, ಸಂಭ್ರಮಿಸಿದ್ದಾರೆ ಎಂದು ಕಾವೇರಿ ನೀರಾವರಿ ನಿಗಮದ ಮೂಲಗಳು ತಿಳಿಸಿವೆ.

ರಾತ್ರಿ ಮತ್ತೆ ಪ್ರತ್ಯಕ್ಷ: ಶನಿವಾರ ರಾತ್ರಿ 11 ಗಂಟೆ ಸುಮಾರಿಗೆ ಚಿರತೆ ಓಡಾಡಿದ್ದು ಅಣೆಕಟ್ಟೆಯ ಮೇಲೆ ಅಧಿಕಾರಿಗಳು ತಾತ್ಕಾಲಿಕವಾಗಿ ಅಳವಡಿಸಿರುವ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಆದರೆ ವಿಡಿಯೋ ಸ್ಪಷ್ಟವಾಗಿರದ ಕಾರಣ ಯಾವ ಪ್ರಾಣಿ ಎಂದು ನಿಖರವಾಗಿ ಗುರುತಿಸಲಾಗಿಲ್ಲ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ ಇದರಿಂದಾಗಿ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳಿಗೆ ಹೊಸ ತಲೆನೋವು ಆರಂಭವಾದಂತಾಗಿದೆ.

ಅಸಮಾಧಾನ: ಇಂತಹ ಪರಿಸ್ಥಿತಿಯಲ್ಲಿ ಬೃಂದಾವನ ವೀಕ್ಷಣೆಗೆ ಅನುವು ಮಾಡಿ ಕೊಟ್ಟಿರುವುದಕ್ಕೆ ಆಕ್ಷೇಪ ವ್ಯಕ್ತವಾಗುತ್ತಿದೆ. ಚಿರತೆ ಇರುವಿಕೆ ಸಾಧ್ಯತೆ ಕಡಿಮೆ ಎನ್ನುವ ಮಾತ್ರಕ್ಕೆ ಬೃಂದಾವನ ವೀಕ್ಷಣೆಗಿದ್ದ ನಿರ್ಬಂಧವನ್ನು ತೆಗೆದು ತಯರಾತುರಿಯಲ್ಲಿ ಪ್ರವಾಸಿಗರ ಪ್ರವೇಶಕ್ಕೆ ಅನುಮತಿ ನೀಡಿರುವುದು ಎಷ್ಟರಮಟ್ಟಿಗೆ ಸರಿ? ಎಂದು ಸಾರ್ವಜನಿಕರು ಪ್ರಶ್ನಿಸಿದ್ದಾರೆ. ಇದೊಂದು ಅಪಾಯಕಾರಿ ನಿರ್ಧಾರವಾಗಿದ್ದು ಯಾರಾದರೂ ಸಿಬ್ಬಂದಿ ಅಥವಾ ಪ್ರವಾಸಿಗರಿಗೆ ಚಿರತೆಯಿಂದ ತೊಂದರೆಯಾದರೆ ಜವಾಬ್ದಾರರು ಯಾರಾಗುತ್ತಾರೆ? ಎಂದು ವಿಷಾದ ವ್ಯಕ್ತಪಡಿಸಿದ್ದಾರೆ.

ಸಚಿವ ಸೋಮಣ್ಣ ಕಪಾಳಮೋಕ್ಷ!

ಸಚಿವರ ವರ್ತನೆಗೆ ತೀವ್ರ ಖಂಡನೆ ವ್ಯಕ್ತವಾಗುತ್ತಿದೆ. ಹಂಗಳ ಗ್ರಾಮದಲ್ಲಿ ಶನಿವಾರ ಮಧ್ಯಾಹ್ನ 3.30ಕ್ಕೆ 175 ಫಲಾನುಭವಿಗಳಿಗೆ ನಿವೇಶನ ಹಕ್ಕುಪತ್ರ ವಿತರಣೆ ಕಾರ್ಯಕ್ರಮ ನಿಗದಿಯಾಗಿತ್ತು. ಆದರೆ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದ ಸಚಿವರು ಹಂಗಳ ಗ್ರಾಮಕ್ಕೆ ಸಂಜೆ 6.30ಕ್ಕೆ ಆಗಮಿಸಿದರು. ಎರಡು ಗಂಟೆಗಳ ಕಾಲ ಕಾದು ಕುಳಿತಿದ್ದ ವಸತಿ ಯೋಜನೆ ಫಲಾನುಭವಿಗಳು ನಿವೇಶನದ ಹಕ್ಕುಪತ್ರ ಸ್ವೀಕರಿಸಲು ಮುಗಿಬಿದ್ದರು. ಈ ವೇಳೆ ನೂಕುನುಗ್ಗಲು ಉಂಟಾಗಿತ್ತು. ಇದರ ನಡುವೆ ಗ್ರಾಮದ ಕೆಂಪಮ್ಮ, ಸಚಿವರತ್ತ ದಾವಿಸಿ 'ನಾನು ವಿಧವಾ ಮಹಿಳೆ, ನನಗೂ ನಿವೇಶನ ಕೊಡಿಸಿ' ಎಂದು ಪದೇ ಪದೆ ಗೋಗರೆದರಲ್ಲದೆ, ಸಚಿವರ ಕಾಲಿಗೆ ಬೀಳಲು ಮುಂದಾದರು. ಇದರಿಂದ ಸಿಟ್ಟಿಗೆದ್ದ ಸಚಿವ ವಿ.ಸೋಮಣ್ಣ, ಮಹಿಳೆಯ ಕಪಾಳಕ್ಕೆ ಬಾರಿಸಿ, ಗದರಿದ್ದಾರೆ. ಈ ಘಟನೆಯಿಂದ ಸುತ್ತಮುತ್ತ ನಿಂತಿದ್ದವರು ಒಂದು ಕ್ಷಣ ಅವಕ್ಕಾದರೂ ಯಾರೂ ಮಾತನಾಡಲಿಲ್ಲ. ನೂಕುನುಗ್ಗಲಿನಿಂದ ಕಾರ್ಯಕ್ರಮ ಅದ್ವಾನವಾಗಿದ್ದರಿಂದ ಪೊಲೀಸರು ಮಧ್ಯಪ್ರವೇಶಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದರು.

> ಸಚಿವ ವಿ.ಸೋಮಣ್ಣ ಅವರು ಮಹಿಳೆಗೆ ಕಪಾಳ ಮೋಕ್ಷ ಮಾಡಿರುವ ಘಟನೆ ರಾಜಕಾರಣಿಗಳು ಹಾಗೂ ಅವರ ಪಕ್ಷದ ವರ್ಚಸ್ಸನ್ನು ಮತ್ತಷ್ಟು ಕೆಡಿಸಲಿದೆ. ಸಾರ್ವಜನಿಕ ಜೀವನದಲ್ಲಿ ಜನಪ್ರತಿನಿಧಿಗಳು ತಾಳ್ಮೆಯಿಂದಿರಬೇಕು. ಕೂಡಲೇ ಸೋಮಣ್ಣ ಅವರು ಮಹಿಳೆಯ ಕ್ಷಮೆ ಯಾಚಿಸಬೇಕು.
>
> **–ಆರ್.ಧ್ರುವನಾರಾಯಣ್, ಕೆಪಿಸಿಸಿ ಕಾರ್ಯಾಧ್ಯಕ್ಷ**

ಸಚಿವರ ವಿರುದ್ಧ ಆಕ್ರೋಶ: ಸಚಿವ ವಿ.ಸೋಮಣ್ಣ, ಮಹಿಳೆಗೆ ಕಪಾಳಮೋಕ್ಷ ಮಾಡಿರುವ ವಿಡಿಯೋ ವೈರಲ್ ಆಗುತ್ತಿದ್ದಂತೆ ಸಚಿವರ ವಿರುದ್ಧ ಎಲ್ಲೆಡೆ ಆಕ್ರೋಶ ವ್ಯಕ್ತವಾಗುತ್ತಿದೆ. ಸಾರ್ವಜನಿಕ ಸೇವೆಗಿರುವ ಜನಪ್ರತಿನಿಧಿಗಳು ಜನರ ಸಮಸ್ಯೆಯನ್ನು ಆಲಿಸುವುದು ಹಾಗೂ ನೊಂದವರಿಗೆ ನ್ಯಾಯಕೊಡಿಸುವು ದನ್ನು ಬಿಟ್ಟು ಮಹಿಳೆ ಮೇಲೆ ಕೈ ಮಾಡಿರು ವುದು ಖಂಡನೀಯ. ಈ ಬಗ್ಗೆ ಮಹಿಳೆಯ ಕ್ಷಮೆ ಯಾಚಿಸಬೇಕು ಎಂದು ಸಾಮಾಜಿಕ ಜಾಲತಾಣದಲ್ಲಿ ಆಗ್ರಹಿಸಲಾಗಿದೆ.

ರೈತರ ಪ್ರತಿಭಟನೆ: ಗುಂಡ್ಲುಪೇಟೆ ಪಟ್ಟಣ ದಲ್ಲಿ ರೈತ ಮುಖಂಡ ಶಿವಪುರ ಮಹ ದೇವಪ್ಪ ನೇತೃತ್ವದಲ್ಲಿ ರೈತ ಸಂಘಟನೆಯ ಪದಾಧಿಕಾರಿಗಳು ಸಚಿವ ಸೋಮಣ್ಣ ರಾಜೀ ನಾಮೆಗೆ ಒತ್ತಾಯಿಸಿ ಭಾನುವಾರ ಪ್ರತಿಭಟಿಸಿ ದರು. ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ, ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಬ್ಯಾಂಕ್ ಬಳಿ ಮಾನವ ಸರಪಳಿ ನಿರ್ಮಿಸಿ ಸಚಿವರ ನಡೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೆ ಕೊಳ್ಳೇಗಾಲ, ಮೈಸೂರು ನಗರ ಸೇರಿದಂತೆ ವಿವಿಧೆಡೆ ಸಚಿವ ಸೋಮಣ್ಣ ವಿರುದ್ಧ ಪ್ರತಿಭಟನೆ ನಡೆಸಲಾಗಿದೆ.

ಸುಳ್ಳು ಎಂದ ಮಹಿಳೆ: ಸಚಿವ ಸೋಮಣ್ಣ ವಿರುದ್ಧ ಎಲ್ಲೆಡೆ ಆಕ್ರೋಶ ವ್ಯಕ್ತವಾಗುತ್ತಿರುವ ಸಂದರ್ಭದಲ್ಲಿ ನೊಂದ ಮಹಿಳೆ ಕೆಂಪಮ್ಮ ಸ್ಪಷ್ಟನೆ ನೀಡಿದ್ದಾರೆ. 'ಸಚಿವರಿಗೆ ನನ್ನ ಕಷ್ಟ ಹೇಳಿಕೊಂಡು ನನಗೂ ಸೈಟ್ ಕೊಡಿಸಿ ಎಂದು ಅವರ ಕಾಲಿಗೆ ಬೀಳಲು ಹೋದೆ. ಆಗ ಅವರೇ ನನ್ನನ್ನು ಮೇಲೆತ್ತಿ ಸಮಾಧಾನ ಪಡಿಸಿದರು. ನನಗೂ ನಿವೇಶನ ನೀಡಿ, ಹಕ್ಕು ಪತ್ರ ವಿತರಿಸಿದ್ದಾರೆ. ಅವರ ಸಹಾಯವನ್ನು ನಾನು ಯಾವಾಗಲೂ ಸ್ಮರಿಸುತ್ತೇನೆ. ಸಚಿವ ಸೋಮಣ್ಣನವರು ನನಗೆ ಹೊಡೆದೇ ಇಲ್ಲ. ಆದರೆ ಹೊಡೆದರೆಂದು ಅಪವಾದ ಹೊರಿಸಿ ಸುಳ್ಳು ಪ್ರಚಾರ ಮಾಡುತ್ತಿದ್ದಾರೆ' ಎಂದು ಕೆಂಪಮ್ಮ ವೀಡಿಯೋ ಮೂಲಕ ತಿಳಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಆತ : ಹುಡುಗಿಯನ್ನು ಎಷ್ಟು ಪ್ರೀತಿಸಬೇಕು?

ಈತ : ನಾವು ಅಕ್ಕನ ಪ್ರೀತಿಸೋದನ್ನು ನೋಡಿ, ಅವಳ ತಂಗಿ ಕೂಡ ನಮ್ಮ ಜೊತೆ ಓಡಿ ಬರಲು ತಯಾರಾಗಬೇಕು. ಆ ತರ ಪ್ರೀತಿಸಬೇಕು.

ಮೈಸೂರು ಮಿತ್ರ

ಸೋಮವಾರ, 24 ಅಕ್ಟೋಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ನಿನಗಾದ ನೋವನ್ನು ಮರೆತು ಬಿಡು. ಆದರೆ, ನೋವಿನಿಂದ ಕಲಿತ ಪಾಠ ಎಂದಿಗೂ ಮರೆಯದಿರು. – ಸ್ವಾಮಿ ವಿವೇಕಾನಂದ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಡೋಲ್ ಬಾರಿಸೋ ದೊಡ್ಡಣ್ಣ ಅಂದರೆ ವೀಣೆ ತಂದಿಲ್ಲ ಅಂದ್ನಂತೆ.

ನಿಮ್ಮ ಪತ್ರಗಳು

ಪರಿಸರ ಸ್ನೇಹಿ ಪಟಾಕಿಯೊಂದಿಗೆ ದೀಪಾವಳಿ ಆಚರಿಸೋಣ

ಮಾನ್ಯರೆ,

ಭಾರತೀಯರಿಗೆ ದೀಪಾವಳಿಯೆಂದರೆ ಎಲ್ಲಿಲ್ಲದ ಸಡಗರ, ಸಂಭ್ರಮ, ಮಕ್ಕಳಿಗಂತೂ ಎಲ್ಲಿಲ್ಲದ ಖುಷಿಯೋ ಖುಷಿ. ಆದರೆ ಇತ್ತೀಚೆಗೆ ಪರಿಸರ ಮಾಲಿನ್ಯ



ನಿಯಂತ್ರಣ ಮಂಡಳಿಯು ಅತೀ ಹೆಚ್ಚು ಶಬ್ದ ಉಂಟು ಮಾಡುವ ಪಟಾಕಿಗಳನ್ನು ನಿಷೇಧಿಸಿರುವುದರಿಂದ ಮಕ್ಕಳಿಗೆ ಕೊಂಚ ನಿರಾಸೆ ಉಂಟಾಗಿದೆ. ಆದ್ದರಿಂದ ಮಕ್ಕಳು ತಮ್ಮ ಗಮನವನ್ನು ಸಣ್ಣ ಸಣ್ಣ ಗಾತ್ರದ ಪರಿಸರಸ್ನೇಹಿ ಪಟಾಕಿಗಳತ್ತ ಮುಖ ಮಾಡಿರುವುದು ಬಹಳ ಸಂತೋಷವಾಗಿದೆ. ಅತೀ ಹೆಚ್ಚು ಶಬ್ದ ಉಂಟು ಮಾಡುವ ಪಟಾಕಿಗಳಿಂದ ಪರಿಸರ ಮಾಲಿನ್ಯ ಉಂಟಾಗಿ ಪ್ರಾಣಿ–ಪಕ್ಷಿಗಳಿಗೆ ತುಂಬಾ ತೊಂದರೆ ಉಂಟಾಗುತ್ತದೆ. ಇವುಗಳಲ್ಲಿ ಬಳಸುವ ವಿಷಕಾರಿ ರಾಸಾಯನಿಕ ವಸ್ತುಗಳಾದ ಲಿಥಿಯಂ, ಆರ್ಸೆನಿಕ್, ಅಲ್ಯೂಮಿನಿಯಂ, ಪೊಟಾಷಿಯಂ ನೈಟ್ರೇಟ್, ಸೀಸದ ಅಂಶಗಳು ಪರಿಸರ ಮತ್ತು ಅಸಂಖ್ಯಾತ ಜನರ ಆರೋಗ್ಯದ ಮೇಲೆ ತುಂಬಾ ದುಷ್ಪರಿಣಾಮಗಳನ್ನು ಉಂಟುಮಾಡುತ್ತವೆ. ಇದಲ್ಲದೆ ಅದೆಷ್ಟೋ ಮಕ್ಕಳು ಪಟಾಕಿಗಳನ್ನು ಸಿಡಿಸಲು ತಮ್ಮನ್ನು ತಾವು ಮೈ ಮರೆತು ಶಾಶ್ವತವಾಗಿ ಕಣ್ಣುಗಳನ್ನು ಕಳೆದುಕೊಂಡು ಜೀವನಪೂರ್ತಿ ಅಂಧಕಾರವನ್ನು ಅನುಭವಿಸುತ್ತಾರೆ. ಇದನ್ನೆಲ್ಲಾ ಪೋಷಕರು ಮತ್ತು ಮಕ್ಕಳು ಅರಿತುಕೊಂಡು ಸರ್ಕಾರದ ಆದೇಶ, ಮಾರ್ಗಸೂಚಿಗಳನ್ನು ಪಾಲಿಸುತ್ತಾ ಪರಿಸರ ಸ್ನೇಹ ಪಟಾಕಿಗಳನ್ನು ಸಿಡಿಸುವುದು ಒಳಿತು. ಒಂದು ದಿನದ ಖುಷಿ ಪರಿಸರದ ಮೇಲೆ ಪ್ರತಿಕೂಲ ಪರಿಣಾಮ ಬೀರದಿರಲಿ. ಈ ಬಾರಿಯೂ ಪರಿಸರಸ್ನೇಹಿ ಪಟಾಕಿ ಹಾಗೂ ಮಣ್ಣಿನ ಹಣತೆಯ ಬೆಳಕಿನೊಂದಿಗೆ ದೀಪಾವಳಿಯನ್ನು ಸಂಭ್ರಮ, ಸಡಗರದಿಂದ ಆಚರಿಸೋಣ.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

ಸ್ವಾಗತಾರ್ಹ ಬೆಳವಣಿಗೆ

ಮಾನ್ಯರೇ,

ಆಮೆಗಳು, ಸರೀಸೃಪಗಳು ಮತ್ತು ಇತರ ಪ್ರಾಣಿಗಳನ್ನು ಉಳಿಸುವ ಸಲುವಾಗಿ ಪಶ್ಚಿಮ ಘಟ್ಟಗಳ ವನ್ಯಜೀವಿ ಕಾರಿಡಾರ್‌ಗಳ ಮೂಲಕ ಹಾದು ಹೋಗುವ, ಸದ್ಯ ಅಸ್ತಿತ್ವದಲ್ಲಿರುವ ರೈಲು ಹಳಿಗಳ ಅಡಿಯಲ್ಲಿ ಯು–ಆಕಾರದ ಕಂದಕಗಳನ್ನು ಸ್ಥಾಪಿಸುವ ಪ್ರಸ್ತಾವನೆ ಬಗ್ಗೆ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಕೆಲಸ ಮಾಡುತ್ತಿರುವುದು ಸ್ವಾಗತಾರ್ಹ. ಪಶ್ಚಿಮ ಘಟ್ಟದಲ್ಲಿ ರೈಲು ಹಳಿ ದಾಟುವಾಗ ಅನೇಕ ಜೀವಿಗಳು ಗಾಯಗೊಂಡು ಇಲ್ಲವೇ ಸಾಯುತ್ತಿರುವ ಬಗ್ಗೆ ಅನೇಕ ವರದಿಗಳಾಗಿವೆ. ಯು–ಆಕಾರದ ಕಾಂಕ್ರೀಟ್ ಕಂದಕಗಳು ಜಪಾನ್‌ನಲ್ಲಿ ಯಶಸ್ವಿಯಾಗಿವೆ. ವನ್ಯಜೀವಿಗಳ ರಕ್ಷಣೆಗೆ (ಜಪಾನ್ ಮಾದರಿಯಲ್ಲಿ) ನೈಋತ್ಯ ರೈಲ್ವೆಯ ಅಡಿಯಲ್ಲಿ ಬರುವ ಕರ್ನಾಟಕದ 150ಕಿಮೀ ನಡುವಿನಲ್ಲಿ ಯು ಆಕಾರದ ಕಾಂಕ್ರೀಟ್ ಕಂದಕವನ್ನು ನಿರ್ಮಿಸಲು ಆದಷ್ಟು ಬೇಗ ಇದರ ಬಗ್ಗೆ ನಿರ್ಧಾರ ತೆಗೆದುಕೊಂಡು ಕಾರ್ಯರೂಪಕ್ಕೆ ತರುವುದು ಒಳ್ಳೆಯದು.

– ವಿಜಯಕುಮಾರ್ ಎಚ್.ಕೆ., ರಾಯಚೂರು

ರಸ್ತೆ, ಚರಂಡಿ ಸರಿಪಡಿಸಿ

ಮಾನ್ಯರೆ,

ಮೈಸೂರಿನ 25ನೇ ವಾರ್ಡ್ ವ್ಯಾಪ್ತಿಯಲ್ಲಿ ಬರುವ ತಿಲಕ್‌ನಗರದ ಪ್ರಮುಖ ರಸ್ತೆಗಳಾದ ಪುಲಿಕೇಶಿ ರಸ್ತೆ, ಕೈಲಾಸಪುರಂ ರಸ್ತೆಗಳು ಕಳೆದ 4 ವರ್ಷಗಳಿಂದ ತೀರಾ ಹದಗೆಟ್ಟಿವೆ. ಅಲ್ಲದೇ ಚರಂಡಿಗಳೂ ಬಹಳ ಹದಗೆಟ್ಟಿದ್ದು, ಮಳೆಗಾಲದಲ್ಲಿ ಬಹಳ ತೊಂದರೆಯಾಗುತ್ತಿದೆ. ಇದರಿಂದ ಇಲ್ಲಿರುವ ಶಾಲೆಗಳಾದ ಮೇರಿ ಸ್ಕೂಲ್, ಸೆವೆನ್ ಡೇಸ್ ಅಡ್ವೆಂಚರ್ ಶಾಲೆಗಳ ವಿದ್ಯಾರ್ಥಿಗಳು, ಸಿಬ್ಬಂದಿ, ವೃದ್ಧರು, ಮಹಿಳೆಯರು, ಮಕ್ಕಳು



ಓಡಾಡಲು ಬಹಳ ತೊಂದರೆಯಾಗಿದೆ. ಅಲ್ಲದೇ ಇಲ್ಲಿ ವಾಹನಗಳಲ್ಲಿ ಓಡಾಡುವವರು ಹಲವು ಬಾರಿ ಬಿದ್ದು ಗಾಯಗೊಂಡಿದ್ದಾರೆ. ಸದರಿ ಕ್ಷೇತ್ರದ ಶಾಸಕರಾದ ನಾಗೇಂದ್ರ ಹಾಗೂ ಸ್ಥಳೀಯ ನಗರ ಪಾಲಿಕೆ ಸದಸ್ಯರು ಯಾವುದೇ ಕ್ರಮ ಕೈಗೊಂಡಿಲ್ಲ. ಇದರಿಂದ ಇಲ್ಲಿನ ನಿವಾಸಿಗಳಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಸದರಿ ಶಾಸಕರು ಹಾಗೂ ಸ್ಥಳೀಯ ನಗರ ಪಾಲಿಕೆ ಸದಸ್ಯರು ಕೂಡಲೇ ಇತ್ತ ಗಮನ ಹರಿಸಿ, ಸದರಿ ರಸ್ತೆ, ಚರಂಡಿಗಳನ್ನು ದುರಸ್ತಿ ಮಾಡುವಂತೆ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಿ, ಸರಿಪಡಿಸಿ, ಇಲ್ಲಿನ ನಿವಾಸಿಗಳಿಗೆ ನೆರವಾಗಬೇಕಾಗಿ ಮನವಿ.

– ನಗರ ಪಾಲಿಕೆ ಮಾಜಿ ಸದಸ್ಯ, ನಂದಕುಮಾರ್, ನಿವಾಸಿ ಮಹೇಶ್, ಮೈಸೂರು

ಮೊಹಮ್ಮದ್ ಬಿನ್ ತೊಘಲಕ್ ಸರಕಾರ!?

ಮಾನ್ಯರೆ,

ನಮ್ಮ ನಿರೀಕ್ಷೆಗೂ ಮೀರಿ ಉತ್ತಮ ಕೆಲಸ ಮಾಡುತ್ತದೆ ಎಂಬ ಭಾ.ಜ.ಪ ಸರಕಾರದ ನಡೆ ದೆಹಲಿಯಿಂದ ದೇವಗಿರಿಗೆ, ಮತ್ತೆ ಅಲ್ಲಿಂದ ದೆಹಲಿಗೇ ರಾಜಧಾನಿಯನ್ನು ಬದಲಿಸಿದ ಮೊಹಮ್ಮದ್ ಬಿನ್ ತೊಘಲಕ್ ಆಡಳಿತವನ್ನು ನೆನಪಿಸುತ್ತಿದೆ.

ಹಲವಾರು ಆದೇಶಗಳನ್ನು ಬೆಳಗ್ಗೆ ಹೊರಡಿಸಿ ರಾತ್ರಿಯ ವೇಳೆಗೆ ಅದನ್ನು ವಾಪಸ್ಸು ಪಡೆಯುವ ಕೆಟ್ಟ ಚಾಳಿ ಈ ಸರಕಾರದ್ದಾಗಿದೆ. ಇದೀಗ ಮಕ್ಕಳ ಪೋಷಕರಿಂದ ದೇಣಿಗೆ ಪಡೆಯುವ ಸುತ್ತೋಲೆಯನ್ನು ವಾಪಸ್ ಪಡೆದ ಸರಕಾರ ಥೇಟ್ ತೊಘಲಕ್ ಆಡಳಿತವನ್ನೇ ಮೀರಿಸುವಂತಿದೆ.

ಅದ್ಯಾರದೋ ಮದುವೆಯಲ್ಲಿ ಉಂಡೋನೇ ಜಾಣವೆನ್ನುವಂತೆ ಸರಕಾರವೇ ಭ್ರಷ್ಟ ಸಂಸ್ಕೃತಿಗೆ ಪ್ರೋತ್ಸಾಹ ನೀಡುತ್ತಾ, ದುರಾಡಳಿತ ಮಾಡುತ್ತಾ ಇದ್ದರೆ ಈ ಪಕ್ಷಕ್ಕೆ ಮತ ನೀಡಿ ಕೈಸುಟ್ಟುಕೊಂಡ ಮತದಾರರು ಕೈ ಕೈ ಹಿಸುಕಿಕೊಳ್ಳುತ್ತಾ, ಸಕಾಲಕ್ಕಾಗಿ ಕಾಯುತ್ತಿದ್ದಾರೆ.

– ಕೊ.ಸು.ನರಸಿಂಹಮೂರ್ತಿ, ಮೈಸೂರು.

ಇದಲ್ಲವೇ ರಾಜಕೀಯ!?

ಮಾನ್ಯರೆ,

ವಸತಿ ಸಚಿವ ಸೋಮಣ್ಣ, ಭಾನುವಾರ ಬೆಳಗ್ಗೆ ಚಾಮರಾಜನಗರದಲ್ಲಿ ತನ್ನ ಸಮಸ್ಯೆ ಹೇಳಲು ಬಂದ ಮಹಿಳೆಗೆ ಕಪಾಳಮೋಕ್ಷ ಮಾಡಿದ್ದು, ಖಾಸಗಿ ವಾಹಿನಿ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಕಡೆ ವೈರಲ್ ಆಗಿದೆ. ಒಂದು ತಾಸಿನ ನಂತರ ಕಪಾಳ ಮಾಡಿಸಿಕೊಂಡ ಮಹಿಳೆ ಮಾತ್ರ, ಅವರು ನನಗೆ ಹೊಡೆದೇ ಇಲ್ಲ.ನನಗೇನು ಆಗಿಯೇ ಇಲ್ಲ. ಅವರದೇನು ತಪ್ಪಿಲ್ಲ ಎನ್ನುತ್ತಾರೆ. ಕಣ್ಣಾರೆ ಕಂಡ ದೃಶ್ಯವನ್ನೇ ಇಲ್ಲ ಎನ್ನುತ್ತಾರಲ್ಲ, ಇದೇ ಅಲ್ಲವೇ ರಾಜಕೀಯ ಎಂದರೆ!

– ಬೂಕನಕೆರೆ ವಿಜೇಂದ್ರ, ಲೇಖಕರು, ಮೈಸೂರು

ಪ್ರೇಮಿಗಳ ಪಾಲಿನ ಯುಗಳ ಗೀತೆ

ಬಡವನಾದರೆ ಏನು ಪ್ರಿಯೆ...



ಕನ್ನಡದ ಸಾಹಿತಿಗಳಲ್ಲಿ ಜಾಜಿ ಮಲ್ಲಿಗೆಯ ಕವಿ ಎಂದೇ ಪ್ರಸಿದ್ಧರಾಗಿರುವ ಸತ್ಯಾನಂದ ಪಾತ್ರೋಟ ಅವರು ಬರೆದಿರುವ ಬಡವನಾದರೆ ಏನು ಪ್ರಿಯೆ.... ಕವನ ಪ್ರೇಮಿಗಳ ಪಾಲಿನ ಯುಗಳ ಗೀತೆಗಳಲ್ಲಿ ವಿಶೇಷ ಸ್ಥಾನ ಪಡೆದಿದೆ. ಅದರಲ್ಲಿ ಯಾವುದೇ ಅತಿ ಶಯೋಕ್ತಿ ಇಲ್ಲ. ಬಹುತೇಕ ಈ ಗೀತೆಯನ್ನು ಕೇಳದ ಕನ್ನಡಿಗರೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಈ ಕವನ ಪ್ರಸಿದ್ಧವಾಗಿದೆ. ಅಧಿಕ ಜನರು ಯೂಟ್ಯೂಬ್‌ನಲ್ಲಿ ಈ ಗೀತೆಯನ್ನು ಕೇಳಿದ್ದಾರೆ , ಮೆಚ್ಚಿದ್ದಾರೆ , ಕೆಲವರು ಈ ಗೀತೆಯನ್ನು ಇಂದಿಗೂ ಗುನುಗುತ್ತಿದ್ದಾರೆ. ಈ ಕವನ ನಿಜವಾದ ಪ್ರೀತಿಗೆ ಬಡತನ – ಸಿರಿತನ ಎಂಬ ಭೇದ ಭಾವ ಇರುವುದಿಲ್ಲ , ಪರಸ್ಪರ ಹೊಂದಾಣಿಕೆ ಯಿಂದ ಬದುಕುವುದೇ ನಿಜವಾದ ಪ್ರೀತಿ ಎಂಬ ಸಂದೇಶವನ್ನು ಸಾರುವಂತಹ ಪ್ರೇಮಿಗಳ ಪಾಲಿನ ಅತ್ಯಂತ ಸುಮಧುರ ಯುಗಳ ಗೀತೆಯಾಗಿ ತನ್ನ ಮಹತ್ವವನ್ನು ಅಂದಿಗೂ ಇಂದಿಗೂ ಉಳಿಸಿಕೊಂಡು ಬಂದಿದೆ.

ಬಡವನಾದರೆ ಏನು ಪ್ರಿಯೆ
ಕೈ ತುತ್ತು ತಿನಿಸುವೆ
ಎದೆಯ ತುಂಬ ಒತ್ತಿಕೊಂಡು
ಮುತ್ತು ಮಳೆಯ ಸುರಿಸುವೆ



ಈ ಪಲ್ಲವಿಯ ಸಾಲುಗಳಲ್ಲಿ ಕವಿ ಹೇಳ ಹೊರಟಿರುವ ಸಂದೇಶ ತುಂಬಾ ಗಮನಾರ್ಹವಾದುದು. ನಾನು ಬಡವನಿರಬಹುದು ಆದರೆ ನನ್ನ ಪ್ರೀತಿಗೆ ಯಾವುದೇ ಬಡತನವಿಲ್ಲ. ಬಡತನವಿರುವುದು ನನಗೆ ಹೊರತು ನನ್ನ ಪ್ರೀತಿಗಲ್ಲ ಎಂದು ಹೇಳುವ ಪ್ರೇಮಿ ನಾನೇ ಕೈ ತುತ್ತು ತಿನಿಸುವೆ ಎಂದಿದ್ದಾನೆ. ಈ ಸಾಲುಗಳಲ್ಲಿ ಅಡಗಿರುವ ಒಳಾರ್ಥವನ್ನು ಗ್ರಹಿಸಿಕೊಂಡರೆ ಕವನ ಮತ್ತಷ್ಟು ಆಪ್ತವಾಗುತ್ತದೆ. ಬಹುತೇಕ ಇಂದಿನ ಯುವ ಸಮುದಾಯಕ್ಕೆ ಕೈ ತುತ್ತು ಎಂಬ ಪದದ ಪರಿಚಯವೇ ಇಲ್ಲ ಎನ್ನಬಹುದು. ಕೈ ತುತ್ತಿನ ಅನುಭವ ಅದನ್ನು ಸವಿದವರಿಗಷ್ಟೇ ತಿಳಿದಿರುತ್ತದೆ. ಹುಣ್ಣಿಮೆಯ ಬೆಳದಿಂಗಳಿನ ರಾತ್ರಿಯಲ್ಲಿ ಅಜ್ಜಿಯ ಸುತ್ತಾ ಕುಳಿತು ಅಜ್ಜಿ ಕೊಡುವ ಕೈ ತುತ್ತನ್ನು ತಿಂದ ಸವಿರುಚಿ ಇಂದು ಯಾವುದೇ ಎಷ್ಟೇ ನಕ್ಷತ್ರಾಕಾರದ ಹೋಟಲ್ (ಸ್ಟಾರ್ ಹೋಟಲ್) ನಲ್ಲಿ ತಿಂದರೂ ಸಿಗಲಾರದು. ಈ ಸಾಲಿನಲ್ಲಿ ಪ್ರೇಮಿ ತನ್ನ ಪ್ರಿಯತಮೆಗೆ ಹೇಳುತ್ತಿರುವ ಸಾಲನ್ನು ಗಮನಿಸಬೇಕು. ನಾನು ಬಡವನೇ ಇರಬಹುದು ಆದರೆ ನನ್ನ ಪ್ರೀತಿಯಲ್ಲಿ ಬಡತನವಿಲ್ಲ ನಾನೇ ನಿನಗೆ ಕೈ ತುತ್ತು ತಿನಿಸುವೆ. ಏನೇ ಬಂದರೂ ಜೊತೆಯಾಗಿಯೇ ಇರುವೆನೆಂಬ ಭರವಸೆಯನ್ನು ನೀಡುವ ಅರ್ಥವನ್ನೊಳಗೊಂಡ ಸಾಲು ಇದಾಗಿದೆ. ಪ್ರಸ್ತುತ ದಿನಗಳಲ್ಲಿ ಪ್ರೀತಿ ಎಂಬ ಪದದ ಪರಿಭಾಷೆಯೇ ಬದಲಾಗುತ್ತಿದೆ. ಚಿನ್ನ, ಬೆಳ್ಳಿ ತಂದುಕೊಟ್ಟರೆ ಮಾತ್ರ ಪ್ರೀತಿ, ಉಡುಗೊರೆ ನೀಡಿದರೆ ಮಾತ್ರ ಪ್ರೀತಿ, ಸ್ವಂತ ಮನೆ , ಸರ್ಕಾರಿ ಕೆಲಸ, ಹೀಗೆ ಬೇಕು ಬೇಕೆಂಬ ಪಟ್ಟಿ ಬೆಳೆಯುತ್ತಾ ಸಾಗಿದೆ. ಆದರೆ ನಿಜವಾದ ಪ್ರೀತಿಗೆ ಇವೆಲ್ಲಕ್ಕಿಂತ ಪ್ರಮುಖವಾಗಿ ಮತ್ತು ಅಗತ್ಯವಾಗಿ ಬೇಕಾಗಿರುವುದು ಪರಸ್ಪರ ನಂಬಿಕೆ. ನಿನ್ನೊಂದಿಗೆ ನಾನು ಏನಾದರೂ ಜೊತೆಗಿರುವನೆಂಬ ಭರವಸೆ ಅಗತ್ಯ. ಬರೀ ಪ್ರೀತಿ ಒಂದಿದ್ರೆ ಸಾಕು ಹೇಗೆ ಬೇಕಾದರೂ ಬಾಳಬಹುದು ಎಂದುಕೊಂಡರೆ ಅದು ಇವತ್ತಿಗೆ ಸಾಧ್ಯವಿಲ್ಲದ ಮಾತು ಅದನ್ನು ಯಾರಾದರೂ ಒಪ್ಪಿಕೊಳ್ಳಲೇಬೇಕಾದ ಸತ್ಯ ಆದರೆ ಒಮ್ಮೆ ಯೋಚಿಸಿ ನೋಡಿ ನಾವು ಆಸೆ ಪಟ್ಟ ಸ್ವಂತ ಮನೆ, ಸರ್ಕಾರಿ ಕೆಲಸ, ಚಿನ್ನ, ಬೆಳ್ಳಿ ಎಲ್ಲವೂ ಇದ್ದು ಪರಸ್ಪರ ಪ್ರೀತಿ ಇಲ್ಲದಿದ್ದರೆ, ನಮಗೆ ಹತ್ತಿರವಾದವರಿಗೆ ಸಮಯ ಕೊಡಲಾಗದಿದ್ದರೆ, ನೆಮ್ಮದಿಯಾಗಿ ಒಟ್ಟಿಗೆ ಕುಳಿತು ಊಟ ಮಾಡಲಾಗದಿದ್ದರೆ, ಪ್ರೀತಿಯ ಮಾತುಗಳನ್ನಾಡ ದಿದ್ದರೆ ಎಂತಹ ಸಿರಿವಂತಿಕೆಯೂ ಕೂಡ ವ್ಯರ್ಥವೇ ಎನ್ನಿಸುತ್ತದೆ.

ಇಲ್ಲಿ ಪ್ರೇಮಿ ಹೇಳಿರುವ ಮಾತು ನಾನು ಬಡವನಿರಬಹುದು. ಆದರೆ ನನ್ನ ಪ್ರೀತಿಗೆ ಬಡತನವಿಲ್ಲ. ನಾನೇ ಕೈ ತುತ್ತು ತಿನಿಸುವೆ ಎನ್ನುವ ಮೂಲಕ ನಿಷ್ಕಲ್ಮಶ ಪ್ರೀತಿಯ ಪರಿಶುದ್ಧತೆಯನ್ನು ಸಾರಿದ್ದಾನೆ. ಎದೆಯ ತುಂಬ ಒತ್ತಿಕೊಂಡು ಮುತ್ತು ಮಳೆಯ ಸುರಿಸುವೆ – ಈ ಸಾಲನ್ನು ಓದುವಾಗ ಅಥವಾ ಅರ್ಥಮಾಡಿಕೊಳ್ಳುವಾಗ ಕೆಲವರು ಸಂಕುಚಿತ ಅರ್ಥವನ್ನು ಗ್ರಹಿಸಿಕೊಂಡರೆ ಅಥವಾ ಮಡಿವಂತಿಕೆಯಿಂದ ಅರ್ಥಮಾಡಿಕೊಂಡರೆ ಅಲ್ಲಿ ಅವರಿಗೆ ಅಶ್ಲೀಲತೆಯ ಅಂಶ ಗೋಚರಿಸಬಹುದು. ಆದರೆ ವಿಶಾಲವಾದ ಮನೋಭಾವದಿಂದ ಅರ್ಥಮಾಡಿಕೊಂಡರೆ ಈ ಸಾಲಿನ ಒಳಾರ್ಥವನ್ನು ಗ್ರಹಿಸಬಹುದು. ಬಡತನ ನನಗಿದೆ ನಿಜ , ಆದರೆ ಆ ಬಡತನದ ಮಧ್ಯದಲ್ಲೂ ನಾನು ನಿನಗೆ ಬಡತನದ ನೆನಪಾಗದಂತೆ ನಿನ್ನನ್ನು ಪ್ರೀತಿಯಿಂದ ನೋಡಿಕೊಳ್ಳುವೆನೆಂಬ ಪ್ರೀತಿಯ ಮಳೆಯನ್ನೇ ಮುತ್ತಿನ ರೂಪದಲ್ಲಿ ಸುರಿಸುವೆನೆಂಬ ಮಾತು ನಿಜವಾದ ಪ್ರೀತಿಗೆ ಬಡತನದ ಬೇಗೆ ತಾಗಲಾರದೆಂಬ ಮನವರಿಕೆಯನ್ನು ಮಾಡಿಕೊಡುತ್ತದೆ.

ನನ್ನ ಎದೆಯ ರಾಜ್ಯದಲ್ಲಿ
ನೀನು ರಾಣಿಯಾಗುವೆ
ಪುಟ್ಟ ಗುಡಿಸಲಲ್ಲಿ ನಿನ್ನ
ಪಟ್ಟದರಿಸಿ ಮಾಡುವೆ

ನಾನು ಬಡವ ನಿಜ , ನನಗೆ ಸ್ವಂತ ಮನೆ ಇಲ್ಲ ಅದು ಸತ್ಯವೇ. ಆದರೆ ನನ್ನ ಎದೆ ಎಂಬ ರಾಜ್ಯದಲ್ಲಿ ನೀನು ರಾಣಿಯಾಗಿರುವೆ.ಇದರರ್ಥ ನನ್ನ ಮನಸೆಂಬ ರಾಜ್ಯದಲ್ಲಿ ನೀನೇ ರಾಣಿ. ನಿನ್ನನ್ನು ರಾಣಿಯಾಗಿ ನೋಡಿಕೊಳ್ಳುವ ಜವಾಬ್ದಾರಿ ನನ್ನದು. ನಾನಿರುವುದು ಪುಟ್ಟ ಗುಡಿಸಲೇ ಇರಬಹುದು ನನ್ನದು ಅಂತ ಹೇಳಿಕೊಳ್ಳಲು ನಿರ್ದಿಷ್ಟವಾದ ಜಾಗವಿಲ್ಲದೇ ಇರಬಹುದು. ಆದರೆ, ಇರುವ ಈ ಪುಟ್ಟ ಗುಡಿಸಲಲ್ಲೇ ನಾನು ನಿನ್ನನ್ನು ಪಟ್ಟದರಿಸಿ ಅಂದರೆ ಪಟ್ಟದ ರಾಣಿಯಾಗಿ ನೋಡಿಕೊಲ್ಲುವೆ ಎನ್ನುವ ಮೂಲಕ ನೋವಿನಲ್ಲಿಯೂ ಸಂತೋಷವನ್ನು ನೀಡುವ ಮಾತುಗಳನ್ನು ತನ್ನ ಪ್ರಿಯತಮೆಗೆ ಹೇಳುತ್ತಿದ್ದಾನೆ. ಸಿರಿವಂತಿಕೆ ಎಂಬುದು ಇಂದು ಇದ್ದು ನಾಳೆ ಮರೆಯಾಗಬಹುದು ಆದರೆ ನನಗೆ ನಿನ್ನ ಮೇಲಿರುವ ಪ್ರೀತಿಗೆ ಎಂದಿಗೂ ಕಡಿಮೆಯಾಗಲಾರದೆಂಬ ಹಿತವಚನವನ್ನು ಸಾರುವಂತಿದೆ ಈ ಸಾಲುಗಳು. ಒಮ್ಮೆ ಚಿಂತಿಸಿ ನೋಡಿ – ಗಂಡ, ಪ್ರೇಮಿ ಕೋಟ್ಯಾಧಿಪತಿಯಾಗಿದ್ದು ತನ್ನ ಮಡದಿಗೆ, ಪ್ರೇಯಸಿಗೆ ಒಂದತ್ತು ನಿಮಿಷವೂ ಸಮಯವನ್ನು ಕೊಡಲಾಗದೇ, ಅವಳ ಕಷ್ಟವನ್ನು ವಿಚಾರಿಸದಿದ್ದರೆ ಎಷ್ಟು ಕೋಟಿ ಇದ್ದರೇನು. ಪ್ರೀತಿಯೇ ಇಲ್ಲದ ಮೇಲೆ ಎಲ್ಲವೂ ತೃಣವೆಂದೆನಿಸುತ್ತದೆ.ಇಲ್ಲಿ ಬಡತನ ಇರುವುದು ಪ್ರೇಮಿಗೆ ಹೊರತು ಅವನ ಪ್ರೀತಿಗಲ್ಲ. ಹಾಗಾಗಿ ಈ ಸಾಲುಗಳು ಹೆಚ್ಚು ಕಾಡುವಂತಿದೆ.

ಉಳ್ಳವರ ಎದೆಗೆ ಒದ್ದು
ಮೈ ಮಾನ ಮುಚ್ಚುವೆ
ರಟ್ಟೆ ಮೇಲೆ ಹೊತ್ತು ನಿನ್ನ
ಜಗವ ಸುತ್ತಿ ತಣಿಸುವೆ

ಸಾಮಾನ್ಯವಾಗಿ ಉಳ್ಳವರು ಇಲ್ಲದವರ ಮೇಲೆ ದಬ್ಬಾಳಿಕೆ ನಡೆಸುವುದು ಎಲ್ಲೆಡೆ ಕಂಡುಬರುವ ಸಂಗತಿ. ಇಲ್ಲಿಯೂ ಕೂಡ ಪ್ರೇಮಿ ಅದನ್ನೇ ಹೇಳಿದ್ದಾನೆ. ಬಡವರಾಗಿದ್ದ ಮಾತ್ರಕ್ಕೆ ಸಲಿಗೆ ತೆಗೆದುಕೊಂಡು ನಿನ್ನ ಮೇಲೆ ಉಳ್ಳವರು ಅಂದರೆ ಶ್ರೀಮಂತರು ಕಣ್ಣು ಹಾಕಿದರೆ ಅಂತಹವರನ್ನು ಒದ್ದು, ಅವರಿಂದ ನಿನ್ನನ್ನು ಕಾಪಾಡಿ ನಿನ್ನ ಮೈ ಮತ್ತು ಮಾನವನ್ನು ಮುಚ್ಚುವೆ.ಇಲ್ಲಿ ಅರ್ಥಮಾಡಿಕೊಳ್ಳಬೇಕಾದ ಸಂಗತಿ ಎಂದರೆ ಬಡವರಾದ್ದರಿಂದ ಸರಿಯಾಗಿ ಧರಿಸಲು ಉಡುಗೆಗಳಿಲ್ಲದೇ ಹರಿದ ಬಟ್ಟೆಯಲ್ಲಿ ತಮ್ಮ ಜೀವನವನ್ನು ಸಾಗಿಸುವವರನ್ನು ಗಮನಿಸಿದಾಗ ಹಣದ ಮದದಿಂದ ಮೆರೆಯುವ ಕೆಲವರು ಬಡವರನ್ನು ಅವರ ಮೈ ಮಾನವನ್ನು ಕೆಣಕುವ ಕೆಲಸವನ್ನು ಮಾಡುತ್ತಾರೆ (ಇವತ್ತಿನ ದಿನ ಹರಿದ ಬಟ್ಟೆ ಅಲ್ಲ ಮೈ ತುಂಬಾ ಬಟ್ಟೆ ಹಾಕಿಕೊಂಡಿದ್ದರೂ ತಮ್ಮ ಅಸಹ್ಯ ಗುಣವನ್ನು ಬಿಡದ, ಎಳೆಯ ಮಕ್ಕಳನ್ನು ಸಹ ಬಿಡದ ಕೆಲ ಕಾಮುಕ ಜನರು ಇರುವರು ಇವರಿಂದ ಇಡೀ ಪುರುಷ ಜನಾಂಗಕ್ಕೆ ಅವಮಾನ ಮತ್ತು ಇವರಿಂದ ಉಳಿದ ಪುರುಷರನ್ನು ಅನುಮಾನದಿಂದ ನೋಡುವುದು ಹೆಚ್ಚಿದೆ. ಆ ಮಾತು ಬೇರೆ!) ಈ ರೀತಿ ಉಳ್ಳವರು ನಿನ್ನ ಮೇಲೆ ಕಣ್ಣು ಹಾಕಿದರೆ ಅಂತಹವರನ್ನು ಯಾರೇ ಆಗಿದ್ದರೂ ಒದ್ದು ಬುದ್ಧಿ ಕಲಿಸಿ ನಿನ್ನ ಮೈ ಮಾನ ಕಾಪಾಡುವ ಹೊಣೆಗಾರಿಕೆ ನನ್ನದು ಎಂದು ಪ್ರೇಮಿ ತನ್ನ ಪ್ರಿಯತಮೆಗೆ ಹೇಳುತ್ತಿದ್ದಾನೆ.ಅಷ್ಟೇ ಅಲ್ಲ ನಿನ್ನನ್ನು ನನ್ನ ರಟ್ಟೆ ಮೇಲೆ ಹೊತ್ತುಕೊಂಡು ಜಗವ ಸುತ್ತಿ ತಣಿಸುವುದಾಗಿ ಹೇಳಿದ್ದಾನೆ. ಇದನ್ನು ಹೇಳುವಾಗ ಇದು ಹೇಗೆ ಸಾಧ್ಯ, ಇವೆಲ್ಲಾ ನಡೆಯೊಕೆ ಸಾಧ್ಯನಾ ಎಂದು ಪ್ರಾಯೋಗಿಕವಾಗಿ (ಪ್ರಾಕ್ಟಿಕಲ್) ಚಿಂತಿಸುವ ಬದಲು ನಿಜವಾದ ಪ್ರೀತಿಗೆ ಅಷ್ಟು ಶಕ್ತಿ ಇದೆ ಎಂಬ ಅಂಶವನ್ನು ಅರ್ಥಮಾಡಿಕೊಳ್ಳಬೇಕು. ನಿನ್ನನ್ನು ಈ ರಟ್ಟೆ ಮೇಲೆ ಹೊತ್ತುಕೊಂಡು ಜಗತ್ತನ್ನು ತೋರಿಸುವೆ ಎಂಬ ಸಾಲು ನಮ್ಮಿಬ್ಬರ ಪ್ರೀತಿಗೆ ಅಷ್ಟು ಶಕ್ತಿ ಇದೆ ಎಂಬ ಸಂದೇಶವನ್ನು ಸಾರುತ್ತದೆ. ಈ ಬಗ್ಗೆ ಅನುಮಾನವಿದ್ದವರು ತನ್ನ ಮಡದಿಗಾಗಿ ಬೆಟ್ಟವನ್ನೇ ಕಡಿದ ಬಿಹಾರದ ದಶರಥ್ ಮಾಂಝಿ ಕಥೆಯನ್ನು ಓದಬಹುದು. ಆ ಕಥೆಯನ್ನು ಓದಿದರೆ ನಿಜವಾದ ಪ್ರೀತಿಗೆ ಇರುವ ಶಕ್ತಿಯ ತೀವ್ರತೆ ಎಷ್ಟು ಎಂಬುದು ತಿಳಿಯುತ್ತದೆ.

ಬೆವರು ಹರಿಸಿ ಹೂವ ಬೆಳೆಸಿ
ಮುಡಿಯಲಿಟ್ಟು ನಗಿಸುವೆ
ಭುಜಕೆ ಭುಜವ ಹಚ್ಚಿ ನಿಂತು
ತೋಳುಬಂಧಿ ತೊಡಿಸುವೆ

ನಾನು ಕಷ್ಟಪಟ್ಟು ದುಡಿದು ನನ್ನ ಬೆವರು ಹರಿಸಿ ಸಂಪಾದಿಸಿ, ನಿನ್ನನ್ನು ನೋಡಿಕೊಳ್ಳುವೆ. ಬೆವರು ಹರಿಸಿ ಹೂವನ್ನು ಬೆಳೆಸಿ ಆ ಹೂವನ್ನು ನಿನ್ನ ಮುಡಿಯಲಿಟ್ಟು ನಗಿಸುವೆ ಅಂದರೆ ಕಷ್ಟಪಟ್ಟು ದುಡಿಯುವೆ, ಹೂವನ್ನು ತೆಗೆದುಕೊಂಡು ಬಂದು ನಿನ್ನ ಮುಡಿಗೆ ಮುಡಿಸಿ ನೀನು ನಗುವಂತೆ ಮಾಡುವೆ. ನಮ್ಮ ಬಡತನ ನಮ್ಮ ಪ್ರೀತಿಗೆ ಯಾವುದೇ ಅಡ್ಡಿಯನ್ನುಂಟು ಮಾಡಲು ಬಿಡುವುದಿಲ್ಲ ಎಂಬ ಸಂದೇಶವನ್ನು ತನ್ನ ಪ್ರಿಯತಮೆಗೆ ಸಾರುತ್ತಿದ್ದಾನೆ. ಇನ್ನೂ ಮುಂದುವರೆದು ನಿನ್ನ ಜೊತೆಯಲ್ಲಿಯೇ ನಿಂತು ಭುಜಕ್ಕೆ ಭುಜವ ಹಚ್ಚಿ ನಿಂತು ತೋಳುಬಂಧಿ ತೊಡಿಸುವೆ – ಸಾಮಾನ್ಯವಾಗಿ ಹೆಂಗಸರು ಆಭರಣ ಪ್ರಿಯರು, ಹಾಗಾಗಿ ತನ್ನ ಪ್ರೇಯಸಿಗೆ ಆಭರಣ ಕೊಡಿಸಬೇಕೆಂಬ ಆಸೆ ಪ್ರೇಮಿಗಿದೆ. ಆದರೆ ಬಡತನ ಅದಕ್ಕೆ ಅಡ್ಡಿಯಿದೆ ಆದರೂ ಪ್ರೇಮಿ ಬಿಡಲಾರ ನಾನು ನಿನ್ನ ತೋಳಿಗೆ ತೋಳು ಬಂಧಿಯನ್ನು ಕೊಡಿಸಲಾಗದಿದ್ದರೂ ನಾನೇ ನಿನ್ನ ತೋಳುಬಂಧಿಯಾಗಿ ಇರುವೆ ಎನ್ನುವ ಮೂಲಕ ಎಂತಹ ಸಂದರ್ಭದಲ್ಲೂ ನಿನ್ನ ಬಿಡಲಾರೆನೆಂಬ ಅಚಲವಾದ ನಂಬಿಕೆಯನ್ನು ನೀಡುವ ಮಾತುಗಳನ್ನು ಹೇಳುತ್ತಿದ್ದಾನೆ. ಹೆಣ್ಣಿಗೆ ತನ್ನನ್ನು ಮನಸಾರೆ ಪ್ರೀತಿಸುವ ಪ್ರೇಮಿಗಿಂತ ಬೆಲೆಬಾಳುವ ಆಭರಣಗಳೇನು ಹೆಚ್ಚಲ್ಲ.ಆ ನಿಟ್ಟಿನಲ್ಲಿ ಈ ಸಾಲು ನಿಜಕ್ಕೂ ಅರ್ಥವತ್ತಾಗಿದೆ.

ಹರಿವ ನದಿಗೆ ಅಡ್ಡ ನಿಂತು
ನಿನಗೆ ದಾರಿ ಮಾಡುವೆ
ಬಿಸಿಲು ಮಳೆಯ ಚಳಿಯ
ನುಂಗಿ ನೆರಳು ಬೆಳಕು ಆಗುವೆ

ಇಲ್ಲಿ ನಿಜವಾದ ಪ್ರೇಮಿ ತನ್ನ ಪ್ರಿಯತಮೆಗೆ ಹೇಳಿರುವ ಮಾತುಗಳನ್ನು ಗಮನಿಸಬೇಕು. ಹರಿವ ನದಿಗೆ ಅಡ್ಡ ನಿಂತು ಅಂದರೆ ಈ ಜೀವನ ಅನ್ನುವ ಜಂಜಾಟದಲ್ಲಿ ಏನೇ ಸಮಸ್ಯೆಗಳು ಬಂದರೂ ಆ ಸಮಸ್ಯೆಗಳನ್ನು ಎದುರಿಸಿ ನಿಂತು ನೀನು ಮುಂದೆ ಸಾಗಲು ನಾನು ದಾರಿ ಮಾಡಿಕೊಡುವೆ ಎನ್ನುವ ಮೂಲಕ ಏನೇ ಕಷ್ಟಗಳು ಎದುರಾದರೂ ನಾನು ನಿನ್ನೊಂದಿಗೆ ಶಾಶ್ವತವಾಗಿ ಇರುವೆನು ಎಂಬ ಹಿತನುಡಿಗಳನ್ನು ಹೇಳಿದ್ದಾನೆ. ಮುಂದುವರೆದು ಬಿಸಿಲು ಮಳೆಯ ಚಳಿಯ ನುಂಗಿ ಅಂದರೆ ಏನೇ ಆದರೂ ನಿನ್ನನ್ನು ಬಿಡಲಾರೆ ಬಿಸಿಲಾದರೆ ನೆರಳಾಗಿ, ಮಳೆ, ಚಳಿಯಾದರೆ ಬೆಳಕಾಗಿ ನಿನ್ನನ್ನು ಕಾಪಾಡುವೆ ಎಂಬ ದೃಢ ನಿರ್ಧಾರವನ್ನು ಹೇಳುತ್ತಿದ್ದಾನೆ. ಬಿಸಿಲು, ಮಳೆ, ಚಳಿ ಎಂಬ ಏನೇ ಕಷ್ಟ, ತೊಂದರೆ, ಸಮಸ್ಯೆಗಳು ಎದುರಾದರೂ ನಾನು ನಿನಗೆ ಅವೆಲ್ಲವನ್ನೂ ನುಂಗಿ ನೆರಳಾಗಿ, ಬೆಳಕಾಗಿ ಜೊತೆಯಾಗಿ ನಿನ್ನನ್ನು ಕಾಪಾಡುವೆ ಎಂಬ ನುಡಿ ಎಂತಹ ಹುಡುಗಿಗಾದರೂ ಧೈರ್ಯವನ್ನು ನೀಡುವಂತಹವು.

ಹೀಗೆ ಹನ್ನೆರಡು ಸಾಲುಗಳಲ್ಲಿರುವ ಈ ಕವನ ನೋಡುವುದಕ್ಕೆ ಸಣ್ಣದಾಗಿ ಕಂಡರೂ ಹಲವು ಅರ್ಥಗಳನ್ನು ತನ್ನಲ್ಲಿ ಅಡಗಿಸಿಕೊಂಡು ಕೇವಲ ಅಂದಿನ ಕಾಲಕ್ಕೆ ಮಾತ್ರ ಸೀಮಿತವಾಗದೇ ಎಲ್ಲಾ ಕಾಲಕ್ಕೂ ಅನ್ವಯಿಸುವಂತಹ ಗೀತೆಯಾಗಿದೆ.ಈ ಎಲ್ಲಾ ವಿಚಾರಗಳನ್ನು ತನ್ನಲ್ಲಿ ಅಡಗಿಸಿಕೊಂಡಿರುವುದರಿಂದಲೇ ಈ ಗೀತೆಯನ್ನು ಇದುವರೆವಿಗೂ ಐದು ಸಿನಿಮಾಗಳಲ್ಲಿ ಬಳಸಿಕೊಂಡಿದ್ದಾರೆ. ಹಾಗಾಗಿ ಈ ಕವನ ಪ್ರೇಮಿಗಳ ಪಾಲಿನ ನೆಚ್ಚಿನ ಯುಗಳ ಗೀತೆಯಾಗಿ ಇಂದಿಗೂ ಪ್ರಸಿದ್ಧಿಯಾಗಿ ಉಳಿದಿದೆ ಎಂದರೆ ತಪ್ಪಾಗಲಾರದು. ಈ ಕವನದ ಮೂಲಕ ಯುವ ಜನರನ್ನು ದಾರಿ ತಪ್ಪಿಸುತ್ತಿದ್ದಾರೆ, ಪ್ರೀತಿ ಮಾಡಲು ಪ್ರೇರೇಪಿಸುತ್ತಿದ್ದಾರೆ ಎಂದು ಯಾರಾದರೂ ಭಾವಿಸಿದರೆ ಅದು ಕೂಡ ಸಂಕುಚಿತ ಮನೋಭಾವವಾಗುತ್ತದೆ. ಆಧುನಿಕ ಯುಗದಲ್ಲಿ ಪ್ರೀತಿ ಎಂಬುದು ವ್ಯವಹಾರಿಕ ನೆಲೆಯಲ್ಲಿ , ಆಕರ್ಷಣೆಯ ಧಾಟಿಯಲ್ಲಿ, ಜಾತಿ ವ್ಯವಸ್ಥೆಯನ್ನು ಮೀರಿ ನಿಲ್ಲುತ್ತೇವೆ ಎಂಬ ಭ್ರಮೆಗಳ ಹಿನ್ನಲೆಯಲ್ಲಿ ಕ್ಷಣಿಕದಲ್ಲೇ ಪ್ರೀತಿ ಹುಟ್ಟಿ ಮೂರು ದಿನಗಳಲ್ಲೇ ಪ್ರೀತಿ ಮುಕ್ತಾಯವಾಗುವ ಇಂದಿನ ದಿನಕ್ಕೆ ನಿಜವಾದ ಪ್ರೀತಿ ಎಂದರೇನು ? ಆ ಪ್ರೀತಿಗೆ ಬಡವ – ಸಿರಿತನ ಎಂಬ ಲೆಕ್ಕಾಚಾರವಾಗಲೀ , ನನ್ನ ಮಾತೇ ನಡೆಯಬೇಕು , ನಾನೇ ಹೇಳಿದ ರೀತಿಯಲ್ಲಿಯೇ ಅವಳು / ಅವನು ಇರಬೇಕೆಂಬ ನಿರ್ಬಂಧವಾಗಲೀ , ನಾನು ಹೆಚ್ಚು ಅವಳೆಚ್ಚು ಎಂಬ ಅಹಂ ಆಗಲೀ ಕಂಡುಬರಲಾರದು. ಪರಸ್ಪರ ಅನ್ಯೋನ್ಯತೆಯಿಂದ ಬಾಳುವ ಪರಿಶುದ್ಧವಾದ ಪ್ರೇಮಿಯ ಮನದಾಳದ ನುಡಿಗಳನ್ನು ಈ ಕವನದಲ್ಲಿ ಹೇಳುವ ಮೂಲಕ ನಿಜವಾದ ಪ್ರೀತಿಗೆ ಸೆಳೆತಗಳಾಗಲೀ , ಆಕರ್ಷಣೆಗಳಾಗಲೀ ಇರುವುದಿಲ್ಲ ಎಂಬ ವಿಶಾಲ ದೃಷ್ಟಿಕೋನದಿಂದ ಬರೆಯಲಾಗಿರುವ ಈ ಕವನವನ್ನು ವ್ಯವಹಾರಿಕ ದೃಷ್ಟಿಕೋನದಿಂದಾಗಲೀ, ಪ್ರಾಯೋಗಿಕ ದೃಷ್ಟಿಕೋನದಿಂದಾಗಲೀ ತೆಗೆದುಕೊಳ್ಳದೆ ಭಾವನಾತ್ಮಕವಾಗಿ ಅರ್ಥೈಸಿಕೊಂಡರೆ ಕವನ ಮತ್ತಷ್ಟು ಆಪ್ತವಾಗಿ ಹೊಸ ದೃಷ್ಟಿಕೋನದಿಂದ ಕವನದ ಆಳವನ್ನು ಅರ್ಥಮಾಡಿಕೊಂಡರೆ ಕವಿತೆಗೆ ಮತ್ತಷ್ಟು ಮೆರಗು ಬರುತ್ತದೆ.ಪ್ರಸ್ತುತ ದಿನಗಳಲ್ಲಿ ಪ್ರೀತಿ ಎಂಬ ಪದವನ್ನು ಬಳಸಿಕೊಂಡು ಆಗುತ್ತಿರುವ ಮೋಸಗಳಿಗೆ ಹಾಗೂ ಜೀವನದ ಅಮೂಲ್ಯ ಸಮಯವನ್ನು ವ್ಯರ್ಥವಾಗಿ ಕಳೆಯುವ ಸಾಧನವಾಗುತ್ತಿರುವ ಪ್ರೀತಿ ಹೇಗೆ ಅರ್ಥಪೂರ್ಣ, ಭಾವಪೂರ್ಣ, ಭಾವನಾತ್ಮಕ ಬದುಕಿಗೆ ಒಂದು ಆಧಾರ ಎಂಬುದಕ್ಕೆ ಉತ್ತಮ ನಿದರ್ಶನವಾಗಿವೆ ಈ ಕವನದ ಪ್ರತಿ ಸಾಲುಗಳು...

–ರಾಘವೇಂದ್ರ ಸಿ ಎಸ್, ಮೊ. 9036389640

ಬದುಕಿನ ಹೋರಾಟದ

ಹಲಗಲಿ ಸಮರ

✍... ಗಣೇಶ ಅಮೀನಗಡ

ಅದು ತಿಳಿದವರು ಮಾಡಿದ ಹೋರಾಟವಲ್ಲ. ಬದುಕಿಗಾಗಿ ಈ ಹೋರಾಟ.

ಈಚೆಗೆ ಮೈಸೂರಿನ ರಂಗಾಯಣ ಪ್ರಸ್ತುತಪಡಿಸಿದ 'ಹಲಗಲಿ ಸಮರ' ನಾಟಕ ಕುರಿತು ಥಟ್ಟನೇ ಹೇಳಬಹುದಾದ ಮಾತಿದು. ಬುಡಕಟ್ಟು ಜನಾಂಗದವರಾದ ಹಲಗಲಿ ಬೇಡರು ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಹಲಗಲಿ ಗ್ರಾಮದವರು. ಅವರಿಗೆ ಬೇಟೆಯಾಡುವ ಬಿಲ್ಲು, ಬಾಣ, ಕೊಡಲಿಗಳೇ ಅಸ್ತ್ರಗಳು. ಆದರೆ ಬ್ರಿಟಿಷರು ಹೇರಿದ ನಿಶಸ್ತ್ರೀಕರಣ ಕಾಯ್ದೆ ವಿರುದ್ಧ ಬಂಡೆದ್ದು ಸಮರ ನಡೆಸಿದರು. ಆದರೆ ಬ್ರಿಟಿಷರು ಅದನ್ನು ದಂಗೆ ಎಂದು ಕರೆದರು. ಈ ದೇಶದ ಮೊದಲ ಸ್ವಾತಂತ್ರ್ಯ ಹೋರಾಟವಾದ 'ಸಿಪಾಯಿ ದಂಗೆ'ಯ ನಂತರ ನಡೆದ ಹಲಗಲಿ ಬೇಡರ ಸಮರ ಎರಡನೇ ಸ್ವಾತಂತ್ರ್ಯ ಹೋರಾಟವಾಗಿದೆ.

ಬ್ರಿಟಿಷರ ಅಹಂಕಾರಕ್ಕೆ ಪೆಟ್ಟು ಕೊಟ್ಟ ಹಲಗಲಿ ಬೇಡರು ತಮ್ಮ ಸ್ಥಳೀಯ ಹತಾರುಗಳ ಮೂಲಕ ನೂರಾರು ಬ್ರಿಟಿಷ್ ಅಧಿಕಾರಿಗಳನ್ನು, ಸೈನಿಕರನ್ನು ಹತ್ಯೆಗೈದರು. ಇದರಿಂದ ಕಂಗಾಲಾದ ಬ್ರಿಟಿಷರು ಕುತಂತ್ರದಿಂದ ಮಧ್ಯರಾತ್ರಿ ಊರಿಗೆ ಬೆಂಕಿ ಹಚ್ಚಿದರು. ಅನೇಕರನ್ನು ಸೆರೆ ಹಿಡಿದು ಗಲ್ಲಿಗೇರಿಸಿದರು. ಆದರೆ, ಹಲಗಲಿ ಬೇಡರ ಹೋರಾಟ ಚರಿತ್ರೆಯಲ್ಲಿ ಮಹತ್ವ ಪಡೆಯದಿದ್ದರೂ ಬ್ರಿಟಿಷ್ ಅಧಿಕಾರಿ ಜಾನ್ ಫೆಯ್ತಿಫುಲ್ ಫ್ಲೀಟ್ 1890ರಲ್ಲಿ ಲಾವಣಿಗಳನ್ನು ಇಂಗ್ಲಿಷಿನಲ್ಲಿ ಪ್ರಕಟಿಸಿದರೆ, ಲೇಖಕರಾದ ಕ್ಯಾತನಹಳ್ಳಿ ರಾಮಣ್ಣ ಅವರು ಕನ್ನಡಕ್ಕೆ ಅನುವಾದಿಸಿದರು. ಈ ಲಾವಣಿಗಳೊಂದಿಗೆ ಬಿ.ಎಸ್.ಗದ್ದಗಿಮಠ ಅವರ ಲಾವಣಿಗಳನ್ನು ಬಳಸಿಕೊಂಡು ಈ ನಾಟಕವನ್ನು ರಚಿಸಿ, ನಿರ್ದೇಶಿಸಿದವರು ಮೈಸೂರು ರಂಗಾಯಣ ನಿರ್ದೇಶಕರಾದ ಅಡ್ಡಂಡ ಸಿ.ಕಾರ್ಯಪ್ಪ.

'ಎಂಟೇ ದಿನಗಳಲ್ಲಿ ಸಿದ್ಧಪಡಿಸಿದ, ಬಹಳ ಕಡಿಮೆ ವೆಚ್ಚದ ನಾಟಕವಿದು' ಎಂದು ಹೆಮ್ಮೆಯಿಂದ ಹೇಳುತ್ತಾರೆ ಅಡ್ಡಂಡ ಕಾರ್ಯಪ್ಪ. ಅವರ ಸಮರ್ಥ ನಿರ್ದೇಶನಕ್ಕೆ ಸಾಕ್ಷಿಯಾಗಿ ಕಲಾವಿದರು ಸೊಗಸಾಗಿ ಅಭಿನಯಿಸಿದ್ದಾರೆ. ರಾಜೇಶ್ ಮಾಧವನ್, ಪಿ.ಚಾಂದಿನಿ, ಮಹೇಂದ್ರ ನಾಯಕ, ದಾನಪ್ಪ ತಳಗೇರಿ, ರಾಜಶೇಖರ ಗಂಗಾವತಿ, ದುರ್ಗಾ ಪರಮೇಶ, ಬಿ.ಜಿ.ಕೌಶಿಕ್, ಸೌಮ್ಯಾ ಪಾಣಾಜೆ, ಎಚ್.ಕೆ.ವನಿತಾ, ರಕ್ಷಿತ ಟಿ.ಎಲ್.ಗೌಡ, ಭಾಗ್ಯಲಕ್ಷ್ಮಿ ಕಾಳೆ, ಶರೀಫ್ ಕೆ.ಎ.ಕೊಪ್ಪಳ, ನಾಗರಾಜ



ಹರನೂರ, ಚಂದನ್ ಎಂ.ಕೆಬ್ಬೆಹುಂಡಿ, ಸಂಜಯ ಜಿ.ಸಜ್ಜಾ, ಮಿಲನ್ ಕೆ.ಗೌಡ, ಎಂ.ಸಚಿನ್, ಎಚ್.ಎಂ.ಗಿರೀಶ್ ಮಂಡ್ಯ, ವಿಜಯ ಕಾರ್ತಿಕ್, ಶ್ರೀಕಾಂತ, ಪಿ.ಚಂದನ್, ಕೆ.ಶ್ರೀನಿವಾಸ್, ದರ್ಶನ್ ನಾಯಕ ರಂಗದ ಮೇಲೆ ಮಿಂಚಿದರು. ಇನ್ನು ಎಚ್.ಕೆ.ದ್ವಾರಕನಾಥ್ ಅವರ ರಂಗಸಜ್ಜಿಕೆ, ಮಹೇಶ್ ಕಲ್ಲತ್ತಿ ಅವರ ಬೆಳಕು, ಆರ್.ಸಿ.ಧನಂಜಯ ಹಾಗೂ ಸುಬ್ರಹ್ಮಣ್ಯ ಅವರ ಸಂಗೀತವು ನಾಟಕವನ್ನು ಯಶಸ್ವಿಗೊಳಿಸಿತು. ಮುಖ್ಯವಾಗಿ ಉತ್ತರ ಕರ್ನಾಟಕದ ಭಾಷೆಯನ್ನು ಬಳಸಿದ್ದು ಗಮನಾರ್ಹ. ಆದರೆ ಅವಸರವಾಗಿ ಸಂಭಾಷಣೆ ಒಪ್ಪಿಸದೆ ಪಾತ್ರಗಳನ್ನು ಅನುಭವಿಸಿಕೊಂಡು, ಕೊಂಚ ನಿಧಾನವಾಗಿ ಕಲಾವಿದರು ಮಾತನಾಡಿದ್ದರೆ ಪ್ರೇಕ್ಷಕರಿಗೆ ಹಿತವಾಗಿರುತ್ತಿತ್ತು.





Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ಅಯೋಧ್ಯೆಯಲ್ಲಿ ದೀಪೋತ್ಸವಕ್ಕೆ ಮೋದಿ ಚಾಲನೆ

ರಾಮ ಜನ್ಮಭೂಮಿಯಲ್ಲಿ ಬೆಳಗಿದವು 18 ಲಕ್ಷ ದೀಪ

ಲಕ್ನೋ, ಅ.23– ರಾಮನೂರು ಅಯೋಧ್ಯೆಯಲ್ಲಿ ದೀಪಾವಳಿ ಹಬ್ಬ ಒಂದು ದಿನ ಮುಂಚಿತವಾಗಿಯೇ ದೀಪೋತ್ಸವ ನಡೆದಿದೆ. ದೀಪೋತ್ಸವಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಿದ್ದು, 18 ಲಕ್ಷ ದೀಪಗಳನ್ನು ಬೆಳಗುವ ಮೂಲಕ ದಾಖಲೆ ಸೃಷ್ಟಿಸಲಾಯಿತು.

ಅಯೋಧ್ಯೆಯ ಸರಯೂ ತಟದಲ್ಲಿ ಅದ್ಧೂರಿ ದೀಪೋತ್ಸವಕ್ಕೆ ಮೋದಿ ಚಾಲನೆ ನೀಡಿದರು. 18 ಲಕ್ಷ ಮಣ್ಣಿನ ದೀಪಗಳನ್ನು ಬೆಳಗಲಾಯಿತು. ದೀಪದ ಹೊಂಬೆಳಕಿನಲ್ಲಿ ಸರಯೂ ನದಿ ತೀರದ 40 ಘಾಟ್‌ಗಳು ಮಿಂದೆದ್ದಿದ್ದು, ಗಿನ್ನಿಸ್ ದಾಖಲೆಯನ್ನೂ ಬರೆದಿದೆ. ಪವಿತ್ರ ಸರಯೂ ನದಿಗೆ ಮಹಾ ಆರತಿ ಬೆಳಗಲಾಗಿದೆ. ಮ್ಯೂಸಿಕಲ್ ಲೇಸರ್ ಶೋ ಮೂಲಕ ರಾಮಾಯಣ ಪ್ರಸ್ತುತಿಪಡಿಸಲಾಯಿತು. ಈ ಸಂಭ್ರಮಕ್ಕೆ ರಷ್ಯಾ, ಮಾಲ್ಡೀವ್ಸ್, ಶ್ರೀಲಂಕಾ ಪ್ರತಿನಿಧಿಗಳ ಜೊತೆ ಪ್ರಧಾನಿ ಮೋದಿ ಸಾಕ್ಷಿಯಾದರು.

ಸಂಜೆ ಐದು ಗಂಟೆಗೆ ರಾಮಲೀಲಾ ದರ್ಶನ ಮಾಡಿದ ಮೋದಿ, ನಂತರ ನಿರ್ಮಾಣ ಹಂತದ ರಾಮಮಂದಿರವನ್ನು ಪರಿಶೀಲಿಸಿದರು. ರಾಮಕಥಾ ಉದ್ಯಾನಕ್ಕೂ ಭೇಟಿ ನೀಡಿದರು. 4 ಸಾವಿರ ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಇದೇ ವೇಳೆ ಪ್ರಧಾನಿ ಮೋದಿ ಚಾಲನೆ ನೀಡಿದರು.

ಇದೇ ವೇಳೆ, ಕೊರಿಯಾ ದೇಶದ ಜೊತೆಗಿನ ಬಾಂಧವ್ಯದ ದ್ಯೋತಕವಾಗಿ ಪ್ರಧಾನಿ ಕೊರಿಯಾ ಪಾರ್ಕ್ ಉದ್ಘಾಟಿಸಿದರು. ಶತಮಾನಗಳ ಹಿಂದೆ ಅಯೋಧ್ಯೆ ಯುವರಾಣಿ, ಕೊರಿಯಾ ಯುವರಾಜನನ್ನು ವರಿಸಿದ್ದರು. ಅಂದಹಾಗೇ, ದೇಗುಲಗಳನ್ನು ಸಿಂಗರಿಸಲು 2,500 ಟನ್ ಹೂಗಳನ್ನು ಬಳಸಲಾಗಿದೆ. 22 ಸಾವಿರ ಸ್ವಯಂ ಸೇವಕರು ದಾಖಲೆಯ ದೀಪೋತ್ಸವದಲ್ಲಿ ಪಾಲ್ಗೊಂಡಿದ್ದರು.

2021 ರಲ್ಲಿ ಅಯೋಧ್ಯೆ ಆಡಳಿತವು ದೀಪೋತ್ಸವದಲ್ಲಿ 9,41,551 ದೀಪ ಬೆಳಗಿಸುವ ಮೂಲಕ ವಿಶ್ವದಾಖಲೆ ಮಾಡಿತ್ತು. ಆದರೆ ಉಜ್ಜಯಿನಿ ದೇವಸ್ಥಾನದಲ್ಲಿ ಮಹಾಶಿವರಾತ್ರಿಯಂದು 11,71,078 ದೀಪಗಳನ್ನು ಬೆಳಗಿಸಿ ಈ ದಾಖಲೆ ಮುರಿಯಲಾಗಿತ್ತು. ಇದೀಗ 18 ಲಕ್ಷ ಮಣ್ಣಿನ ದೀಪಗಳನ್ನು ಬೆಳಗಿಸುವ ಮೂಲಕ ಅಯೋಧ್ಯೆ ಮತ್ತೊಂದು ಗಿನ್ನಿಸ್ ದಾಖಲೆ ಮಾಡಿದೆ.

ಬ್ರಿಟನ್ ಪ್ರಧಾನಿ ಸ್ಥಾನಕ್ಕೆ ಸ್ಪರ್ಧೆ ರಿಷಿ ಸುನಾಕ್ ಘೋಷಣೆ



ಲಂಡನ್, ಅ.23– ಲಿಜ್ ಟ್ರಸ್ ಅವರು ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಬ್ರಿಟನ್‌ನ ಮಾಜಿ ಹಣಕಾಸು ಸಚಿವ ರಿಷಿ ಸುನಾಕ್ ಅವರು ಯುಕೆ ಪ್ರಧಾನಿ ಸ್ಥಾನಕ್ಕೆ ಸ್ಪರ್ಧಿಸಲು ಉಮೇದುವಾರಿಕೆ ಸಲ್ಲಿಸುವುದಾಗಿ ಭಾನುವಾರ ಘೋಷಿಸಿದ್ದಾರೆ.

ಬೋರಿಸ್ ಜಾನ್ಸನ್ ಪ್ರಧಾನಿ ಸ್ಥಾನದಿಂದ ಕೆಳಗಿಳಿದ ಸಂದರ್ಭದಲ್ಲಿ ಆ ಸ್ಥಾನಕ್ಕೆ ಸ್ಪರ್ಧಿಸಿ ಲಿಜ್ ಟ್ರಸ್ ಎದುರು ಸೋಲನನುಭವಿಸಿದ್ದ ಭಾರತ ಮೂಲದ ರಿಷಿ ಸುನಾಕ್ ಈಗ ಮತ್ತೆ ಸ್ಪರ್ಧೆಗೆ ಮುಂದಾಗಿದ್ದಾರೆ. ಅಲ್ಲದೇ ದೇಶದ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಶ್ರಮಿಸುವುದಾಗಿ ಭರವಸೆ ಕೂಡ ಕೊಟ್ಟಿದ್ದಾರೆ. ಈ ಕುರಿತು ಟ್ವೀಟ್ ಮಾಡಿರುವ ಸುನಾಕ್, ಯುನೈಟೆಡ್ ಕಿಂಗ್‌ಡಮ್ ಒಂದು ಶ್ರೇಷ್ಠ ದೇಶವಾಗಿದೆ. ಆದರೆ ನಾವು ತೀವ್ರ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದ್ದೇವೆ. ಆರ್ಥಿಕ ಬಿಕ್ಕಟ್ಟು ಸುಧಾರಿಸುವುದಕ್ಕಾಗಿ ನಿಮ್ಮ ಮುಂದಿನ ಪ್ರಧಾನಿಯಾಗಲು ನಿಂತಿದ್ದೇನೆ ಎಂದು ತಿಳಿಸಿದ್ದಾರೆ.

ದೇಶದ ಆರ್ಥಿಕತೆಯನ್ನು ಸರಿಪಡಿಸಬೇಕಾಗಿದೆ. ಅಷ್ಟೇ ಅಲ್ಲ ನಮ್ಮ ಪಕ್ಷವನ್ನು ಸಹ ಒಗ್ಗೂಡಿಸುತ್ತೇನೆ. ಅದರ ಪ್ರಯೋಜನವನ್ನು ದೇಶಕ್ಕೆ ನೀಡಲು ಕಾರ್ಯಪ್ರವೃತ್ತನಾಗುತ್ತೇನೆ ಎಂದು ಸುನಾಕ್ ಹೇಳಿದ್ದಾರೆ. ಪ್ರತಿಪಕ್ಷಗಳು ಸಾರ್ವತ್ರಿಕ ಚುನಾವಣೆಯ ಬೇಡಿಕೆಯನ್ನು ಪುನರುಚ್ಚರಿಸಿದ್ದರಿಂದ ಗುರುವಾರ ಪ್ರಧಾನಿ ಸ್ಥಾನಕ್ಕೆ ಟ್ರಸ್ ರಾಜೀನಾಮೆ ನೀಡಿದರು. ಇದರ ಬೆನ್ನಲ್ಲೇ ಪ್ರಧಾನಿ ಸ್ಥಾನಕ್ಕೆ ಸ್ಪರ್ಧಿಸುವುದಾಗಿ ಸುನಾಕ್ ಘೋಷಿಸಿದ್ದಾರೆ.

ಜಾರ್ಖಂಡ್‌ನಲ್ಲಿ ಟೆಕ್ಕಿ ಗ್ಯಾಂಗ್ ರೇಪ್, ಇಬ್ಬರು ಅಪ್ರಾಪ್ತರು ಸೇರಿದಂತೆ ಏಳು ಮಂದಿ ಬಂಧನ

ರಾಂಚಿ, ಅ.23– 26 ವರ್ಷದ ಸಾಫ್ಟ್‌ವೇರ್ ಎಂಜಿನಿಯರ್ ಗ್ಯಾಂಗ್ ರೇಪ್ ಮಾಡಿದ್ದ ಇಬ್ಬರು ಅಪ್ರಾಪ್ತರು ಸೇರಿದಂತೆ ಏಳು ಮಂದಿಯನ್ನು ಜಾರ್ಖಂಡ್ ರಾಜ್ಯದ ಪೂರ್ವ ಸಿಂಗ್ ಭುಮ್ ಜಿಲ್ಲೆಯಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಗ್ಯಾಂಗ್ ರೇಪ್ ನಡೆದಿದ್ದ ಚೈಬಾಸಾದ ಹಳೆಯ ಏರೋಡ್ರೋಮ್ ಬಳಿಯ ನಿರ್ಜನ ಸ್ಥಳಕ್ಕೆ ಆಗಾಗ್ಗೆ ಬರುವ ಕೆಲವು ಸ್ಥಳೀಯರನ್ನು ವಿಚಾರಣೆ ನಡೆಸಿದ ನಂತರ ದುಷ್ಕರ್ಮಿಗಳನ್ನು ಬಂಧಿಸಲಾಗಿದೆ ಎಂದು ಅವರು ಹೇಳಿದರು. ಪ್ರಸಿದ್ಧ ಐಟಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆ ಗುರುವಾರ ಸಂಜೆ ದ್ವಿಚಕ್ರ ವಾಹನದಲ್ಲಿ ತನ್ನ ಗೆಳೆಯನೊಂದಿಗೆ ಹೊರಗೆ ಹೋಗಿದ್ದ ವೇಳೆ ಸಾಮೂಹಿಕ ಅತ್ಯಾಚಾರ ನಡೆದಿದೆ. ಯುವತಿ ಹಾಗೂ ಆತನ ಗೆಳೆಯನನ್ನು ತಡೆದು ಹಲ್ಲೆ ನಡೆಸಿದ ಯುವಕರ ಗುಂಪು, ಯುವತಿಯನ್ನು ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಸಾಮೂಹಿಕ ಅತ್ಯಾಚಾರ ನಡೆಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪ್ರಕರಣದ ತನಿಖೆಗಾಗಿ ರಚಿಸಲಾದ ವಿಶೇಷ ತಂಡವೊಂದು ಆರೋಪಿಗಳನ್ನು ಬಂಧಿಸಿದೆ ಎಂದು ಪೊಲೀಸ್ ಮಹಾನಿರ್ದೇಶಕ ಅಶುತೋಷ್ ಶೇಖರ್ ಹೇಳಿದ್ದಾರೆ. ಬಂಧಿತರಿಂದ ಯುವತಿಯ ವಾಲೆಟ್, ಮೊಬೈಲ್ ಫೋನ್ ವಶಕ್ಕೆ ಪಡೆಯಲಾಗಿದೆ ಎಂದು ಅವರು ತಿಳಿಸಿದ್ದಾರೆ.

36 ಸಂವಹನ ಉಪಗ್ರಹಗಳು ಕಕ್ಷೆಗೆ: ಇತಿಹಾಸ ಬರೆದ ಇಸ್ರೊ



ಶ್ರೀಹರಿಕೋಟಾ/ಬೆಂಗಳೂರು, ಅ.23– ಇಲ್ಲಿನ ಉಡಾವಣಾ ಕೇಂದ್ರದಿಂದ ಭಾನುವಾರ ನಸುಕಿನಲ್ಲಿ ನಭಕ್ಕೆ ಚಿಮ್ಮಿದ ಭಾರವಾದ ರಾಕೆಟ್ ಎಲ್‌ವಿಎಂ 3ಎಂ2, 36 ಸಂವಹನ ಉಪಗ್ರಹಗಳನ್ನು ಉದ್ದೇಶಿತ ಕಕ್ಷೆಗಳಿಗೆ ಯಶಸ್ವಿಯಾಗಿ ಸೇರಿಸಿದೆ. ಇದು ಸಂಸ್ಥೆಯ ಪಾಲಿಗೆ ಐತಿಹಾಸಿಕ ಕ್ಷಣ ಎಂದು ಇಸ್ರೊ ಹೇಳಿದೆ.

ಬ್ರಿಟನ್ ಮೂಲದ ಒನ್‌ವೆಬ್ ಲಿಮಿಟೆಡ್ ಎಂಬ ಕಂಪನಿಗೆ ಸೇರಿದ ಈ ಸಂವಹನ ಉಪಗ್ರಹಗಳನ್ನು ಬ್ರಾಡ್‌ಬ್ಯಾಂಡ್ ಸೇವೆಗಾಗಿ ಬಳಸಲಾಗುತ್ತದೆ. ಒಬ್‌ವೆಬ್ ಲಿಮಿಟೆಡ್, ಇಸ್ರೊದ ವಾಣಿಜ್ಯ ಅಂಗ ಸಂಸ್ಥೆ ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್‌ನ (ಎನ್‌ಎಸ್‌ಐಎಲ್) ಗ್ರಾಹಕ ಸಂಸ್ಥೆಯಾಗಿದೆ. ಭಾರ್ತಿ ಎಂಟರ್‌ಪ್ರೈಸಸ್ ಈ ಒಬ್‌ವೆಬ್ ಕಂಪನಿಯಲ್ಲಿ ಗಣನೀಯ ಪ್ರಮಾಣದ ಹೂಡಿಕೆ ಹೊಂದಿದೆ.

ಈ ಉಪಗ್ರಹಗಳ ಯಶಸ್ವಿ ಉಡಾವಣೆ ಬೆನ್ನಲ್ಲೇ ಪ್ರತಿಕ್ರಿಯಿಸಿದ್ದ ಇಸ್ರೊ ಮುಖ್ಯಸ್ಥ ಎಸ್.ಸೋಮನಾಥ್, ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಲ್ಲಿನ ವಿಜ್ಞಾನಿಗಳಿಗೆ ಭಾನುವಾರ ನಸುಕಿನಲ್ಲಿಯೇ ದೀಪಾವಳಿ ಸಂಭ್ರಮ ಶುರುವಾಗಿದೆ ಎಂದು ಹೇಳಿದರು.

ಟಿ–20 ವಿಶ್ವಕಪ್: ಪಾಕ್ ವಿರುದ್ಧ ಭಾರತಕ್ಕೆ ಜಯ

ಮೈಸೂರಿನಲ್ಲಿ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಾಚರಣೆ



ಮೈಸೂರು, ಅ.23(ಜಿಎ)– ಇಂಡೋ–ಪಾಕ್ ರೋಚಕ ಪಂದ್ಯದಲ್ಲಿ ಭಾರತ ವಿಜಯ ಸಾಧಿಸಿದ ಹಿನ್ನೆಲೆಯಲ್ಲಿ ಮೈಸೂರಲ್ಲಿ ಕ್ರಿಕೆಟ್ ಪ್ರೇಮಿಗಳು ಪಟಾಕಿ ಸಿಡಿಸಿ ಪರಸ್ಪರ ಸಿಹಿ ವಿತರಿಸಿ ವಿಜಯೋತ್ಸವ ಆಚರಿಸಿದರು.


ಟಿ–20 ವಿಶ್ವಕಪ್ ಟೂರ್ನಿಯ ಮೊದಲ ಪಂದ್ಯದಲ್ಲಿಯೇ ಪಾಕಿಸ್ತಾನದ ವಿರುದ್ಧ ಭಾರತ ತಂಡ ಭರ್ಜರಿ ಜಯ ಸಾಧಿಸಿದ ಹಿನ್ನೆಲೆಯಲ್ಲಿ ಕ್ರಿಕೆಟ್ ಪ್ರೇಮಿಗಳು ನಗರದ ಚಾಮುಂಡಿಪುರಂ ವೃತ್ತದಲ್ಲಿ ಜಮಾವಣೆಗೊಂಡು ಭಾರತದ ಧ್ವಜವನ್ನು ಹಿಡಿದು ಪಟಾಕಿ ಸಿಡಿಸಿ ಭಾರತ ಕ್ರಿಕೆಟ್ ತಂಡಕ್ಕೆ ಜೈಕಾರ ಕೂಗಿ ಪರಸ್ಪರ ಸಿಹಿ ವಿತರಿಸಿದರು.

ನಂತರ ಮಾತನಾಡಿದ ಕ್ರಿಕೆಟ್ ಪ್ರೇಮಿಗಳು ಇಂದಿನ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಪ್ರದರ್ಶನ ವಿಶೇಷವಾಗಿ ಗಮನ ಸೆಳೆಯಿತು. ಅದರೊಂದಿಗೆ ವಿಜಯದ ಗಡಿ ದಾಟಿ ಗೆಲುವು ತಂದುಕೊಟ್ಟಿರುವುದು ಭಾರತದ ಕ್ರಿಕೆಟ್ ಪ್ರೇಮಿಗಳಿಗೆ ದೀಪಾವಳಿಯ ಉಡುಗೊರೆ ನೀಡಿದಂತಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಈ ವೇಳೆ ಬಸವರಾಜ್ ಬಸಪ್ಪ, ಮಧು ಎನ್.ಪೂಜಾರ್, ಜೆಡಿಎಸ್ ಮುಖಂಡರಾದ ಯದುನಂದ, ನಂದೀಶ್, ಹೊಯ್ಸಳ ರಂಗನಾಥ್, ಮಂಜುನಾಥ, ಅನಿಲ್ ಕುಮಾರ್, ನಾರಾಯಣ ಬಾಬು, ಪ್ರಮೋದ್, ಅಪೂರ್ವ ಸುರೇಶ್, ಸುಚೇಂದ್ರ, ನವೀನ್ ಕೆಂಪಿ, ತೀರ್ಥ ಕುಮಾರ್, ಮಂಜಪ್ಪ, ಅಹಿಂದ ನಟರಾಜ್ ಸೇರಿದಂತೆ ಮತ್ತಿತರರಿದ್ದರು.

ಜನರ ಸಮಸ್ಯೆ ಬಗೆಹರಿಸುವಲ್ಲಿ ಬಿಜೆಪಿ ಸರ್ಕಾರ ವಿಫಲ

ಮಡಿಕೇರಿಯಲ್ಲಿ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಕಿಡಿ



ಮಡಿಕೇರಿ,ಅ.23– ರಾಜ್ಯದ ಬಿಜೆಪಿ ಸರ್ಕಾರ ಕೇವಲ ಹಲವು ಘೋಷಣೆಗಳಿಗಷ್ಟೇ ಸೀಮಿತವಾಗಿದ್ದು, ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಕ್ರಮಗಳು ರಾಜ್ಯದ ಜನತೆಗೆ ತಲುಪುತ್ತಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸರ್ಕಾರವನ್ನು ಲೇವಡಿ ಮಾಡಿದರು.

ಮಡಿಕೇರಿ ನಗರದ ಹೊರ ವಲಯದ ಕ್ಯಾಸಲ್ ವಿಲೇಜ್‌ನಲ್ಲಿ ಆಯೋಜಿಸಿದ್ದ ಜೆಡಿಎಸ್ ಮಾಜಿ ಜಿಲ್ಲಾಧ್ಯಕ್ಷ ಮೇರಿಯಂಡ ಸಂಕೇತ್ ಪೂವಯ್ಯ ದಂಪತಿ ಪುತ್ರ ವಿವೇಕ್ ಪೂವಯ್ಯ ಮತ್ತು ವಿರಾಜಪೇಟೆಯ ನಡಿಕೇರಿಯಂಡ ರಾಜನ್ ಮುದ್ದಪ್ಪ ದಂಪತಿ ಪುತ್ರಿ ನಿವಿತ ಅವರ ನಿಶ್ಚಿತಾರ್ಥ ಸಮಾರಂಭದಲ್ಲಿ ಪಾಲ್ಗೊಂಡು ವಧು-ವರರನ್ನು ಆಶೀರ್ವದಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕುಮಾರಸ್ವಾಮಿ, ಕೊಡಗಿನಲ್ಲಿ ಹಲವಾರು ಪ್ರಮುಖ ಸಮಸ್ಯೆಗಳಿದ್ದರೂ ಇವುಗಳನ್ನು ಬಗೆಹರಿಸುವಲ್ಲಿ ಸರ್ಕಾರ ವಿಫಲವಾಗಿದೆ. ಆದರೆ ದೊಡ್ಡ ಪ್ರಮಾಣದಲ್ಲಿ ಜಾಹೀರಾತು ನೀಡಿ ಸಾಧನೆ ಮಾಡಿದ್ದೇವೆ ಎಂದು ಪ್ರಚಾರ ಪಡೆಯುತ್ತಿದ್ದಾರೆ. ಕೊಡಗಿನಲ್ಲಿ ಕಳೆದ ಮೂರು ವರ್ಷಗಳ ಹಿಂದೆ ಮಳೆಯಲ್ಲಿ ತೊಂದರೆ ಅನುಭವಿಸಿದ ಜನರಿಗೆ ಇನ್ನೂ ಕೂಡ ನ್ಯಾಯ ಒದಗಿಸಲು ಬಿಜೆಪಿ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ರೈತರು ಬೆಳೆದ ಬೆಳೆಗಳು ಮಳೆಯಿಂದ ನಷ್ಟ ಗೊಂಡಿದ್ದರೂ ಸರ್ಕಾರದ ಎನ್‌ಡಿಆರ್‌ಎಫ್ ನಿಯಮದಂತೆ ಪರಿಹಾರ ನೀಡಲಾಗಿದೆ ಎಂದು ಹಾರಿಕೆ ಉತ್ತರ ನೀಡುತ್ತಿದ್ದಾರೆ.

ಕೋವಿಡ್ ಸಂದರ್ಭದಲ್ಲಿ ಮೃತ ಕುಟುಂಬದ ಸದಸ್ಯರಿಗೆ 1 ಲಕ್ಷ ಪರಿಹಾರ ನೀಡುವುದಾಗಿ ಮಾಡಿದ ಘೋಷಣೆಯಲ್ಲಿ ಶೇ.70 ಭಾಗದ ಜನರಿಗೆ ನೆರವು ತಲುಪಿಲ್ಲ, ಕೇವಲ ಜಾಹೀರಾತು ಹಾಗೂ ಸರ್ಕಾರದ ಆದೇಶದಲ್ಲಿ ಮಾತ್ರ ಯೋಜನೆ ಕಾಣುತ್ತದೆ ಎಂದು ಬಿಜೆಪಿ ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ರೈತರ ಸಂಕಷ್ಟದಲ್ಲಿ ಸ್ಪಂದಿಸುವಲ್ಲಿ ಬಿಜೆಪಿ ಸರ್ಕಾರ ವಿಳಂಬ ಧೋರಣೆ ಅನುಸರಿಸುತ್ತಿದೆ. ಸರ್ಕಾರದ ನಡವಳಿಕೆಯು ಅಭಿವೃದ್ಧಿಗಿಂತ ಕೇವಲ ಧರ್ಮಗಳ ನಡುವೆ, ಸಮಾಜಗಳ ನಡುವೆ ಒಡಕನ್ನು ತರುವ ನಿಟ್ಟಿನಲ್ಲಿ ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳು ಜನರ ಜೀವದ ಮೇಲೆ ಚೆಲ್ಲಾಟವಾಡುವಲ್ಲಿ ನಿರತವಾಗಿವೆ ಎಂದು ಆರೋಪಿಸಿದರು.

ಬೆಂಬಲ ಬೆಲೆ ದೊರೆಯುತ್ತಿಲ್ಲ: ಪ್ರವಾಸೋದ್ಯಮದ ಮೂಲಕ ಯುವಕರಿಗೆ ಉದ್ಯೋಗ ಕಲ್ಪಿಸುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ದೂರಿದ ಕುಮಾರಸ್ವಾಮಿ ಮುಂದೆ ನಡೆಯುವ ಚುನಾವಣೆಯಲ್ಲಿ ಜೆಡಿಎಸ್ ಪಕ್ಷದ ವತಿಯಿಂದ ಜಿಲ್ಲೆಯಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಕೆಲಸ ನಡೆಯಲಿದೆ. ಕೊಡಗಿನಲ್ಲಿ ಪಕ್ಷದ ಅಪಾರ ಬೆಂಬಲಿಗರು ಇದ್ದಾರೆ, ಇವರೊಂದಿಗೆ ಚುನಾವಣೆಗೆ ತೆರಳುವುದಾಗಿ ತಿಳಿಸಿದರು.

ನಿಶ್ಚಿತಾರ್ಥ ಕಾರ್ಯಕ್ರಮದಲ್ಲಿ ಎಂಎಲ್‌ಸಿ ಅಡಗೂರು ವಿಶ್ವನಾಥ್, ಮಂಡೆ ಪಂಡ ಸುಜಾ ಕುಶಾಲಪ್ಪ, ಮಾಜಿ ಎಂ.ಎಲ್.ಸಿ. ಮೇರಿಯಂಡ ಸಿ.ನಾಣಯ್ಯ, ಚೆಪ್ಪುಡೀರ ಅರುಣ್ ಮಾಚಯ್ಯ, ಮಾಜಿ ಸಚಿವ ಬಿ.ಎ. ಜೀವಿಜಯ, ಕೆಪಿಸಿಸಿ ವಕ್ತಾರ ಅಜ್ಜಿಕುಟ್ಟೀರ ಪೊನ್ನಣ್ಣ, ಬಗರ್‌ಹುಕುಂ ಅಧ್ಯಕ್ಷ ಗಿರೀಶ್ ಗಣಪತಿ, ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಂ.ಗಣೇಶ್, ಅರಮೇರಿ ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಸಿ.ಎನ್.ಸಿ ಸಂಚಾಲಕ ಎನ್.ಯು. ನಾಚಪ್ಪ, ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ವೈವಿಧ್ಯ ಸಂಸ್ಕೃತಿಯ ಹಬ್ಬ ದೀಪಾವಳಿ



ಗೋಣಿಕೊಪ್ಪ, ಅ.23– ವೈವಿಧ್ಯಮಯ ಸಂಸ್ಕೃತಿಯ ಹಿಂದೂ ರಾಷ್ಟ್ರದಲ್ಲಿ ದೀಪಾವಳಿ ಹಬ್ಬವನ್ನು ವಿವಿಧ ಸಮುದಾಯದವರು ವಿಭಿನ್ನ ರೀತಿಯಲ್ಲಿ ಆಚರಿಸುವ ಮೂಲಕ ನಮ್ಮ ಸಂಸ್ಕೃತಿ, ಸಂಪ್ರದಾಯವನ್ನು ಎತ್ತಿ ಹಿಡಿಯುತ್ತಾರೆ ಎಂದು ಗೋಣಿಕೊಪ್ಪ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಚೈತ್ರಾ ಬಿ. ಚೇತನ್ ತಿಳಿಸಿದರು.

ಪೊನ್ನಂಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ನಮ್ಮ ದೇಶ ನಮ್ಮ ಸಂಸ್ಕೃತಿ ಆಚರಣೆಯ ಅಂಗವಾಗಿ ಕೊಡಗು ಹಿಂದೂ ಮಲಯಾಳಿ ಸಮಾಜದ ಸಭಾಂಗಣದಲ್ಲಿ ಆಯೋಜಿಸಿದ್ದ ದೀಪಾವಳಿ ಆಚರಣೆ ಕಾರ್ಯಕ್ರಮವನ್ನು ಮಣ್ಣಿನ ಹಣತೆ ಹಚ್ಚುವ ಮೂಲಕ ಉದ್ಘಾಟಿಸಿ, ಮಾತನಾಡಿದರು.

ಕುಟುಂಬಗಳನ್ನು ಬೆಸೆಯಲು ದೀಪಾವಳಿ ಆಚರಣೆ ಪಾರಂಪರಿಕವಾಗಿ ನಡೆಯುತ್ತಿದೆ. ವಿವಿಧ ಸಮುದಾಯದವರು ವಿಭಿನ್ನ ರೀತಿಯಲ್ಲಿ ಹಬ್ಬವನ್ನು ಆಚರಿಸುತ್ತಾರೆ. ಮೂರು ದಿನಗಳು ನಡೆಯುವ ಹಬ್ಬದಲ್ಲಿ ಲಕ್ಷ್ಮಿ ಪೂಜೆ ಹಾಗೂ ಕೆಲವೆಡೆ ಹಿರಿಯರಿಗೆ ಎಡೆ ಇಡುವ ಕಾರ್ಯವನ್ನು ಪ್ರಮುಖವಾಗಿ ನಡೆಸುತ್ತಾರೆ. ನಮ್ಮ ಸಂಸ್ಕೃತಿ ಆಚರಣೆಗಳ ಬಗ್ಗೆ ಯುವ ಸಮುದಾಯಕ್ಕೆ ತಿಳಿಯಪಡಿಸುವ ಮಹತ್ವದ ಕಾರ್ಯ ಆಗಬೇಕಾಗಿದೆ ಎಂದು ಹೇಳಿದರು.

ಕನ್ನಡ ಗೌಡ ಜನಾಂಗ ಸಮುದಾಯದ ಪ್ರಮುಖ ಹೆಚ್.ಬಿ. ಗಣೇಶ್ ಮಾತನಾಡಿ, ದೀಪಾವಳಿಯನ್ನು ಪಾರಂಪರಿಕವಾಗಿ ಆಚರಿಸುತ್ತಿದ್ದು, ಮನೆಯನ್ನು ರಂಗೋಲಿಯಿಂದ ಅಲಂಕರಿಸಿ ದೀಪಗಳನ್ನು ಬೆಳಗುವ ಮೂಲಕ ಸಡಗರದಿಂದ ಆಚರಿಸಲಾಗುತ್ತದೆ. ಲಕ್ಷ್ಮಿ ಪೂಜೆ, ಗೋ ಪೂಜೆಗಳನ್ನು ನೆರವೇರಿಸಿ ಸಿಹಿ ಪದಾರ್ಥಗಳನ್ನು ತಯಾರಿಸಿ ಸವಿಯುವ ಮತ್ತು ಹಂಚುವ ಮೂಲಕ ಹಬ್ಬದ ಸಂಭ್ರಮವಿದೆ ಎಂದು ಹೇಳಿದರು.

ತುಳು ಭಾಷಿಕ ಸಮುದಾಯದ ಮುಖಂಡ ಶೇಖರ್ ಭಂಡಾರಿ ಮಾತನಾಡಿ, ಕರಾವಳಿ ಪ್ರದೇಶದಲ್ಲಿ ತನ್ನದೇ ಆದ ಸಂಪ್ರದಾಯದೊಂದಿಗೆ ದೀಪಾವಳಿಯನ್ನು ಆಚರಿಸಲಾಗುತ್ತದೆ. ಮೂರು ದಿನಗಳು ಹಬ್ಬವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಲಾಗುವುದು. ಹೊಸ ಬಟ್ಟೆ ತೊಡುವುದರಿಂದ ರಂಗೋಲಿ, ದೀಪಾಲಂಕಾರ ಹೀಗೆ ವಿಭಿನ್ನ ಆಚರಣೆಗಳನ್ನು ಮಾಡಲಾಗುವುದು. ಲಕ್ಷ್ಮಿ ಪೂಜೆ, ಗೋ ಪೂಜೆ ಮತ್ತು ಹಿರಿಯರಿಗೆ ಎಡೆ ಇಡುವ ಕಾರ್ಯವನ್ನು ಸಹ ಈ ಸಂದರ್ಭದಲ್ಲಿ ನಡೆಸಲಾಗುವುದು ಎಂದು ಹೇಳಿದರು.

ದೈವಜ್ಞ ಬ್ರಾಹ್ಮಣರ ಸಮುದಾಯದ ಮುಖಂಡ ಎಂ.ಜಿ. ಮೋಹನ್ ಮಾತನಾಡಿ, ವಿಶೇಷವಾಗಿ ಸೌತೆಕಾಯಿ ಕಡುಬು ತಯಾರಿಸಿ ದೇವರಿಗೆ ನೈವೇದ್ಯ ಅರ್ಪಿಸುವುದು, ಮಹಾಲಕ್ಷ್ಮಿ ಪೂಜೆ ಮತ್ತು ಗೋವುಗಳನ್ನು ಶೃಂಗರಿಸಿ ಪೂಜಿಸಿ ತಯಾರಿಸಿದ ವಿಶೇಷ ಖಾದ್ಯಗಳನ್ನು ಗೋವುಗಳಿಗೆ ನೀಡುವ ಮೂಲಕ ಪಾರಂಪರಿಕವಾಗಿ ನಡೆಸುತ್ತಿರುವುದಾಗಿ ತಿಳಿಸಿದರು.

ತೆಲುಗು ಸಮುದಾಯದಲ್ಲಿ ದೀಪಾವಳಿ ಆಚರಿಸುವ ಮಾಹಿತಿಯನ್ನು ತೆಲುಗು ಮುಖಂಡ ನಾಗಿರೆಡ್ಡಿ ನೀಡಿದರು.

ತಮಿಳು ಭಾಷಿಕ ಜನಾಂಗದ ಶಿವಶಕ್ತಿ, ಪೊನ್ನಂಪೇಟೆ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಸಣ್ಣುವಂಡ ಕಿಶೋರ್ ನಾಚಪ್ಪ, ಜಿ.ಡಿ. ಹಿಮ್ಮತ್ ರಾಮ್ ಮಾತನಾಡಿದರು.

ಈ ಸಂದರ್ಭ ವಿವಿಧ ಜನಾಂಗಗಳ ದೀಪಾವಳಿ ಆಚರಣೆಯ ಬಗ್ಗೆ ಮಾಹಿತಿ ನೀಡಿದ ಅತಿಥಿಗಳಿಗೆ ಮಣ್ಣಿನ ದೀಪಗಳನ್ನು ನೀಡುವ ಮೂಲಕ ಗೌರವಿಸಲಾಯಿತು.

ಕಾರ್ಯಕ್ರಮ ಸಂಚಾಲಕ ಚಿಮ್ಮಣಮಾಡ ದರ್ಶನ್ ದೇವಯ್ಯ ಮಾತನಾಡಿದರು. ಪ್ರಧಾನ ಕಾರ್ಯದರ್ಶಿ ಎನ್.ಎನ್. ದಿನೇಶ್, ಕಾರ್ಯದರ್ಶಿ ಮಂಡೇಡ ಅಶೋಕ್, ಖಜಾಂಚಿ ವಿ.ವಿ.ಅರುಣ್ ಕುಮಾರ್, ನಿರ್ದೇಶಕ ಜಗದೀಶ್ ಜೋಡುಬೀಟಿ, ಸದಸ್ಯ ಟಿ.ಆರ್. ಮನೋಜ್‌ಕುಮಾರ್ ಇತರರಿದ್ದರು.

ಕಾಂಗ್ರೆಸ್‌ನಲ್ಲಿ ನವ ಮನ್ವಂತರ ಆರಂಭ

ಮಲ್ಲಿಕಾರ್ಜುನ ಖರ್ಗೆಗೆ ಪ್ರಧಾನಿ ಆಗುವ ಅವಕಾಶ

ಕುಶಾಲನಗರ, ಅ.23– ಮಡಿಕೇರಿ ವಿಧಾನ ಸಭಾ ಕ್ಷೇತ್ರದಲ್ಲಿ ಹೊಸ ಮುಖಗಳಿಗೆ ಅವಕಾಶ ಕೊಟ್ಟರೆ ಮಾತ್ರ ಜಿಲ್ಲೆಯ ಅಭಿವೃದ್ಧಿ ಸಾಧ್ಯ ಎಂದು ಕೆಪಿಸಿಸಿ ವಕ್ತಾರ ಹೆಚ್.ಎಸ್. ಚಂದ್ರಮೌಳಿ ಹೇಳಿದರು.

ಶನಿವಾರ ಸಂಜೆ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಕಳೆದ 25 ವರ್ಷಗಳಿಂದ ಒಬ್ಬರೇ ವ್ಯಕ್ತಿ ಕೈಯಲ್ಲಿ ಅಧಿಕಾರ ಇದೆ. ಆದರೆ ಕ್ಷೇತ್ರದಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಕೆಲಸಗಳು ಆಗಿಲ್ಲ. ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದಾಗಿಲ್ಲ. ಪ್ರತಿಭಾವಂತರನ್ನು ಬೆಳಕಿಗೆ ತರುವ ಸೂಕ್ತ ವಾತಾವರಣವೇ ನಿರ್ಮಾಣ ಆಗಿಲ್ಲ. ಕಳೆದ 3 ದಶಕಗಳಲ್ಲಿ ಒಂದಿಬ್ಬರು ಮಾತ್ರ ಐಎಎಸ್ ಅಧಿಕಾರಿಗಳು ಜಿಲ್ಲೆಯಿಂದ ಹೊರ ಬಂದಿದ್ದಾರೆ. ಈಗ ಅಧಿಕಾರದಲ್ಲಿ ಇರುವವರು ಮುಂದಿನ ಚುನಾವಣೆಯಲ್ಲಾದರೂ ವಿಶ್ರಾಂತಿ ತೆಗೆದುಕೊಳ್ಳಲಿ. ಹೊಸಬರಿಗೆ ಅವಕಾಶ ಮಾಡಿಕೊಡಲಿ. ಹೊಸ ಚಿಂತನೆಗಳಿಂದ ತುಂಬಿರುವ ಹೊಸ ತಲೆಮಾರಿನ ಕಾರ್ಯವೈಖರಿ ನೋಡಲಿ ಎಂದರು. ಮಲ್ಲಿಕಾರ್ಜುನ ಖರ್ಗೆ ಎಐಸಿಸಿ ಅಧ್ಯಕ್ಷರಾಗಿ ಆಯ್ಕೆ ಆಗಿರುವುದರಿಂದ ಕಾಂಗ್ರೆಸ್‌ಗೆ ಹೊಸ ಚೈತನ್ಯ ಬಂದಿದೆ. ಪ್ರಜಾಪ್ರಭುತ್ವ ಮಾದರಿಯಲ್ಲಿ ಖರ್ಗೆ ಚುನಾಯಿತರಾಗಿದ್ದು, ಪಕ್ಷದಲ್ಲಿ ಇನ್ನು ಮುಂದೆ ನವ ಮನ್ವಂತರವನ್ನು ಕಾಣಬಹುದಾಗಿದೆ. ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮುಂದೆ ಪ್ರಧಾನಿ ಆಗುವ ಅವಕಾಶವೂ ಇದೆ ಎಂದು ಹೇಳಿದರು.

ರಾಹುಲ್ ಗಾಂಧಿ ನಡೆಸುತ್ತಿರುವ ಐಕ್ಯತಾ ಯಾತ್ರೆ ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ ಬಲ ತುಂಬಿದೆ. ಈ ಯಾತ್ರೆಗೆ ಸೇರುತ್ತಿದ್ದ ಜನಸಾಗರವೇ ಇದಕ್ಕೆ ಸಾಕ್ಷಿಯಾಗಿದೆ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಪಕ್ಷ ಅಧಿಕಾರಕ್ಕೆ ಬರುವುದು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪಕ್ಷದ ಹಿರಿಯ ಮುಖಂಡರಾದ ಕಾಂತರಾಜು ಮತ್ತು ಶರತ್ ಇದ್ದರು.

ಉತ್ತಮ ಆರೋಗ್ಯಕ್ಕೆ ಆಯುರ್ವೇದ ಔಷಧಿ ಸಹಕಾರಿ



ಮಂಡ್ಯ,ಅ.23– ಉತ್ತಮ ಆರೋಗ್ಯಕ್ಕೆ ಆಯುರ್ವೇದ ಔಷಧಿ ಸಹಕಾರಿಯಾಗಿದ್ದು, ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಮಾಡುವುದರ ಜೊತೆಗೆ ಜನಸಾಮಾನ್ಯರಿಗೆ ಆಯುರ್ವೇದದ ಮಹತ್ವದ ಬಗ್ಗೆ ತಿಳಿಸೋಣ ಎಂದು ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು ತಿಳಿಸಿದರು.

ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ನಡೆದ 7ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮುಂದಿನ 10 ವರ್ಷದಲ್ಲಿ ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲೂ ಒಂದು ಆಯುರ್ವೇದ ಹೆಲ್ತ್ ಕ್ಲಿನಿಕ್ ಇರಬೇಕು. ಎಲ್ಲವೂ ಪರಿವರ್ತನೆ ಆಗಬೇಕು. ಪರಿವರ್ತನೆ ಜಗದ ನಿಯಮ. ಉತ್ತಮವಾದ ಗಿಡಮೂಲಿಕೆಗಳಿಂದ ತಯಾರಾದ ಔಷಧಿಗಳನ್ನು ಬಳಸಬೇಕು ಎಂದರು. ಭಾರತ ದೇಶಕ್ಕೆ ಆಯುರ್ವೇದದ ಮೂಲಕ ಗೌರವ ಘನತೆ ಹೆಚ್ಚಾಗಿದೆ. ಪ್ರಪಂಚದಲ್ಲಿ ಎಲ್ಲರೂ ನಮ್ಮ ದೇಶಕ್ಕೆ ಬಂದು ಆಯುರ್ವೇದವನ್ನು ಕುರಿತು ಅಧ್ಯಯನ ಮಾಡುತ್ತಿದ್ದಾರೆ ಎಂದರು.

ಪೋಷಕರು ಮಕ್ಕಳಿಗೆ ಆಯುರ್ವೇದದ ಪದ್ಧತಿಯ ತಿಳಿ ಹೇಳಿ ಆರೋಗ್ಯ ರಕ್ಷಣೆ ಮಾಡಿಕೊಳ್ಳಬೇಕು. ಮನುಷ್ಯ ಆರೋಗ್ಯವಾಗಿದ್ದರೆ ಮನಸ್ಸು ವಿಶಾಲವಾಗಿರುತ್ತದೆ. ಆತ ಸಂತೋಷವಾಗಿರುತ್ತಾನೆ ಎಂದು ಹೇಳಿದರು.

ಆಯುರ್ವೇದ ಅಧಿಕಾರಿ ಡಾ.ಮಧುಮಾಲತಿ ಮಾತನಾಡಿ, ಭಾರತ ಸರ್ಕಾರ ಆಯುರ್ವೇದದ ಬಗ್ಗೆ ಜನರಿಂದ ಜನರಿಗಾಗಿ ಸಂದೇಶ, ಜನರ ಸಹಭಾಗಿತ್ವ ಜನಾಂದೋಲನ ಎಂಬ ಮೂರು ಉದ್ದೇಶವನ್ನು ಇಟ್ಟುಕೊಂಡು ಆಯುರ್ವೇದ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಉದ್ಯಾನವನ, ಜಮೀನು ಹಾಗೂ ಮನೆಯ ಸುತ್ತ ಮುತ್ತಲಿನಲ್ಲಿ ಆಯುರ್ವೇದ ಗಿಡಗಳನ್ನು ನೆಟ್ಟು ಅವುಗಳನ್ನು ಸಾರ್ವಜನಿಕರಿಗೆ ಪರಿಚಯಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಮಂಡ್ಯದ 6 ತಾಲೂಕಿನಲ್ಲಿ ಆಯುರ್ವೇದ ಪದ್ಧತಿಯ ಉದ್ದೇಶಗಳನ್ನು ಯಶಸ್ವಿಯಾಗಿ ತಿಳಿಸಲಾಗಿದೆ. ಆಯುರ್ವೇದವನ್ನು ಜೀವನದಲ್ಲಿ ಅಳವಡಿಸಿಕೊಂಡು ಇನ್ನೊಬ್ಬರಿಗೆ ಮಾದರಿಯಾಗಿ ಬದುಕೋಣ ಎಂದರು.

ಆಯುಷ್ ಇಲಾಖೆಯ ಆಯುರ್ವೇದ ತಜ್ಞ ವೈದ್ಯರು ಹಾಗೂ ನಿವೃತ್ತ ಜಂಟಿ ನಿರ್ದೇಶಕ ಡಾ.ಬಿ.ಎ.ವೆಂಕಟೇಶ್ ಮಾತನಾಡಿ, ಬೆಟ್ಟದ ನೆಲ್ಲಿಕಾಯಿಯ ಚೂರನ್ನು ಪ್ರತಿದಿನ ಒಂದು ಚಮಚ ತೆಗೆದುಕೊಂಡರೆ ಎಷ್ಟೋ ರೋಗಗಳನ್ನು ತಡೆಗಟ್ಟಬಹುದು. ಶರೀರದ ಶಕ್ತಿಯನ್ನು ವಯಸ್ಸಿಗನುಗುಣವಾಗಿ ಸದೃಢವಾಗಿ ಇಟ್ಟುಕೊಳ್ಳಬಹುದು. ಹೀಗೆ ಅನೇಕ ದ್ರವ್ಯಗಳು ಇವೆ. ಅವುಗಳನ್ನು ಪ್ರತಿದಿನ ನಾವು ತೆಗೆದುಕೊಂಡರೆ ಆರೋಗ್ಯವಾಗಿ ಇರಲು ಸಾಧ್ಯ ಎಂದರು.

ಚರ್ಮರೋಗಕ್ಕೆ ಆಯುರ್ವೇದದಲ್ಲಿ ಬಹಳ ಶ್ರೇಷ್ಠವಾದ ಔಷಧಿಗಳು ಇವೆ. ಇದರ ಜೊತೆಗೆ ಆಯುರ್ವೇದದಲ್ಲಿ ಅನೇಕ ಸಮಸ್ಯೆಗಳಿಗೆ ಉತ್ತಮವಾದ ಔಷಧಿಗಳು ಇವೆ. ಅವುಗಳನ್ನು ತೆಗೆದುಕೊಂಡು ಸಮಸ್ಯೆಗಳಿಂದ ದೂರ ಉಳಿಯಲು ಸಾಧ್ಯ. ಚರ್ಮ ಮತ್ತು ಸೌಂದರ್ಯಕ್ಕೆ ಸಂಬಂಧಿಸಿದಂತೆ ಅನೇಕ ಔಷಧಿಗಳು ಆಯುರ್ವೇದದಲ್ಲಿ ಲಭ್ಯವಿದೆ ಆಯುರ್ವೇದದ ಬ್ಯೂಟಿಪಾರ್ಲರ್‌ಗಳಲ್ಲಿ ಯಾವುದೇ ಅಡ್ಡ ಪರಿಣಾಮವಿಲ್ಲದೆ ಉತ್ತಮ ಚಿಕಿತ್ಸೆ ಸಿಗುತ್ತದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಆಯುರ್ವೇದದಲ್ಲಿ ಉತ್ತಮ ಸೇವೆ ಸಲ್ಲಿಸಿದವರನ್ನು ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಪಂ ಉಪ ಕಾರ್ಯದರ್ಶಿ ಸಂಜೀವಪ್ಪ, ಜಿಲ್ಲಾ ಆಯುಷ್ ವೈದ್ಯಾಧಿಕಾರಿ ಡಾ.ಬಿ.ಎಸ್.ಸೀತಾಲಕ್ಷ್ಮಿ, ಜೆ.ಎಸ್.ಎಸ್ ಆಯುರ್ವೇದ ವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕ ಡಾ.ವೀಣಾ ಜಿ.ರಾವ್, ಶ್ರೀ ವೇದವ್ಯಾಸ ಯೋಗ ಪ್ರತಿಷ್ಠಾನ ಕಾರ್ಯದರ್ಶಿ ಕೆ.ರಾಘವೇಂದ್ರ, ಡಾ.ಕಲಾರಾಧ, ಡಾ.ಶ್ರೀನಿವಾಸ್ ಹಾಗೂ ಜಿಲ್ಲೆಯ ಎಲ್ಲಾ ಆಯುಷ್ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸ್ಪರ್ಧೆಯಲ್ಲಿ ಭಾಗವಹಿಸುವುದೇ ದೊಡ್ಡ ಅವಕಾಶ



ಮಂಡ್ಯ,ಅ.23– ಶಿಕ್ಷಣದ ಜೊತೆಗೆ ಕಲೆ, ಕ್ರೀಡೆ, ಸಾಹಿತ್ಯ ಕೂಡ ಮನುಷ್ಯನಿಗೆ ಅವಶ್ಯಕವಾಗಿದ್ದು, ಮಕ್ಕಳು ಶಿಕ್ಷಣದ ಜೊತೆಗೆ ಕಲೆ ಸೇರಿದಂತೆ ಇತರೆ ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ತೊಡಗಿಕೊಳ್ಳಬೇಕೆಂದು ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯ ಡಾ.ಇ.ಸಿ.ನಿಂಗರಾಜ್‌ಗೌಡ ತಿಳಿಸಿದರು.

ನಗರದ ಗಾಂಧಿ ಭವನದಲ್ಲಿ ನಡೆದ ಕಲಾತಪಸ್ವಿ ಆರ್ಟ್ ಕ್ಲಬ್ ಮೊದಲನೇ ವರ್ಷದ ವಾರ್ಷಿಕೋತ್ಸವ ಹಾಗೂ ಶ್ರೀಮತಿ ದೇವಮ್ಮ ಚಿಕ್ಕಮರೀಗೌಡ ಸ್ಮರಣಾರ್ಥ 6ನೇ ವರ್ಷದ ರಾಜ್ಯ ಮಟ್ಟದ ಚಿತ್ರಕಲಾ ಮತ್ತು ವೇಷಭೂಷಣ ಸ್ಪರ್ಧೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಚಿತ್ರಕಲೆ ಸ್ಪರ್ಧೆಯಲ್ಲಿ ಭಾಗವಹಿಸುವುದು ಮುಂದಿನ ಅವಕಾಶಗಳಿಗೆ ಇದೊಂದು ಉತ್ತಮವಾದ ಸಹಕಾರವಾಗಲಿದೆ. ಹಾಗಾಗಿ ಸ್ಪರ್ಧೆಯಲ್ಲಿ ಭಾಗ ವಹಿಸುವುದೇ ದೊಡ್ಡ ಅವಕಾಶ ಅದರ ಸದುಪಯೋಗ ಪಡೆದುಕೊಳ್ಳಿ ಎಂದು ತಿಳಿಸಿದರು.

ಕಲಾತಪಸ್ವಿ ಟ್ರಸ್ಟ್ ಕ್ಲಬ್ 16 ವರ್ಷಗಳಿಂದಲೂ ಸಹ ನಿರಂತರವಾಗಿ ಚಿತ್ರಕಲೆ ಸ್ಪರ್ಧೆಗಳು ಹಾಗೂ ಸುಮಾರು 438 ಕಾರ್ಯಕ್ರಮಗಳನ್ನು ಆಯೋಜನೆ ಮಾಡಿ ರಾಜ್ಯ ಹಾಗೂ ಜಿಲ್ಲೆಯಿಂದ ಮೂರು ಸಾವಿರಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿರುತ್ತಾರೆ ಎಂದು ಹೇಳಿದರು.

ಕಲಾತಪಸ್ವಿ ಟ್ರಸ್ಟ್ ಮಕ್ಕಳಲ್ಲಿರುವ ಸೃಜನಾತ್ಮಕ ಕಲೆಗಳನ್ನು ಅರಳಿಸಿ ಬೆಳೆಸುವಂತಹ ಕೆಲಸಗಳನ್ನು ನಿರಂತರವಾಗಿ ಮಾಡುತ್ತಾ ಬಂದಿದೆ ಇದು ನಿಜಕ್ಕೂ ಶ್ಲಾಘನೀಯ ಎಂದರು.

ಕಾರ್ಯಕ್ರಮದಲ್ಲಿ ಟ್ರಸ್ಟ್‌ನ ಶಿವಪ್ರಸಾದ್, ಅನಿಲ್‌ಕುಮಾರ್, ಎಸ್.ಎನ್. ನಾಗೇಂದ್ರ, ಡಾ.ಮಾದೇಶ್ ಶ್ರೀಕಂಠೇಗೌಡ, ಲೋಹಿತ್‌ಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನೀಲನಹಳ್ಳಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಪುಟ್ಟರಾಜು ಭೂಮಿ ಪೂಜೆ



ಪಾಂಡವಪುರ, ಅ.23– ತಾಲೂಕಿನ ನೀಲನಹಳ್ಳಿ ಗ್ರಾಮದಲ್ಲಿ 5 ಕೋಟಿ ರೂ.ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಎಸ್.ಪುಟ್ಟರಾಜು ಭೂಮಿ ಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ನಾರಾಯಣಪುರದಿಂದ ಎರೆಗೌಡನಹಳ್ಳಿ ಗ್ರಾಮದವರೆಗಿನ ರಸ್ತೆ, ತೊಣ್ಣೂರುಕೆರೆ ಹಿನ್ನೀರಿನ ಪ್ರದೇಶದಿಂದ ನೀಲನಹಳ್ಳಿ ಗ್ರಾಮದ ಮಾರ್ಗವಾಗಿ ಶ್ರೀರಂಗಪಟ್ಟಣ–ಬೀದರ್ ಹೆದ್ದಾರಿವರೆಗೆ ಹಾಗೂ ಬೀದರ್ ಹೆದ್ದಾರಿಯಿಂದ ಹಳೇಬೀಡು ಗ್ರಾಮ ಸಂಪರ್ಕಿಸುವ ರಸ್ತೆ ಅಭಿವೃದ್ಧಿಗೆ ಭೂಮಿ ಪೂಜೆ ನೆರವೇರಿಸಲಾಗಿದೆ. ಕಳೆದ ಹಲವು ವರ್ಷಗಳಿಂದಲೂ ಸಹ ಈ ರಸ್ತೆಗಳು ಗುಂಡಿಬಿದ್ದು ಅಧ್ವಾನಗೊಂಡಿದ್ದು, ವಾಹನ ಸಂಚಾರಕ್ಕೆ ತೊಂದರೆ ಉಂಟಾಗುತ್ತಿತ್ತು. ಆ ಹಿನ್ನೆಲೆಯಲ್ಲಿ ರಸ್ತೆಯನ್ನು ಅಭಿವೃದ್ಧಿಪಡಿಸುವಂತೆ ಗ್ರಾಮಸ್ಥರು ಒತ್ತಾಯಿಸಿದ್ದರಿಂದ ಅನುದಾನ ಬಿಡುಗಡೆ ಮಾಡಿ ರಸ್ತೆ ಅಭಿವೃದ್ಧಿಗೆ ಭೂಮಿ ಪೂಜೆ ನೆರವೇರಿಸಲಾಗಿದೆ ಎಂದರು. ಈ ಸಂದರ್ಭದಲ್ಲಿ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಚಲುವರಾಜು, ಗ್ರಾಪಂ ಸದಸ್ಯ ಪ್ರಮೋದ್, ಯಜಮಾನರಾದ ಗಿರೀಗೌಡ, ಬೋರೇಗೌಡ, ಚನ್ನೇಗೌಡ, ರಾಮಚಂದ್ರು, ಭಗವಾನ್, ತಿಮ್ಮೇಗೌಡ, ಎಲ್.ಕೆ.ದುರ್ಗೇಶ್‌ಗೌಡ, ಹೊನ್ನಗಿರಿಗೌಡ, ಕೃಷ್ಣೇಗೌಡ ಸೇರಿದಂತೆ ಹಲವರು ಇದ್ದರು.

ಚಾ.ನಗರದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಸ್ಮರಣೆ

ಮೊದಲ ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿ ರಾಣಿ ಚೆನ್ನಮ್ಮ: ಶಾಸಕ ಪುಟ್ಟರಂಗಶೆಟ್ಟಿ



ಚಾಮರಾಜನಗರ, ಅ.23– ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗ ಮಂದಿರದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ರಾಜ್ಯ ಮಟ್ಟದ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಸಿ.ಪುಟ್ಟರಂಗಶೆಟ್ಟಿ, ಭಾರತದಲ್ಲಿ ಬ್ರಿಟಿಷರಿಗೆ ಮೊದಲ ಸೋಲಿನ ರುಚಿ ಉಣಿಸಿದ ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿ ರಾಣಿ ಚೆನ್ನಮ್ಮನವರು. ಕಿತ್ತೂರು ಒಂದು ಚಿಕ್ಕ ಸಂಸ್ಥಾನವಾಗಿದ್ದರೂ ಮರಾಠರು, ನಿಜಾಮರು, ಬ್ರಿಟಿಷರೊಂದಿಗೆ ರಾಜಿಯಾಗದ ಸ್ಫೂರ್ತಿಯುತ ಹೋರಾಟದ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡಿದ್ದ ರಾಣಿ ಚೆನ್ನಮ್ಮ ಅವರು ಚಿಕ್ಕವಯಸ್ಸಿನಲ್ಲೇ ಎಲ್ಲಾ ಬಗೆಯ ಯುದ್ಧ ಕೌಶಲ್ಯಗಳನ್ನು ಕರಗತ ಮಾಡಿಕೊಂಡಿದ್ದರು. ಅವರ ಇತಿಹಾಸ, ಆದರ್ಶ ಹೋರಾಟದ ಬದುಕನ್ನು ಪಠ್ಯಪುಸ್ತಕದಲ್ಲಿ ಸವಿಸ್ತಾರವಾಗಿ ತಿಳಿಸುವ ಅಗತ್ಯವಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಕೂಡಲ ಸಂಗಮ ಲಿಂಗಾಯಿತ ಪಂಚಮಸಾಲಿ ಮಹಾ ಪೀಠ ಧರ್ಮಕ್ಷೇತ್ರದ ಪ್ರಥಮ ಜಗದ್ಗುರು ಶ್ರೀ ಬಸವಜಯ ಮೃತ್ಯುಂಜಯ ಸ್ವಾಮೀಜಿ, ರಾಣಿ ಚೆನ್ನಮ್ಮನವರ ಜನ್ಮದಿನವನ್ನು 2017ರಿಂದ ಆಚರಿಸಲಾಗುತ್ತಿದೆ. ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗ, ಬಲಿದಾನಗೈದ ರಾಣಿ ಚೆನ್ನಮ್ಮ ಜಯಂತಿಯನ್ನು ಉತ್ತರ ಕರ್ನಾಟಕದ ಭಾಗದಲ್ಲಿ ಆಯೋಜಿಸಲಾಗುತ್ತಿತ್ತು. ಅದನ್ನು ದಕ್ಷಿಣ ಭಾಗಕ್ಕೂ ಪರಿಚಯಿಸುವ ಸಲುವಾಗಿ ಈ ಬಾರಿ ಚಾಮರಾಜನಗರದಲ್ಲಿ ರಾಜ್ಯಮಟ್ಟದ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಬೆಳಗಾವಿ ಕಿತ್ತೂರು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರು ಹಾಗೂ ವಿಮರ್ಶಕರಾದ ಡಾ. ಮೈತ್ರೇಯಿಣಿ ಗದಿಗೆಪ್ಪಗೌಡ ವಿಶೇಷ ಉಪನ್ಯಾಸ ನೀಡಿದರು.

ಮರಿಯಾಲದ ಮುರುಘ ರಾಜೇಂದ್ರ ಸ್ವಾಮಿ ಮಹಾಸಂಸ್ಥಾನ ಮಠಾಧ್ಯಕ್ಷ ಶ್ರೀ ಇಮ್ಮಡಿ ಮುರುಘ ರಾಜೇಂದ್ರಸ್ವಾಮಿ, ನಗರದ ಸಿದ್ದಮಲ್ಲೇಶ್ವರ ವಿರಕ್ತ ಮಠಾಧ್ಯಕ್ಷ ಶ್ರೀ ಚನ್ನಬಸವಸ್ವಾಮಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಕಾರ್ಯಕ್ರಮದ ಆರಂಭದಲ್ಲಿ ಕರ್ನಾಟಕ ವಿಧಾನಸಭೆ ಉಪಸಭಾಧ್ಯಕ್ಷ ಆನಂದ ಮಾಮನಿ ಅವರ ನಿಧನ ಗೌರವಾರ್ಥ ಎರಡು ನಿಮಿಷಗಳ ಮೌನ ಆಚರಿಸಲಾಯಿತು.

ನಗರಸಭೆ ಅಧ್ಯಕ್ಷೆ ಸಿ.ಎಂ.ಆಶಾ, ಸದಸ್ಯರಾದ ಮಮತಾ ಬಾಲಸುಬ್ರಹ್ಮಣ್ಯಂ, ಹೆಚ್ಚುವರಿ ಜಿಲ್ಲಾಧಿಕಾರಿ ಎಸ್.ಕಾತ್ಯಾಯಿನಿದೇವಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಗುರುಲಿಂಗಯ್ಯ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಎಂ. ವಿಶ್ವೇಶ್ವರಯ್ಯ, ತಹಶೀಲ್ದಾರ್ ಬಸವರಾಜು, ಚಾಮುಲ್ ಅಧ್ಯಕ್ಷ ನಾಗೇಂದ್ರಪ್ರಸಾದ್, ಸಮಾಜದ ಮುಖಂಡರಾದ ಮಲ್ಲೇಶ್, ಮೋಹನ್, ಮಟ್ಟಸ್ವಾಮಿ, ಇತರರು ಕಾರ್ಯಕ್ರಮದಲ್ಲಿದ್ದರು. ಕಾರ್ಯಕ್ರಮದಲ್ಲಿ ಗದಗಿನ ಶಂಕರಪ್ಪ ರಾಮಪ್ಪ ಸಂಕಣ್ಣನವರ ಮತ್ತು ತಂಡದಿಂದ ನಡೆಸಿಕೊಟ್ಟ ಗೀತ ಗಾಯನ ಗಮನ ಸೆಳೆಯಿತು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಚಾಮರಾಜೇಶ್ವರ ದೇವಾಲಯದಿಂದ ವಿವಿಧ ಜಾನಪದ ಕಲಾತಂಡಗಳೊಡನೆ ಹೊರಟ ಕಿತ್ತೂರು ರಾಣಿ ಚೆನ್ನಮ್ಮ ಅವರ ಭಾವಚಿತ್ರದ ಮೆರವಣಿಗೆಗೆ ಶ್ರೀ ಬಸವ ಜಯ ಮೃತ್ಯುಂಜಯ ಮಹಾಸ್ವಾಮಿ, ಶ್ರೀ ಇಮ್ಮಡಿ ಮುರುಘ ರಾಜೇಂದ್ರಸ್ವಾಮಿ, ಶ್ರೀ ಚನ್ನಬಸವಸ್ವಾಮಿ, ಇತರೆ ಗಣ್ಯರು ಚಾಲನೆ ನೀಡಿದರು.

ಪ್ರತಿಭಟನೆ ಎಚ್ಚರಿಕೆ; ಜಯಂತಿ ಕಾರ್ಯಕ್ರಮಕ್ಕೆ ಗೈರಾದ ಸಚಿವರು

ಚಾಮರಾಜನಗರ: ಜಿಲ್ಲಾಡಳಿತ ಇಂದಿಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಗೈರು ಹಾಜರಾದದ್ದು ಚರ್ಚೆಗೆ ಗ್ರಾಸವಾಯಿತು.

ಶನಿವಾರ ರಾತ್ರಿ ಗುಂಡ್ಲುಪೇಟೆ ತಾಲೂಕಿನ ಹಂಗಳ ಗ್ರಾಮದಲ್ಲಿ ವಾಸ್ತವ್ಯ ಹೂಡಿದ್ದ ಸೋಮಣ್ಣ ಅವರು, ನಗರದಲ್ಲಿ ನಡೆಯಲಿರುವ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಕಾರ್ಯಕ್ರಮಕ್ಕೆ ಮಧ್ಯಾಹ್ನ 12.30ಕ್ಕೆ ಆಗಮಿಸಲಿದ್ದಾರೆ ಎಂದು ಸಚಿವರ ಪ್ರವಾಸ ಪಟ್ಟಿಯಲ್ಲಿ ತಿಳಿಸಲಾಗಿತ್ತು. ಆದರೆ ಸಚಿವರು ಶನಿವಾರ ಸಂಜೆ ಹಂಗಳದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಹಿಳೆಯೊಬ್ಬರಿಗೆ ಕಪಾಳಮೋಕ್ಷ ಮಾಡಿದ ದೃಶ್ಯ ಮಾಧ್ಯಮದಲ್ಲಿ ಬಿತ್ತರವಾಯಿತು ಹಾಗೂ ವಾಟ್ಸಾಪ್ ಗ್ರೂಪ್‌ಗಳಲ್ಲಿ ಹರಿದಾಡಿತು. ಇದರಿಂದ ಕೆರಳಿದ ರೈತ ಸಂಘದ ಕಾರ್ಯಕರ್ತರು ಸಚಿವರ ವಿರುದ್ಧ ಪ್ರತಿಭಟನೆಗೆ ಸಿದ್ಧತೆ ನಡೆಸಿದರು. ಸಚಿವರು ಪಾಲ್ಗೊಳ್ಳುವ ಕಾರ್ಯಕ್ರಮಗಳಲ್ಲಿ ಕಪ್ಪು ಬಾವುಟ ಪ್ರದರ್ಶಿಸಲಾಗುವುದು ಎಂದು ಎಚ್ಚರಿಸಿದರು. ಈ ಹಿನ್ನೆಲೆಯಲ್ಲಿ ಸಚಿವರು ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳದೇ ಗುಂಡ್ಲುಪೇಟೆಯಿಂದ ನೇರವಾಗಿ ಕೊಳ್ಳೇಗಾಲಕ್ಕೆ ತೆರಳಿದರು.

ಕಾರು–ಬಸ್ ಡಿಕ್ಕಿ ತಡೆಗೋಡೆಯಿಂದ ಪ್ರಯಾಣಿಕರು ಪಾರು



ಯಳಂದೂರು, ಅ.23– ಪಟ್ಟಣದ ಪ್ರಸಿದ್ಧ ಯಾತ್ರಾ ಕ್ಷೇತ್ರ ಬಿಳಿಗಿರಿರಂಗನ ಬೆಟ್ಟದಲ್ಲಿ ಭಾನುವಾರ ಕೆಎಸ್‌ಆರ್‌ಟಿಸಿ ಬಸ್ ಹಾಗೂ ಕಾರಿನ ನಡುವೆ ಅಪಘಾತ ಸಂಭವಿಸಿದ್ದು, ಅದೃಷ್ಟವಶಾತ್ ವಾಹನಗಳಲ್ಲಿದ್ದ ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಬಿಳಿಗಿರಿರಂಗನಬೆಟ್ಟದಿಂದ ಯಳಂದೂರು ಕಡೆಗೆ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಹಾಗೂ ಯಳಂದೂರಿನಿಂದ ಬೆಟ್ಟಕ್ಕೆ ತೆರಳುತ್ತಿದ್ದ ಕಾರಿನ ನಡುವೆ ಬೆಟ್ಟದ ರಸ್ತೆಯ ಗವಿಬೋರೆಯ ಬಳಿ ಅಪಘಾತ ಸಂಭವಿಸಿದೆ. ಬಸ್ ರಸ್ತೆ ಬದಿಯಲ್ಲಿದ್ದ ತಡೆಗೋಡೆಗೆ ಡಿಕ್ಕಿ ಹೊಡೆದು ನಿಂತ ಪರಿಣಾಮ ಇದರಲ್ಲಿದ್ದ 60ಕ್ಕೂ ಹೆಚ್ಚು ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಶನಿವಾರ, ಭಾನುವಾರ ಹಾಗೂ ಸಾರ್ವತ್ರಿಕ ರಜಾದಿನಗಳಲ್ಲಿ ಇಲ್ಲಿ ಪ್ರಯಾಣಿಕರ ಸಂಖ್ಯೆ ವಾಹನ ದಟ್ಟಣೆಯೂ ಅಧಿಕವಾಗಿರುತ್ತದೆ. ಆದರೆ ರಸ್ತೆ ಕಿರಿದಾಗಿದ್ದು, ಇತ್ತೀಚೆಗೆ ಬೀಳುತ್ತಿರುವ ಮಳೆಯಿಂದ ದುಸ್ಥಿತಿ ತಲುಪಿ ಸಂಚಾರಕ್ಕೆ ತೊಡಕಾಗಿದೆ. ಈ ಹಿನ್ನೆಲೆಯಲ್ಲಿ ಸಾರಿಗೆ ಸಂಸ್ಥೆಯಿಂದ ಸುಸ್ಥಿತಿಯಲ್ಲಿರುವ ಬಸ್‌ಗಳು ಹಾಗೂ ನುರಿತ ಚಾಲಕರನ್ನು ನಿಯೋಜಿಸುವಂತೆ ಪ್ರವಾಸಿಗರು, ಭಕ್ತರು ಒತ್ತಾಯಿಸಿದ್ದಾರೆ.

ಗಣಪತಿ ವಿಸರ್ಜನೆ



ಚಾಮರಾಜನಗರ, ಅ.23–ನಗರದ ರಥದ ಬೀದಿಯಲ್ಲಿ ಪ್ರತಿಷ್ಠಾಪಿಸಿದ್ದ ಶ್ರೀ ವಿದ್ಯಾಗಣಪತಿಯನ್ನು ಭಾನುವಾರ ಮುಂಜಾನೆ ದೊಡ್ಡ ಅರಸಿನಕೊಳದಲ್ಲಿ ವಿಸರ್ಜಿಸಲಾಯಿತು. ಶನಿವಾರ ಬೆಳಗ್ಗೆ ಗಣಪತಿಯ ವಿಸರ್ಜನಾ ಮೆರವಣಿಗೆ ಆರಂಭವಾಗಿತ್ತು. ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆದು ಅಂತಿಮವಾಗಿ ದೊಡ್ಡ ಅರಸಿನಕೊಳದಲ್ಲಿ ಭಾನುವಾರ ಮುಂಜಾನೆ 5 ಗಂಟೆ ಸಮಯದಲ್ಲಿ ಕ್ರೇನ್ ಮೂಲಕ ಗಣಪತಿ ಮೂರ್ತಿಯನ್ನು ವಿಸರ್ಜಿಸಲಾಯಿತು. ಈ ವೇಳೆ ಬಾಣಬಿರುಸು ಹಾರಿಸಲಾಯಿತು. ಇದು ನೋಡುಗರನ್ನು ಆಕರ್ಷಿಸಿತು.



ಚಾಮರಾಜನಗರ ತಾಲೂಕಿನ ಬದನಗುಪ್ಪೆ ಗ್ರಾಮದ ಶ್ರೀ ಮಾರಮ್ಮ ತಾಯಿ ದೇವಸ್ಥಾನದ ಬೀದಿಯಲ್ಲಿ 10 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ–ಚರಂಡಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಗ್ರಾಪಂ ಪ್ರಭಾರ ಅಧ್ಯಕ್ಷೆ ಎಂ.ಸುಮಾ, ಸದಸ್ಯರಾದ ಎಂ.ಕುಮಾರ್, ಎಂ.ಶೀಲ, ನಾಗವೇಣಿ, ದಾಕ್ಷಾಯಿಣಿ, ಮಹದೇವಮ್ಮ, ಕಾಂಗ್ರೆಸ್ ಮುಖಂಡರಾದ ಬಿ.ಪಿ.ನಾಗರಾಜಮೂರ್ತಿ, ಗೋಪಾಲ್‌ನಾಯ್ಕ ಮಹೇಶ್ ಸೊಸೈಟಿ ಅಧ್ಯಕ್ಷ ಶಿವಪಾದಪ್ಪ ನಿರ್ದೇಶಕರಾದ ಜಿ.ನಂಜುಂಡಸ್ವಾಮಿ, ಶಿವಕುಮಾರ್, ಬಿ.ಆರ್.ಕುಮಾರ್,ಇಂಜಿನಿಯರ್ ಮಧು, ಪಿಡಿಓ ಕೆ.ಜಿ.ಮಹದೇವಸ್ವಾಮಿ ಹಾಜರಿದ್ದರು.

ಮಂಗಳಾಂಬ ನಿಧನ



ಚಾಮರಾಜನಗರ, ಅ.23–ನಗರದ ಜಮಾಲ್ ಬೀದಿ ಎರಡನೇ ಕ್ರಾಸ್ ನಿವಾಸಿ, ಮಂಗಳಾಂಬ(86) ಭಾನುವಾರ ಮಧ್ಯಾಹ್ನ ನಿಧನರಾದರು. ಮೃತರು ಐವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಬೆಳಗ್ಗೆ 8 ಗಂಟೆಗೆ ನಗರದ ಶಂಕರ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಲ್ಲದಕ್ಕೂ ಸಿದ್ದರಾಮಯ್ಯರತ್ತ ಬೊಟ್ಟು ಮಾಡುವ ಬಿಜೆಪಿ: ಕುರುಬರ ಸಂಘ ಆಕ್ಷೇಪ




ಮೈಸೂರು, ಅ.23(ಪಿಎಂ)– ತಮ್ಮ ಆಡಳಿತದ ಎಲ್ಲಾ ವೈಫಲ್ಯಗಳಿಗೂ ಹಿಂದಿನ ಸರ್ಕಾರ ಕಾರಣ ಎನ್ನುವ ಮೂಲಕ ಬಿಜೆಪಿಯವರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕಡೆಗೆ ಬೊಟ್ಟು ಮಾಡುವ ಗೀಳು ಬೆಳೆಸಿಕೊಂಡಿದ್ದಾರೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಕಿಡಿಕಾರಿದ್ದಾರೆ.

ಸರ್ಕಾರಿ ಶಾಲೆಗಳಿಗೆ ಸೌಲಭ್ಯ ಕಲ್ಪಿಸಲು ವಿದ್ಯಾರ್ಥಿ ಪೋಷಕರಿಂದ ನೂರು ರೂ. ಸಂಗ್ರಹಿಸಲು ಅವಕಾಶ ಕಲ್ಪಿಸಿದ್ದ ಶಿಕ್ಷಣ ಇಲಾಖೆ ಆಯುಕ್ತರ ಸುತ್ತೋಲೆ ಬಗ್ಗೆ ನನಗಾಗಲೀ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗಾಗಲೀ ಗೊತ್ತೇ ಇರಲಿಲ್ಲ ಎಂದು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿಕೆ ನೀಡಿದ್ದು, ಆಡಳಿತ ಬಗ್ಗೆ ಮಾಹಿತಿಯನ್ನೇ ತಿಳಿಯದ ಇಂತಹವರು ಅಧಿಕಾರದಲ್ಲಿ ಏಕಿದ್ದಾರೆ? ಎಂದು ಪ್ರಶ್ನಿಸಿದ್ದಾರೆ.

ರಾಜ್ಯದಲ್ಲಿ ಮಳೆಯಿಂದ ಎಷ್ಟೋ ಸರ್ಕಾರಿ ಶಾಲಾ-ಕಾಲೇಜು ಕಟ್ಟಡಗಳು ಶಿಥಿಲಗೊಂಡಿವೆ. ಈಚೆಗೆ ಮೈಸೂರು ಮಹಾರಾಣಿ ವಿಜ್ಞಾನ ಕಾಲೇಜಿನ ಲ್ಯಾಬ್ ಕಟ್ಟಡ ಕುಸಿದಿರುವುದೇ ಇದಕ್ಕೆ ತಾಜಾ ಉದಾಹರಣೆ. ಈ ಬಗ್ಗೆ ಬಿಜೆಪಿ ಏನು ಕ್ರಮ ಕೈಗೊಂಡಿದೆ? ಅಧಿಕಾರ ಬಂದಾಗ ಕೆಲಸ ಮಾಡದೆ ನೆಪ ಹೇಳುವುದಕ್ಕೆ ಬಿಜೆಪಿಯವರು ಸೀಮಿತವಾಗಿದ್ದಾರೆ. ಯಾವುದೇ ಯೋಜನೆಗಳು ವಿಫಲವಾದರೆ ಸಿದ್ದರಾಮಯ್ಯ ಸರ್ಕಾರವೇ ಹೊಣೆ ಎನ್ನುವಂತೆ ಮಾತನಾಡುವ ಬಿಜೆಪಿಯವರು ಅಧಿಕಾರದಲ್ಲಿರುವುದು ಆಡಳಿತ ನಡೆಸುವುದಕ್ಕೋ, ಇಲ್ಲ ಹಿಂದಿನ ಸರ್ಕಾರ ಹೊಣೆ ಮಾಡಿ ಕಾಲ ದೂಡುವುದಕ್ಕೋ? ಎಂದು ಕಿಡಿಕಾರಿದ್ದಾರೆ.

ಸಿದ್ದರಾಮಯ್ಯನವರು ತಮ್ಮ ಆಡಳಿತಾವಧಿಯಲ್ಲಿ ಶಾಲಾ ಮಕ್ಕಳಿಗಾಗಿ ಕ್ಷೀರ ಭಾಗ್ಯ, ಸಮವಸ್ತ್ರ ಭಾಗ್ಯಗಳನ್ನು ಜಾರಿಗೆ ತಂದರು. ಎ.ಹೆಚ್.ವಿಶ್ವನಾಥ್ ಕಾಂಗ್ರೆಸ್ ಅವಧಿಯಲ್ಲಿ ಶಿಕ್ಷಣ ಸಚಿವರಾಗಿ ಮರಳಿ ಬಾ ಶಾಲೆಗೆ ಅಭಿಯಾನದ ಮೂಲಕ 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಉಚಿತ ಶಿಕ್ಷಣ ಕೊಡುವ ಕ್ರಮ ಕೈಗೊಂಡಿದ್ದರು. ಆದರೆ ಬಿಜೆಪಿ ಆಡಳಿತಾವಧಿಯಲ್ಲಿಂದು ಎಷ್ಟೋ ಶಾಲೆಗಳಿಗೆ ಇನ್ನೂ ಸಮವಸ್ತ್ರ ಕೊಟ್ಟಿಲ್ಲ. ರಷ್ಯಾ–ಉಕ್ರೇನ್ ಯುದ್ಧದ ನೆಪದಲ್ಲಿ ಪೇಪರ್ ಬರುತ್ತಿಲ್ಲವೆಂದು ಪಠ್ಯ ಪುಸ್ತಕವನ್ನೇ ಇನ್ನೂ ಕೊಟ್ಟಿಲ್ಲ. ಬಿಜೆಪಿಯವರಿಗೆ ಹಿಂದುಳಿದ ಸಮುದಾಯಗಳ ನಾಯಕ ಸಿದ್ದರಾಮಯ್ಯನವರ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ ಎಂದು ಪ್ರಕಟಣೆಯಲ್ಲಿ ಅವರು ತಿಳಿಸಿದ್ದಾರೆ.

ಶಾಸಕ ಆನಂದ ಮಾಮನಿ ಅಂತ್ಯಕ್ರಿಯೆ



ಸವದತ್ತಿ, ಅ.23– ಅನಾರೋಗ್ಯದಿಂದಾಗಿ ಶನಿವಾರ ರಾತ್ರಿ ನಿಧನರಾದ ವಿಧಾನಸಭೆ ಉಪಸಭಾಧ್ಯಕ್ಷ ಆನಂದ ಮಾಮನಿ (56) ಅವರ ಅಂತ್ಯಕ್ರಿಯೆ ಅವರ ತೋಟದಲ್ಲಿ ಭಾನುವಾರ ಸಂಜೆ ನೆರವೇರಿತು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಸೇರಿದಂತೆ ರಾಜ್ಯದ ಹಲವು ಸಚಿವರು, ಶಾಸಕರು, ಮಠಾಧೀಶರು ಅಂತಿಮ ದರ್ಶನ ಪಡೆದರು. ಪಾರ್ಥಿವ ಶರೀರವನ್ನು ಮೆರವಣಿಗೆಯಲ್ಲಿ ತಂದು ತಂದೆ ಚಂದ್ರಶೇಖರ ಮತ್ತು ಸಹೋದರ ಬಾಪು ಅವರ ಸಮಾಧಿ ಪಕ್ಕದಲ್ಲೇ ಆನಂದ ಅವರನ್ನೂ ಸಮಾಧಿ ಮಾಡಲಾಯಿತು. ವಿವಿಧ ಮಠಾಧೀಶರು ಲಿಂಗಾಯತ ಪಂಚಮಸಾಲಿ ವಿಧಿವಿಧಾನಗಳನ್ನು ಅನುಸರಿಸಿದರು. ಅವರ ಸಂಬಂಧಿಕರು ಅಭಿಮಾನಿಗಳು ನೆರೆದಿದ್ದರು. ಪೊಲೀಸರು ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸಿ ಸರ್ಕಾರಿ ಗೌರವ ಸಲ್ಲಿಸಿದರು. ಪಾರ್ಥಿವ ಶರೀರಕ್ಕೆ ಹೊದಿಸಿದ್ದ ರಾಷ್ಟ್ರಧ್ವಜವನ್ನು ಮುಖ್ಯಮಂತ್ರಿ ಅವರು ಆನಂದ ಅವರ ಪತ್ನಿ ರತ್ನಾ ಅವರಿಗೆ ಹಸ್ತಾಂತರಿಸಿದರು.

ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಮೈಸೂರಿನ ವಿವಿಧ ಸಂಘಟನೆಗಳಿಂದ ಮೊಂಬತ್ತಿ ಬೆಳಗಿ ಆಗ್ರಹ



- ಮೈಸೂರಿನ ಪರಂಪರೆಗೆ ಧಕ್ಕೆಯಾಗುತ್ತಿದ್ದರೂ ಯುವ ಸಮೂಹ ಸುಮ್ಮನಿರುವುದಕ್ಕೆ ಬೇಸರ
- ದಸರಾಗೆ ಸರ್ಕಾರ ನೀಡಿದ್ದು 35 ಕೋಟಿ; ಖರ್ಚಾಗಿದ್ದು 10 ಕೋಟಿ ಒಳಗೆ ಇರಬಹುದು
- ಪಾರಂಪರಿಕ ಕಟ್ಟಡಗಳಿಗೆ ಅನುದಾನ ತಂದರೂ 40% ಕಮಿಷನ್ ಉಂಟು!



ಮೈಸೂರು, ಅ.23(ಎಸ್‌ಪಿಎನ್)– ಮೈಸೂರಿನ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಣೆ ಮಾಡಲು ನಿರ್ಲಕ್ಷ್ಯವಹಿಸಿರುವ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ವಿರುದ್ಧ ಸರಸ್ವತಿಪುರಂ ಅಗ್ನಿಶಾಮಕ ದಳ ಕಚೇರಿ ಎದುರು ಲೆಟ್ಸ್ ಡೂ ಇಟ್ ಸಂಸ್ಥೆ ಸೇರಿದಂತೆ ಇತರೆ ಸಂಘಟನೆಯ ಪದಾಧಿಕಾರಿಗಳು ಮೊಂಬತ್ತಿ ಹಚ್ಚಿ, ಗೋಡೆಗಳಿಗೆ ಪೋಸ್ಟರ್ ಅಂಟಿಸಿ ಜಿಲ್ಲಾಡಳಿತದ ವಿರುದ್ಧ ಭಾನುವಾರ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಣೆ ಮಾಡಲು ನಿರ್ಲಕ್ಷ್ಯವಹಿಸಿರುವ ಅಧಿಕಾರಿಗಳ ನಡೆಗೆ ಧಿಕ್ಕಾರ, 'ಪರಂಪರೆಯ ರಕ್ಷಣೆ ನಮ್ಮ –ನಿಮ್ಮೆಲ್ಲರ ಹೊಣೆ, 'ಪರಂಪರೆ ಮರೆಯಾದ ಪಾರಂಪರಿಕ ನಗರಿ?!', 'ಯಾರು ಇದಕ್ಕೆ ಜವಾಬ್ದಾರಿ'?!, 'ಮೈಸೂರು ಪರಂಪರೆಯನ್ನು ಸಂರಕ್ಷಿಸಿ', ಹೀಗೆ ಅಧಿಕಾರಿಗಳ ನಿರ್ಲಕ್ಷ್ಯವನ್ನು ಬಿಂಬಿಸುವ ಹಲವು ಪೋಸ್ಟರ್‌ಗಳನ್ನು ಗೋಡೆಗಳಿಗೆ ಅಂಟಿಸಿ, ಪ್ರತಿಭಟನಾಕಾರರು ತಮ್ಮ ಆಕ್ರೋಶ ಹೊರ ಹಾಕಿದರು.

ನಂತರ ಮೈಸೂರು ಸಂಘ–ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಬಿ.ಎಸ್.ಪ್ರಶಾಂತ್ ಮಾತನಾಡಿ, ಮೈಸೂರಿನ ಪಾರಂಪರಿಕ ಕಟ್ಟಡಗಳು ಶಿಥಿಲಗೊಂಡು ನಶಿಸುತ್ತಿದ್ದರೂ ಮೈಸೂರಿನ ಯುವಜನತೆ ಇದನ್ನು ಸಂರಕ್ಷಣೆ ಮಾಡಲು ನಿರ್ಲಕ್ಷ್ಯವಹಿಸಿರುವ ಜಿಲ್ಲಾಡಳಿತದ ನಡೆಯನ್ನು ಖಂಡಿಸುತ್ತಲೇ ಇಲ್ಲ. ಇಂದು ಸಹ ಯುವಕರು ಮೊಂಬತ್ತಿ ಹಚ್ಚಿ ಜಿಲ್ಲಾಡಳಿತಕ್ಕೆ ಎಚ್ಚರಿಕೆ ನೀಡುವ ಪ್ರತಿಭಟನೆಯಲ್ಲಿ ಭಾಗವಹಿಸಲು ಹಿಂದು–ಮುಂದು ನೋಡುತ್ತಿದ್ದಾರೆ. ಮೈಸೂರಿನ ಪಾರಂಪರಿಕ ಕಟ್ಟಡಗಳ ರಕ್ಷಣೆ ಕೇವಲ ಹಿರಿಯರಿಗೆ ಮಾತ್ರ ಬೇಕೆ? ಎಂದು ಪ್ರಶ್ನಿಸಿದರು.

ಯುವಕರು ಹಿಂದಡಿ: ದಶಕದಿಂದ ಹಲವು ಪಾರಂಪರಿಕ ಕಟ್ಟಡಗಳು ಕುಸಿದು ಬಿದ್ದು, ಪರಂಪರೆಯೇ ಮರೆಯಾಗುತ್ತಿದೆ. ಮೂರು ದಿನಗಳ ಹಿಂದೆ ಮಹಾರಾಣಿ ಕಾಲೇಜು ಕಟ್ಟಡ ಬೀಳುತ್ತಿರುವ ದೃಶ್ಯವನ್ನು ಎಲ್ಲಾ ಯುವಕರು ತಮ್ಮ ತಮ್ಮ ವಾಟ್ಸಾಪ್ ಡಿಪಿಗಳಲ್ಲಿ ಹಾಕಿಕೊಂಡಿದ್ದಾರೆ. ಆದರೆ, ಪಾರಂಪರಿಕ ಕಟ್ಟಡಗಳನ್ನು ಉಳಿಸುವ ಕುರಿತು ತಮ್ಮ ಮೊಬೈಲ್ ಡಿಪಿಗಳಲ್ಲಿ ಯುವಕರು ಯಾವುದೇ ಮಾಹಿತಿ ಹಾಕಿಕೊಂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಈ ಬಾರಿ ದಸರಾ ಮಹೋತ್ಸವಕ್ಕೆ ರಾಜ್ಯ ಸರ್ಕಾರ 35 ಕೋಟಿ ಖರ್ಚು ಮಾಡಿ, ಅದ್ಧೂರಿ ದಸರಾ ಮಾಡಿದ್ದೇವೆ ಎಂದು ಜಿಲ್ಲಾಡಳಿತ ಹೇಳುತ್ತಿದೆ. ನನ್ನ ಪ್ರಕಾರ 10 ಕೋಟಿ ಒಳಗೆ ವೆಚ್ಚವಾಗಿರಬಹುದು. ಮೈಸೂರಿನ ಜನತೆಯನ್ನು ದೂರವಿಟ್ಟು, ಬೇರೆಯವರಿಗಾಗಿ ಅಷ್ಟೊಂದು ಹಣ ವೆಚ್ಚ ಮಾಡಿ ದಸರಾ ಆಚರಿಸಿದ ರಾಜ್ಯ ಸರ್ಕಾರ, ಮೈಸೂರು ಮಹಾರಾಜರು ನಿರ್ಮಿಸಿರುವ ಕಟ್ಟಡಗಳನ್ನು ಸಂರಕ್ಷಣೆ ಮಾಡಲು ಯಾಕೆ ಅನುದಾನ ನೀಡಲು ಸಬೂಬು ಹೇಳುತ್ತಿದೆ. ಎಲ್ಲಾ ಕಟ್ಟಡಗಳು ನಾಶವಾದ ಮೇಲೆ ಪ್ರವಾಸಿಗರು ಮೈಸೂರಿಗೆ ಬಂದು ನೋಡುವುದಾದರೂ ಏನಿದೆ ಎಂದರು.

ಮೈಸೂರಿನ ಅಭಿವೃದ್ಧಿಗೆ ಜನಪ್ರತಿನಿಧಿಗಳು, ಶಾಸಕರು, ಪರಿಷತ್ ಸದಸ್ಯರು ಹಾಗೂ ಸಂಸದರು ಅಷ್ಟು ಕೊಟ್ಟಿದ್ದೀವಿ, ಇಷ್ಟು ಕೊಟ್ಟಿದ್ದೀವಿ ಎಂದು ಸಾರ್ವಜನಿಕ ಸಭೆಗಳಲ್ಲಿ ಹೇಳುತ್ತಾರೆ. ಪಾರಂಪರಿಕ ಕಟ್ಟಡಗಳ ಉಳಿವಿಗೆ ಎಷ್ಟು ಅನುದಾನ ತಂದಿದ್ದೀವಿ ಎಂಬುದನ್ನು ಯಾರೂ ಹೇಳುತ್ತಿಲ್ಲ. ಉದಾಹರಣೆಗೆ ಸರಸ್ವತಿಪುರಂ ಅಗ್ನಿಶಾಮಕ ದಳದ ಕಚೇರಿ ಮುಂಭಾಗದ ಕಮಾನು ಕುಸಿದು ಹಲವು ವರ್ಷಗಳೇ ಕಳೆದಿವೆ. ಇದರ ರಿಪೇರಿಗೆ ರಾಜ್ಯ ಸರ್ಕಾರ ಕೇವಲ 35 ಲಕ್ಷ ರೂ ಅನುದಾನ ನೀಡಿದೆ. ಈ ಅನುದಾನದಲ್ಲಿ ಕಟ್ಟಡ ರಿಪೇರಿ ಮಾಡಲು ಸಾಧ್ಯವೇ? ಎಂದು ಪ್ರಶ್ನಿಸಿದರು.

ಇಲ್ಲಿನ ಪಾರಂಪರಿಕ ಕಟ್ಟಡಗಳ ನವೀಕರಣಕ್ಕೆ ಪ್ರೊ.ರಂಗರಾಜು ಅವರು ಹೇಳಿದಂತೆ ಕನಿಷ್ಠ 500 ಕೋಟಿ ರೂ. ಅನುದಾನವನ್ನು ನೀಡಲು ಜನಪ್ರತಿನಿಧಿಗಳು ಸರ್ಕಾರದ ಮೇಲೆ ಒತ್ತಡ ತರಬೇಕು. ಆದರೆ, ಇವರು ರಸ್ತೆ, ಚರಂಡಿ, ಸಮುದಾಯ ಭವನ, ಸರ್ಕಾರಿ ಕಚೇರಿಗಳ ನಿರ್ಮಾಣಕ್ಕೆ ವಿಧಾನಸೌಧದಲ್ಲಿ ಪೈಪೋಟಿಗೆ ಬಿದ್ದವರಂತೆ ಅಧಿಕಾರಿಗಳೊಂದಿಗೆ ಕಿತ್ತಾಡಿ, ಹಾರಾಡಿ ಅನುದಾನ ಬಿಡುಗಡೆ ಮಾಡಿಸುತ್ತಾರೆ. ಅದರಲ್ಲೂ ದೃಶ್ಯ ಮಾಧ್ಯಮಗಳು ಕಂಡರೆ ಹಸಿದ ಹೆಬ್ಬುಲಿಗಳಂತೆ ಹಾರಾಡುತ್ತಾರೆ. ಒಮ್ಮೆಯಾದರೂ ಮೈಸೂರಿನ ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಬಗ್ಗೆ ಚರ್ಚಿಸಿದ್ದಾರೆಯೇ? ಎಂದರು.

2012ರಲ್ಲಿ ನಗರದ ಹೃದಯಭಾಗದಲ್ಲಿರುವ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಕುಸಿದು, ಪ್ರಾಣ ಹಾನಿಯಾಗಿತ್ತು. ನವೀಕರಣ ಅಥವಾ ಪುನರ್‌ನಿರ್ಮಾಣದ ಗೊಂದಲದಲ್ಲಿ ಆ ಕಟ್ಟಡ ಪಾಳು ಬಿದ್ದಿದೆ. 2016ರಲ್ಲಿ ಧನ್ವಂತ್ರಿ ರಸ್ತೆಯ ಭಾಗದಲ್ಲಿ ದೇವರಾಜ ಮಾರುಕಟ್ಟೆಯ ಕಮಾನು ಮಾದರಿ ದ್ವಾರ ಕುಸಿಯಿತು. 2019ರಲ್ಲಿ ಸರಸ್ವತಿಪುರಂ ಅಗ್ನಿಶಾಮಕ ಠಾಣೆಯ ಕಟ್ಟಡದ ಸ್ವಾಗತ ಕಮಾನು ಕುಸಿದು ನೆಲಕ್ಕುರುಳಿತು.

2020ರಲ್ಲಿ ಜೆಎಲ್‌ಬಿ ರಸ್ತೆಯ ಮೆಡಿಕಲ್ ಕಾಲೇಜು ಹಾಸ್ಟೆಲ್ ಛಾವಣಿ ಕಳಚಿ ಬಿದ್ದಿತು. 2021ರಲ್ಲಿ ಮಾನಸಗಂಗೋತ್ರಿಯ ಜಯಲಕ್ಷ್ಮಿ ವಿಲಾಸ ಅರಮನೆ ಛಾವಣಿ ಕುಸಿಯಿತು. 2022ರಲ್ಲಿ ಅಗ್ರಹಾರದ ವಾಣಿವಿಲಾಸ ಮಾರುಕಟ್ಟೆ ಕಟ್ಟಡದ ಸಜ್ಜಾ, ಈಗ ಮೈಸೂರಿನ ಕೋಟೆ ಗೋಡೆ ಕುಸಿದಿದೆ. ಮುಂದೆ ಕಾಡಾ ಕಚೇರಿ ಕಟ್ಟಡ ಕೂಡ ಬೀಳುವ ಹಂತದಲ್ಲಿದೆ. ಈ ಕಟ್ಟಡಗಳು ಸುಸ್ಥಿತಿಯಲ್ಲಿದ್ದಾಗಲೇ ಉಳಿಸಿಕೊಳ್ಳಲು ಸಾಧ್ಯವಿಲ್ಲವೇ? ಎಂದರು.

ಇದರಲ್ಲೂ ಕಮಿಷನ್ ಸಿಗುತ್ತದೆ: ಪಾರಂಪರಿಕ ಕಟ್ಟಡಗಳ ಉಳಿವಿಗೆ ಅನುದಾನ ತಂದರೆ ಅದರಲ್ಲೂ ಕಮಿಷನ್ ಪಡೆಯಬಹುದು. ಎಷ್ಟು ಪಡೆಯಬಹುದು ಎಂದು ಸಭಿಕರನ್ನು ಕೇಳಿದರು. ಅದಕ್ಕೆ ಸಭಿಕರು ಶೇ.40 ರಷ್ಟು ಎಂದು ಕೂಗಿ ಹೇಳಿದರು. ಇದನ್ನು ನಾನು ಹೇಳಿಲ್ಲ. ಮೈಸೂರಿನ ನಾಗರಿಕರು ಹೇಳುತ್ತಿದ್ದಾರೆ. ನಿಮ್ಮ ಕಮಿಷನ್‌ಗೆ ಯಾವುದೇ ತೊಂದರೆಯಾಗಲ್ಲ ಎಂದು ಖಾರವಾಗಿ ಜನಪ್ರತಿನಿಧಿಗಳ ನಡೆಯನ್ನು ಖಂಡಿಸಿದರು.

ಈ ವೇಳೆ ಪಾರಂಪರಿಕ ತಜ್ಞ ಪ್ರೊ.ರಂಗರಾಜು, ಬೆಂಗಳೂರಿನ ಕರ್ನಾಟಕ ಟೂರಿಸಂ ಫೋರಂನ ಉಪಾಧ್ಯಕ್ಷ ರವಿ, ಮೈಸೂರು ಟ್ರಾವಲ್ ಅಸೋಸಿಯೇಷನ್ ಅಧ್ಯಕ್ಷ ಜಯಕುಮಾರ್, ಮೈಸೂರು ಜಿಲ್ಲಾ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣ ಗೌಡ, ಲೆಟ್ಸ್ ಡೂ ಇಟ್‌ನ ಶಿವಶಂಕರ್, ಸುದೀಂದ್ರ, ಕಾಂತರಾಜು, ಭಾಷ್ಯಂ, ವಿವೇಕ್, ಭೂಮಿಕಾ, ಶಿವಪ್ರಸಾದ್, ರಮ್ಯಭೂಮಿ, ನಿತಿನ್ ಕಿಶೋರ್, ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ರೊ.ಎ.ಪಿ.ವಿರೂಪಾಕ್ಷ, ಜನತಾನಗರ ಮಂಜುನಾಥ್, ಪೆಟ್ರೋಲಿಯಂ ಅಸೋಸಿಯೇಷನ್‌ನ ರಂಜಿತ್ ಹೆಗಡೆ, ಮೈಸೂರು ಜಿಲ್ಲಾ ಜಿಮ್ ಅಸೋಸಿಯೇಷನ್ ಅಧ್ಯಕ್ಷ ಹರ್ಷ, ಮೊಬೈಲ್ ವಿತರಕರ ಸಂಘದ ಅಧ್ಯಕ್ಷ ರಘು, ಗೈಡ್ ಅಸೋಸಿಯೇಷನ್‌ನ ಅಶೋಕ್ ಸೇರಿದಂತೆ ಇತರರಿದ್ದರು.

ಮಹಿಳೆಗೆ ಕಪಾಳಮೋಕ್ಷ, ರೈತ ವಿರೋಧಿ ಧೋರಣೆ ಆರೋಪ

ಜಿಲ್ಲಾ ಉಸ್ತುವಾರಿ ಸಚಿವರ ವಿರುದ್ಧ ಪ್ರತಿಭಟನೆ





ಚಾಮರಾಜನಗರ, ಅ.23– ಮಹಿಳೆಗೆ ಕಪಾಳಮೋಕ್ಷ ಹಾಗೂ ರೈತರ ಬಗ್ಗೆ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿರುವ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸುವಂತೆ ಆಗ್ರಹಿಸಿ ರೈತ ಸಂಘ ಹಾಗೂ ಹಸಿರು ಸೇನೆ ಕಾರ್ಯಕರ್ತರು ನಗರದಲ್ಲಿ ಭಾನುವಾರ ರಸ್ತೆತಡೆ ನಡೆಸಿದರು.

ನಗರದ ಭುವನೇಶ್ವರಿ ವೃತ್ತದಲ್ಲಿ ಜಮಾಯಿಸಿದ ರೈತ ಸಂಘಟನೆಗಳ ಕಾರ್ಯಕರ್ತರು, ವೃತ್ತದ ಮಧ್ಯಭಾಗದಲ್ಲಿ ಕುಳಿತು ರಸ್ತೆತಡೆ ಆರಂಭಿಸಿ, ಸಚಿವ ಸೋಮಣ್ಣ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ರೈತರು ಸುಮಾರು 1 ಗಂಟೆಗಳ ಕಾಲ ರಸ್ತೆ ತಡೆ ನಡೆಸಿದ್ದರಿಂದ ಸಂಚಾರದಲ್ಲಿ ಅಸ್ತವ್ಯಸ್ತವಾಯಿತು.

ಗುಂಡ್ಲುಪೇಟೆ ತಾಲೂಕಿನ ಹಂಗಳದಲ್ಲಿ ಶನಿವಾರ ಸಂಜೆ ನಡೆದ ನಿವೇಶನ ಹಕ್ಕುಪತ್ರ ವಿತರಣೆ ಕಾರ್ಯಕ್ರಮದಲ್ಲಿ ತನ್ನ ಕಷ್ಟ ಹೇಳಿಕೊಳ್ಳಲು ಬಂದ ಮಹಿಳೆಯೊಬ್ಬರಿಗೆ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಕಪಾಳಮೋಕ್ಷ ಮಾಡಿದ್ದಾರೆ. ಈ ಮೂಲಕ ಮಹಿಳೆಯರನ್ನು ಅವಮಾನಿಸಿದ್ದಾರೆ. ಅಲ್ಲದೆ ಅಂದೇ ಮಧ್ಯಾಹ್ನ ಅವರೇ ಚಾಮರಾಜನಗದಲ್ಲಿ ಕರೆದಿದ್ದ ರೈತ ಮುಖಂಡರ ಸಭೆಗೆ ತಡವಾಗಿ ಆಗಮಿಸಿ, ರೈತವಿರೋಧಿ ಧೋರಣೆ ಅನುಸರಿಸಿ ರೈತರನ್ನೂ ಅಪಮಾನಿಸಿದ್ದಾರೆ. ಸೋಮಣ್ಣ ಈ ಕೂಡಲೇ ರೈತರು ಹಾಗೂ ಮಹಿಳೆಯರ ಕ್ಷಮೆಯಾಚಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಸಚಿವ ಸೋಮಣ್ಣ ಅವರ ಮೇಲೆ ಸುಮೊಟೊ ಪ್ರಕರಣ ದಾಖಲಿಸಿಕೊಂಡು ಪೊಲೀಸ್ ಇಲಾಖೆ ಅವರನ್ನು ಬಂಧಿಸಬೇಕು. ಮುಖ್ಯಮಂತ್ರಿಗಳು ಸೋಮಣ್ಣ ಅವರನ್ನು ಜಿಲ್ಲಾ ಉಸ್ತುವಾರಿ ಸ್ಥಾನದಿಂದ ಬದಲಿಸಬೇಕು. ಅವರನ್ನು ಸಚಿವ ಸಂಪುಟದಿಂದ ಕೈಬಿಡಬೇಕು. ಇಲ್ಲದಿದ್ದಲ್ಲಿ ಜಿಲ್ಲೆಯಾದ್ಯಂತ ಹೋರಾಟ ನಡೆಸಬೇಕಾಗುತ್ತದೆ ಎಂದು ಪ್ರತಿಭಟನಾಕಾರರು ಎಚ್ಚರಿಸಿದರಲ್ಲದೆ, ಸುಮೊಟೊ ಪ್ರಕರಣದಡಿ ಸಚಿವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ ಅವರಿಗೆ ಮನವಿ ಸಲ್ಲಿಸಿದರು. ಈ ವೇಳೆ ಪೊಲೀಸರು ರೈತ ಮುಖಂಡರನ್ನು ಸಮಾಧಾನಪಡಿಸಿದರು.

ಈ ಸಂದರ್ಭದಲ್ಲಿ ರೈತ ಸಂಘದ ಜಿಲ್ಲಾ ಅಧ್ಯಕ್ಷ ಹೊನ್ನೂರು ಪ್ರಕಾಶ್, ಹೆಬ್ಬಸೂರು ಬಸವಣ್ಣ, ಪ್ರಧಾನ ಕಾರ್ಯದರ್ಶಿಗಳಾದ ಜ್ಯೋತಿಗೌಡನಪುರ ಸಿದ್ದರಾಜು, ಗುರುಪ್ರಸಾದ್, ಬಸವಣ್ಣ, ಮಹದೇವಪ್ರಸಾದ್, ಯಶವಂತ್, ವಿಜಿ ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಗುಂಡ್ಲುಪೇಟೆ ವರದಿ: ತಾಲೂಕಿನ ಹಂಗಳ ಗ್ರಾಮದಲ್ಲಿ ವಸತಿ ಸಚಿವ ವಿ.ಸೋಮಣ್ಣ ಮಹಿಳೆಯೊಬ್ಬರಿಗೆ ಕಪಾಳಮೋಕ್ಷ ಮಾಡಿದ ಹಿನ್ನೆಲೆಯಲ್ಲಿ ಸಚಿವರ ವಿರುದ್ಧ ಪಟ್ಟಣದಲ್ಲಿ ರೈತ ಮುಖಂಡ ಶಿವಪುರ ಮಹದೇವಪ್ಪ ನೇತೃತ್ವದಲ್ಲಿ ರೈತ ಸಂಘಟನೆಯ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು. ಸಚಿವ ಸೋಮಣ್ಣ ರಾಜೀನಾಮೆಗೆ ಒತ್ತಾಯಿಸಿ ಪ್ರಮುಖ ರಸ್ತೆಯಲ್ಲಿ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು, ಪಟ್ಟಣದ ಮೈಸೂರು ಚಾಮರಾಜನಗರ ಜಿಲ್ಲಾ ಸಹಕಾರ ಬ್ಯಾಂಕ್ ಎದುರು ಮಾನವ ಸರಪಳಿ ರಚಿಸಿ ಆಕ್ರೋಶ ವ್ಯಕ್ತಪಡಿಸಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ

ನಶಾ ಮುಕ್ತ ಭಾರತ ಅಭಿಯಾನ ಜಾಗೃತಿ ಕಾರ್ಯಕ್ರಮ



ಮೈಸೂರು, ಅ. 23– ರಾಷ್ಟ್ರೀಯ ಸೇವಾ ಯೋಜನಾ ಘಟಕಗಳು, ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ), ಆರೇಂಜ್ ಸೇವಾ ಸಂಸ್ಥೆ, ಮೈಸೂರು ಇವುಗಳ ಸಂಯುಕ್ತಾಶ್ರಯದಲ್ಲಿ 'ನಶಾ ಮುಕ್ತ ಭಾರತ ಅಭಿಯಾನ–ಜಾಗೃತಿ ಕಾರ್ಯಕ್ರಮ' ವನ್ನು ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿತ್ತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರಿನ ವಿಕಲಚೇತನ ಮತ್ತು ಹಿರಿಯ ನಾಗರಿಕರ ಸಬಲೀಕರಣದ ಸಂಸ್ಥೆಯ ಅಂಗವಿಕಲರ ಕಲ್ಯಾಣಾಧಿಕಾರಿ ಶ್ರೀಮತಿ ಆರ್. ಮಾಲಿನಿ ಮಾತನಾಡಿ, ಇಂದಿನ ಯುವಕರೇ ಮುಂದಿನ ಪೀಳಿಗೆಯ ಸತ್ಪ್ರಜೆಗಳು. ಆದರೆ ಪರಿಸ್ಥಿತಿಯನ್ನು ಅವಲೋಕಿಸಿದಾಗ ಯುವಕರು, ಮಕ್ಕಳು ಹೆಚ್ಚಾಗಿ ನಶೆಗಳಿಗೆ ದಾಸರಾಗುತ್ತಿದ್ದು, ಅವರ ಜೀವನ ಚಿಂತಾಜನಕ ಸ್ಥಿತಿಯಲ್ಲಿದೆ. ಇದನ್ನು ತಡೆಯುವ ಉದ್ದೇಶದಿಂದ, ಹಾಗೂ ವಿದ್ಯಾರ್ಥಿಗಳಲ್ಲಿ ಮುನ್ನೆಚ್ಚರಿಕೆ, ತಿಳಿ ಹೇಳುವ ಸಲುವಾಗಿ ಈ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ಇಂದಿನ ಯುವಕರು ಸ್ವಯಂಪ್ರೇರಿತರಾಗಿ ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಿ, ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಿ ಎಂದು ಕರೆ ಕೊಟ್ಟರು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಮೈಸೂರು ಜಿಲ್ಲಾ ಆಯುಷ್ ಇಲಾಖೆಯ ವೈದ್ಯಕೀಯ ಅಧಿಕಾರಿಗಳಾದ ಡಾ. ಸುಜಾತ ಮಾತನಾಡಿ, ಇಂದಿನ ಯುವಕರು ತಮಗೆ ಅರಿವಿಲ್ಲದಂತೆ ನಶೆಗೆ ಮಾರುಹೋಗಿ, ಬಲಿಪಶುಗಳಾಗುತ್ತಿದ್ದಾರೆ. ಕೆಲವು ದುರಭ್ಯಾಸಗಳಲ್ಲಿ ತೊಡಗಿದ್ದಾರೆ. ಮಾದಕ ದ್ರವ್ಯ ಸೇವನೆಯಿಂದ ಮಾನಸಿಕ ಆರೋಗ್ಯ ಹಾಗೂ ಶಾರೀರಿಕ ಆರೋಗ್ಯ ನಾಶವಾಗುತ್ತದೆ. ಸಮಾಜಕ್ಕೆ ನಶೇ ಒಂದು ಕಂಟಕ ಎಂದು ತಿಳಿಸಿದರು.

ವಿದ್ಯಾರ್ಥಿಗಳಾದ ನೀವು ಯಾವುದೇ ರೀತಿಯ ಚಟ, ನಶೆ ಮತ್ತು ಮಾದಕ ದ್ರವ್ಯಗಳಿಗೆ ಮಾರುಹೋಗುವುದಿಲ್ಲ ಹಾಗೂ ವ್ಯಸನಕ್ಕೆ ಬಲಿಯಾಗುವುದಿಲ್ಲ ಎಂದು ದೃಢಸಂಕಲ್ಪ ಮಾಡಿ. ಸಕಾರಾತ್ಮಕ ಚಿಂತನೆ, ಒಳ್ಳೆಯ ಸ್ನೇಹಿತರ ಸಹವಾಸ, ವಿಮರ್ಶಾತ್ಮಕ ಶಕ್ತಿ, ನಡವಳಿಕೆ ಇವುಗಳನ್ನು ರೂಢಿಸಿಕೊಳ್ಳಿ. ತಪ್ಪು ದಾರಿಗೆ ಹೋಗುವವರನ್ನು ತಿದ್ದಿ, ಸರಿಯಾದ ಮಾರ್ಗದಲ್ಲಿ ನಡೆಯಲು ಪ್ರೇರೇಪಿಸಿ ಎಂದು ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ಮಾತನಾಡಿ, ಇದು ಒಂದು ಒಳ್ಳೆಯ ಕಾರ್ಯಕ್ರಮ. ಸಮಾಜದಲ್ಲಿ ನಡೆಯುತ್ತಿರುವ ಅವ್ಯವಸ್ಥೆಯ ವಿರುದ್ಧ ವಿದ್ಯಾರ್ಥಿಗಳು ಎಚ್ಚೆತ್ತುಕೊಳ್ಳಬೇಕು. ನಶೆಗೆ ಮಾರುಹೋದವರಲ್ಲಿ ಜಾಗೃತಿ ಮೂಡಿಸಿ, ಸರಿಯಾದ ಮಾರ್ಗದಲ್ಲಿ ತನ್ನಿ. 'ನಿಮ್ಮ ಏಳಿಗೆಗೆ ನೀವೇ ಶಿಲ್ಪಿಗಳಾಗಬೇಕು'. ಸರಿತಪ್ಪುಗಳನ್ನು ವಿಮರ್ಶಿಸಿ, ಒಳ್ಳೆಯ ನಡತೆಯನ್ನು ರೂಪಿಸಿಕೊಳ್ಳಿ ಎಂದು ತಿಳಿಸಿದರು.

ಬಿ.ಕಾಂ. ವಿದ್ಯಾರ್ಥಿನಿ ಅರ್ಚನ ಹೆಗಡೆ ಪ್ರಾರ್ಥಿಸಿದರು. ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಡಾ. ಜಿ. ದೊಡ್ಡರಸಯ್ಯ ಸ್ವಾಗತಿಸಿದರು. ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಸಿ.ಎಸ್. ಸಿದ್ದರಾಜು ವಂದಿಸಿದರು. ಬಿ.ಎ. ವಿದ್ಯಾರ್ಥಿನಿ ಸೃಷ್ಟಿ ಆರ್. ಜೋಯಿಸ್ ನಿರೂಪಿಸಿದರು.

ಆಯುರ್ವೇದ ಗಿಡ ನೆಡುವ ಅಭಿಯಾನ ಹಮ್ಮಿಕೊಳ್ಳಿ

ಉಡುಪಿ ಪೇಜಾವರ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಕರೆ



ಮೈಸೂರು, ಅ.23(ಆರ್‌ಕೆಬಿ)– ಪುರಾತನ ಕಾಲದಿಂದಲೂ ಆರೋಗ್ಯ ಪದ್ಧತಿಯಲ್ಲಿ ಬಳಕೆಯಲ್ಲಿರುವ ಆಯುರ್ವೇದ ಗಿಡಗಳನ್ನು ನೆಡುವ ಅಭಿಯಾನ ಹಮ್ಮಿಕೊಳ್ಳುವಂತೆ ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಕರೆ ನೀಡಿದರು.

ಅಂತಾರಾಷ್ಟ್ರೀಯ 7ನೇ ವರ್ಷದ ಆಯುರ್ವೇದ ದಿನಾಚರಣೆ ಅಂಗವಾಗಿ ಮೈಸೂರಿನ ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ ಮೈಸೂರಿನ ವಿಜಯ ವಿಠಲ ಶಾಲೆಯಲ್ಲಿ ಆಯೋಜಿಸಿದ್ದ ಆಯುರ್ವೇದ ಉತ್ಸವಕ್ಕೆ ಧನ್ವಂತರಿ ಮಾತೆಯ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿ, ತುಳಸಿ ಗಿಡಕ್ಕೆ ನೀರೆರೆದು ಬಳಿಕ ಮಾತನಾಡಿದರು.

ಶ್ರೀರಾಮಚಂದ್ರ ಶ್ರೀಕೃಷ್ಣ ಪರಮಾತ್ಮರ ಕಾಲದಿಂದಲೂ ಪ್ರತಿನಿತ್ಯದ ಆಚರಣೆಯಲ್ಲಿ ಆರೋಗ್ಯ ಆಹಾರ ಪದ್ಧತಿಯಲ್ಲಿ ಆಯುರ್ವೇದ ಬಳಕೆಯಿದೆ. ಎಲ್ಲರ ಮನೆಗಳ ಮುಂದೆ ತುಳಸಿ ಗಿಡ ಸೇರಿದಂತೆ ಇನ್ನಿತರ ಆಯುರ್ವೇದ ಗಿಡಗಳಿಗೆ ನೀರೆರೆದು ಪೋಷಿಸಿದರೆ ಪರಿಸರ ಸಂರಕ್ಷಣೆಯಾಗಿ ರೋಗ ರುಜಿನಗಳು ನಿವಾರಣೆಯಾಗುತ್ತವೆ. ಸಂಘ ಸಂಸ್ಥೆಗಳು, ಯುವ ಸಮೂಹ ಹೆಚ್ಚಾಗಿ ಆಯುರ್ವೇದ ಗಿಡಗಳನ್ನು ನೆಡುವ ಅಭಿಯಾನ ಹಮ್ಮಿಕೊಳ್ಳಬೇಕು ಎಂದು ಕರೆ ನೀಡಿದರು.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಆಯುರ್ವೇದ ದಿವಸ್ ಧನ್ವಂತರಿ ಜಯಂತಿಯಂದು ಪ್ರತಿ ವರ್ಷ ವಿಶೇಷ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಿದ್ದು, ಈ ಬಾರಿ ಪ್ರತಿ ಮನೆಯಲ್ಲೂ ಆಯುರ್ವೇದ ಎಂಬ ಶೀರ್ಷಿಕೆ ಮೂಲಕ ಆಯುಷ್ ಇಲಾಖೆ ಮೂಲಕ ಮನೆ ಮನೆಗೆ ಆಯುರ್ವೇದ ಗಿಡಗಳ ವಿತರಣೆ ಕಾರ್ಯ ನಡೆದಿದೆ ಎಂದರು.

ಆಯುಷ್ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಆಂಜನೇಯಮೂರ್ತಿ, ಜೆಎಸ್‌ಎಸ್ ಆಯುರ್ವೇದ ಕಾಲೇಜಿನ ಹಿರಿಯ ವೈದ್ಯ ಗುರುಬಸವರಾಜು, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಲಕ್ಷ್ಮಿನಾರಾಯಣ್, ವಿಜಯ ವಿಠಲ ಶಾಲೆಯ ಕಾರ್ಯದರ್ಶಿ ವಾಸುದೇವ ಭಟ್, ಆಯುರ್ವೇದ ಕಾಲೇಜಿನ ಮುಖ್ಯಸ್ಥ ರಾಧಾಕೃಷ್ಣ, ಡಾ.ಮಧುಕುಮಾರ್, ಪತಂಜಲಿ ಯೋಗ ಸಂಸ್ಥೆಯ ಶಶಿಕುಮಾರ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಬಿಜೆಪಿ ಮುಖಂಡ ಸಚಿನ್ ಇನ್ನಿತರರು ಉಪಸ್ಥಿತರಿದ್ದರು.

ಖರೀದಿಸುವಾಗಲೇ ಕೈ ಸುಡುತ್ತಿವೆ ಪಟಾಕಿ; ಆದರೂ ಉತ್ಸಾಹದಿಂದ ಖರೀದಿಸುತ್ತಿರುವ ಜನ





ಮೈಸೂರು,ಅ.23(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಲ್ಲಿ ದೀಪಾವಳಿ ಹಬ್ಬದ ಸಂಭ್ರಮ ಮನೆ ಮಾಡಿದ್ದು, ಬೆಲೆ ಏರಿಕೆ ನಡುವೆಯೂ ಭಾನುವಾರ ಪಟಾಕಿ ವ್ಯಾಪಾರ ಬಿರುಸಾಗಿತ್ತು.

ಕಚ್ಚಾ ವಸ್ತುಗಳ ಬೆಲೆ ಗಗನಕ್ಕೇರಿದ ಪರಿಣಾಮ ಹಾಗೂ ಕೊರೊನಾ ಮೂರನೇ ಅಲೆ ಬಾಧಿಸುವ ಆತಂಕದಿಂದ ಪಟಾಕಿಗಳ ಉತ್ಪನ್ನದಲ್ಲಿ ಭಾರೀ ಪ್ರಮಾಣದ ಇಳಿಮುಖವಾಗಿರುವುದರಿಂದ ಬೇಡಿಕೆಗೆ ಅನುಗುಣವಾಗಿ ಪಟಾಕಿಗಳ ಸರಬರಾಜಾಗಿಲ್ಲ. ಆದರೂ ಮೈಸೂರಿನ ವಿವಿಧೆಡೆ ತಲೆ ಎತ್ತಿರುವ ಪಟಾಕಿಗಳ ಮಳಿಗೆಯಲ್ಲಿ ವ್ಯಾಪಾರ ಬಲು ಜೋರಾಗಿದೆ. ವ್ಯಾಪಾರಿಗಳ ಮುಖದಲ್ಲಿ ಮಂದಹಾಸ ಮೂಡಿದೆ.

ದೇಶದ ಬಹುತೇಕ ರಾಜ್ಯಗಳಿಗೆ ತಮಿಳುನಾಡಿನ ಶಿವಕಾಶಿಯಿಂದಲೇ ಪಟಾಕಿ ಸರಬರಾಜಾಗಲಿದ್ದು, ಈ ಬಾರಿ ಶೇ.40ರಷ್ಟು ಉತ್ಪಾದನೆಯಲ್ಲಿ ಕೊರತೆಯುಂಟಾಗಿದೆ. ಕೊರೊನಾ ಸೋಂಕು ನಿವಾರಣೆಯಾಗಿರುವುದರಿಂದ ಎಲ್ಲೆಡೆ ಎರಡು ವರ್ಷದ ನಂತರ ದೀಪಾವಳಿಯನ್ನು ಸಂಭ್ರಮದಿಂದ ಆಚರಿಸಲು ಮುಂದಾಗಿರುವುದರಿಂದ ಪಟಾಕಿಗಳಿಗೆ ಬೇಡಿಕೆ ಹೆಚ್ಚಾಗಿದೆ. ಸಹಜವಾಗಿ ಕಳೆದ ವರ್ಷ ಇದ್ದ ದರಕ್ಕಿಂತ ಈ ಬಾರಿ ಶೇ.30ರಷ್ಟು ಹೆಚ್ಚಳವಾಗಿದೆ. ಪಟಾಕಿ ಬೆಲೆ ಕೈ ಸುಡುತ್ತಿದ್ದರೂ ಗ್ರಾಹಕರು ಮಾತ್ರ ಅಳುಕಿಲ್ಲದೇ ಪಟಾಕಿ ಖರೀದಿಯಲ್ಲಿ ತೊಡಗಿದ್ದಾರೆ.

ಕೈ ಕೊಟ್ಟ ವಾತಾವರಣ: ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಪಟಾಕಿ ಮನೆಯ ಮಣಿಕಾಂತ ಮಾತನಾಡಿ, ಎರಡು ವರ್ಷದಿಂದ ಜನ ದೀಪಾವಳಿ ಆಚರಿಸಿರಲಿಲ್ಲ. ಆದರೆ, ಈ ಬಾರಿ ಸಂಭ್ರಮದಿಂದ ಹಬ್ಬ ಆಚರಿಸಲು ಮುಂದಾಗಿದ್ದರು. ಆದರೆ ಕಳೆದ ಕೆಲವು ದಿನಗಳಿಂದ ಸುರಿಯುತ್ತಿರುವ ಮಳೆ ಜನರಲ್ಲಿ ಹಬ್ಬದ ಸಂಭ್ರಮಕ್ಕೆ ಅಡ್ಡಿಯಾಗಿದೆ. ಈ ಬಾರಿ ಕಾರ್ಖಾನೆಯಲ್ಲಿಯೇ ಪಟಾಕಿ ಉತ್ಪಾದನೆ ಕಡಿಮೆಯಾಗಿದೆ. ಆದ ಕಾರಣ ಬೇಡಿಕೆಗೆ ಅನುಗುಣವಾಗಿ ಪಟಾಕಿ ತರಲು ವ್ಯಾಪಾರಿಗಳಿಗೆ, ಡೀಲರ್‌ಗಳಿಗೆ ಸಾಧ್ಯವಾಗಿಲ್ಲ ಮೈಸೂರಲ್ಲಿ 4–5 ಮಂದಿ ಹೋಲ್‌ಸೇಲ್ ಡೀಲರ್‌ಗಳಿದ್ದು, ಹಲವು ವರ್ಷದಿಂದ ಪಟಾಕಿ ಮಾರಾಟದಲ್ಲಿ ತೊಡಗಿಸಿಕೊಂಡಿದ್ದಾರೆ ಶೇ.60ರಷ್ಟು ಮಾತ್ರ ಪಟಾಕಿ ತರಲಾಗಿದೆ ಎಂದರು.

ಹಿಂದೂ ಧರ್ಮದ ಆಚರಣೆ: ಜ್ಯುಪಿಟರ್ ಕ್ರಾಕರ್ಸ್ ಸಂಸ್ಥೆಯ ಸುಮನಾ ಮಾತನಾಡಿ, ದೀಪಾವಳಿ ಹಿಂದೂ ಧರ್ಮದ ಆಚರಣೆಗಳಲ್ಲಿ ಮಹತ್ವದ್ದಾಗಿದೆ. ನಮ್ಮ ಸಂಪ್ರದಾಯದಲ್ಲಿ ದೀಪಾವಳಿ ಹಬ್ಬವನ್ನು ಮೂರು ದಿನ ಆಚರಿಸಲಾಗುತ್ತದೆ. ಕೊರೊನಾ ಹಿನ್ನೆಲೆಯಲ್ಲಿ ಎರಡು ವರ್ಷದಿಂದ ಯಾರೂ ಹಬ್ಬ ಆಚರಿಸಿರಲಿಲ್ಲ. ಈ ಬಾರಿ ಸಂಭ್ರಮದಿಂದ ಆಚರಿಸುತ್ತಿದ್ದಾರೆ. ಪಟಾಕಿ ಖರೀದಿಗೆ ಸಾಕಷ್ಟು ಮಂದಿ ಬರುತ್ತಿದ್ದಾರೆ. ಶೇ.50ರಷ್ಟು ಉತ್ಪಾದನೆ ಕಡಿಮೆಯಾಗಿರುವುದರಿಂದ ಮೈಸೂರಿಗೆ ಬೇಡಿಕೆಗೆ ಅನುಗುಣವಾಗಿ ಪಟಾಕಿ ತರಲು ಸಾಧ್ಯವಾಗಿಲ್ಲ. ಆದರೂ, ಹೊಸ ಹೊಸ ಬಗೆಯ ಪಟಾಕಿಗಳು ಮಾರುಕಟ್ಟೆಗೆ ಬಂದಿವೆ. ಪಟಾಕಿ ಸಿಡಿಸುವುದರಿಂದ ಪರಿಸರದ ಮೇಲೆ ದುಷ್ಪರಿಣಾಮ ಬೀರುವುದಿಲ್ಲ. ಜನರು ಅಪಪ್ರಚಾರಕ್ಕೆ ಕಿವಿಗೊಡದೆ ಪಟಾಕಿ ಖರೀದಿಸುತ್ತಿದ್ದಾರೆ ಎಂದರು.

ಕಳೆದ 5 ತಿಂಗಳ ಹಿಂದೆ ಬೇಡಿಕೆ: ಕ್ರಾಕರ್ಸ್ ವರ್ಲ್ಡ್‌ನ ಹರೀಶ್ ಮಾತನಾಡಿ, ನೈಟ್ರೇಟ್, ಪೋಟಾಷ್ ಹಾಗೂ ಪಟಾಕಿ ತಯಾರಿಸಲು ಬಳಸುವ ವೇಸ್ಟ್ ಪೇಪರ್ ಬೆಲೆಯೂ ಹೆಚ್ಚಾಗಿದೆ. ಇದರಿಂದ ಪಟಾಕಿ ಬೆಲೆಯೂ ಹೆಚ್ಚಾಗಿತ್ತು. ಇದರಿಂದ ಬೆಲೆ ಕಡಿಮೆಯಾಗಬಹುದೆಂಬ ಲೆಕ್ಕಾಚಾರದಿಂದ ಡೀಲರ್ಸ್‌ಗಳು ಬೇಡಿಕೆ ಸಲ್ಲಿಸದೆ ಸುಮ್ಮನಿದ್ದರು. ಕಳೆದ 5 ತಿಂಗಳ ಹಿಂದಿನಿಂದ ಡೀಲರ್‌ಗಳು ಬೇಡಿಕೆ ಸಲ್ಲಿಸಲು ಮುಂದಾದರು. ಹಾಗಾಗಿ ಎಲ್ಲಾ ವ್ಯಾಪಾರಿಗಳು, ಡೀಲರ್ಸ್, ಸೂಪರ್ ಡೀಲರ್ಸ್ ಸಲ್ಲಿಸಿದ ಬೇಡಿಕೆಗೆ ಅನುಗುಣವಾಗಿ ಪಟಾಕಿ ಉತ್ಪಾದಿಸಲು ಆಗಿಲ್ಲ. ನಾವು 5 ಲೋಡ್ ಪಟಾಕಿಯನ್ನು ತಂದಿದ್ದು, ಮಾರಾಟ ಆರಂಭವಾಗಿದೆ ಜನ ಪಟಾಕಿ ಖರೀದಿಸುತ್ತಿದ್ದಾರೆ ಎಂದರು.

ಮಕ್ಕಳದ್ದೇ ಕಾರುಬಾರು: ದೀಪಾವಳಿ ಹಿನ್ನೆಲೆಯಲ್ಲಿ ಹೆಬ್ಬಾಳು ಕೈಗಾರಿಕಾ ಪ್ರದೇಶ, ಜೆ.ಕೆ.ಮೈದಾನ, ಇಟ್ಟಿಗೆಗೂಡು, ಸರಸ್ವತಿಪುರಂ, ಪಡುವಾರಹಳ್ಳಿ, ಚಾಮುಂಡಿಪುರಂ ವೃತ್ತ, ರಾಮಕೃಷ್ಣನಗರ, ಕುಂಬಾರಕೊಪ್ಪಲು ಸೇರಿದಂತೆ ವಿವಿಧೆಡೆ ಅನುಮತಿ ಪಡೆದು ತೆರೆದಿರುವ ಮಳಿಗೆಗಳಲ್ಲಿ ಪೋಷಕರೊಂದಿಗೆ ಆಗಮಿಸುತ್ತಿರುವ ಮಕ್ಕಳು ತಮಗಿಷ್ಟ ಬಂದ ಪಟಾಕಿಗಳನ್ನೇ ಖರೀದಿಸುತ್ತಿದ್ದಾರೆ. ಪಟಾಕಿ ಖರೀದಿಸಿ ಸಂಭ್ರಮಿಸುತ್ತಿರುವ ಮಕ್ಕಳು, ದೀಪಾವಳಿ ಸಂಭ್ರಮವನ್ನು ಮತ್ತಷ್ಟು ಹೆಚ್ಚಿಸುತ್ತಿದ್ದಾರೆ.

ಒಂದನೇ ಪುಟದಿಂದ

ಪಾಕ್ ತತ್ತರ

ಸೇರಿಕೊಂಡರು. ನಂತರ ಬಂದ ಸೂರ್ಯಕುಮಾರ್ ಯಾದವ್ 2 ಬೌಂಡರಿ ಒಳಗೊಂಡ 15 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬ್ಯಾಟಿಂಗ್‌ನಲ್ಲಿ ಬಡ್ತಿ ಪಡೆದು ಬಂದ ಅಕ್ಷರ್ ಪಟೇಲ್ ಇಲ್ಲದ ರನ್ ಕದಿಯಲು ಹೋಗಿ ರನೌಟ್ ಆಗುವ ಮೂಲಕ ತಾವೂ ಪೆವಿಲಿಯನ್ ಸೇರಿಕೊಂಡರು. ಈ ವೇಳೆ ಭಾರತ 31 ರನ್‌ಗಳಿಗೆ ಪ್ರಮುಖ 4 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು.

ಕೊಹ್ಲಿ-ಪಾಂಡ್ಯ ಜುಗಲ್ಬಂದಿ: 5ನೇ ವಿಕೆಟ್‌ಗೆ ಜೊತೆಯಾದ ವಿರಾಟ್ ಕೊಹ್ಲಿ ಹಾಗೂ ಹಾರ್ದಿಕ್ ಪಾಂಡ್ಯ ವಿಕೆಟ್ ಬೀಳದಂತೆ ಎಚ್ಚರಿಕೆಯ ಆಟವಾಡಿ ಸಂಕಷ್ಟದಲ್ಲಿದ್ದ ತಂಡಕ್ಕೆ ಆಸರೆಯಾಗಿ ನಿಧಾನವಾಗಿ ರನ್ ಗತಿ ಹೆಚ್ಚಿಸಿದರು. ಇವರಿಬ್ಬರು 78 ಎಸೆತಗಳಲ್ಲಿ 113 ರನ್‌ಗಳ ಆಕರ್ಷಕ ಶತಕದ ಜತೆಯಾಟವಾಡುವ ಮೂಲಕ ತಂಡಕ್ಕೆ ಮಹಾ ಚೇತರಿಕೆ ನೀಡಿದರು. ಇವರ ದಿಟ್ಟ ಹೋರಾಟ ಭಾರತ, ಪಾಕಿಸ್ತಾನಕ್ಕೆ ಸುಲಭವಾಗಿ ತುತ್ತಾಗುವ ಅಪಾಯದಿಂದ ಪಾರು ಮಾಡಿತು.

ಕೊಹ್ಲಿ ಅಬ್ಬರ: ಪಂದ್ಯದಲ್ಲಿ ಅಬ್ಬರಿಸಿದ ವಿರಾಟ್ ಕೊಹ್ಲಿ ಪಾಕ್ ಬೌಲರ್‌ಗಳನ್ನು ತಮ್ಮ ಮನಮೋಹಕ ಹೊಡೆತಗಳ ಮೂಲಕ ಬೆಂಡೆತ್ತಿದರು. ಅದರಲ್ಲೂ ಪಂದ್ಯದ 19 ಓವರ್‌ನ ಕೊನೆಯ 2 ಎಸೆತದಲ್ಲಿ ಸಿಕ್ಸರ್ ಸಿಡಿಸುವ ಮೂಲಕ ಪಂದ್ಯವನ್ನು ಭಾರತ ಕಡೆ ತಿರುಗಿಸಿದರು. ಅಂತಿಮವಾಗಿ ಕೊಹ್ಲಿ 53 ಎಸೆತಗಳಲ್ಲಿ 6 ಫೋರ್ ಮತ್ತು ಅವೋಘ 4 ಸಿಕ್ಸರ್‌ಗಳೊಂದಿಗೆ ಅಜೇಯ 82 ರನ್ ಸಿಡಿಸಿ ಕೊನೇ ಓವರ್‌ನಲ್ಲಿ ಭಾರತ ತಂಡವನ್ನು ಜಯದ ದಡ ಮುಟ್ಟಿಸಿದರು. ಈ ಮೂಲಕ ಚೇಸ್ ಮಾಸ್ಟರ್ ಎಂಬುದನ್ನು ಕಿಂಗ್ ಕೊಹ್ಲಿ ಮತ್ತೊಮ್ಮೆ ಸಾಬೀತುಪಡಿಸಿದರು.

ಲಾಸ್ಟ್ ಓವರ್ ಥ್ರಿಲ್ಲರ್: ಕೊನೆ ಓವರ್‌ನಲ್ಲಿ ಭಾರತ ತಂಡಕ್ಕೆ ಎಡಗೈ ಸ್ಪಿನ್ನರ್ ಮೊಹಮ್ಮದ್ ನವಾಝ್ ಎದುರು 16 ರನ್ ಬೇಕಿತ್ತು. ಮೊದಲ ಎಸೆತದಲ್ಲಿ 40 ರನ್ ಗಳಿಸಿ ಉತ್ತಮವಾಗಿ ಆಡುತ್ತಿದ್ದ ಹಾರ್ದಿಕ್ ಪಾಂಡ್ಯ ವಿಕೆಟ್ ಒಪ್ಪಿಸಿದರು. ಎರಡನೇ ಎಸೆತದಲ್ಲಿ ದಿನೇಶ್ ಕಾರ್ತಿಕ್ ಒಂದು ರನ್ ತಂದುಕೊಟ್ಟರು. 3ನೇ ಎಸೆತದಲ್ಲಿ ವಿರಾಟ್ ಕೊಹ್ಲಿ 2 ರನ್ ತಂದುಕೊಟ್ಟರು. ಮರು ಎಸೆತದ ನೋಬಾಲ್‌ಗೆ ಕೊಹ್ಲಿ ಸಿಕ್ಸರ್ ಚಚ್ಚಿದರು. ಹೀಗಾಗಿ ಕೊನೆಯ 3 ಎಸೆತಗಳಲ್ಲಿ 6 ರನ್‌ಗಳ ಅಗತ್ಯವಿತ್ತು. ಮರು ಎಸೆತ ವೈಡ್ ಆಯಿತು. ನಂತರ 4ನೇ ಎಸೆತದಲ್ಲಿ ಬೈ ಮೂಲಕ 3 ರನ್ ಗಳಿಸಿದರು. ಇನ್ನು ಕೊನೆಯ 2 ಎಸೆತಗಳಲ್ಲಿ 2 ರನ್‌ಗಳ ಅಗತ್ಯವಿತ್ತು. ಆದರೆ 5ನೇ ಎಸೆತದಲ್ಲಿ ದಿನೇಶ್ ಕಾರ್ತಿಕ್ ರನೌಟ್ ಆದರು. ಕೊನೆಯ ಎಸೆತದಲ್ಲಿ ಭಾರತ ಗೆಲ್ಲಲು 2 ರನ್‌ಗಳ ಅಗತ್ಯವಿತ್ತು. ಮತ್ತೆ ನವಾಜ್ ವೈಡ್ ಎಸೆದರು. ಹೀಗಾಗಿ ಕೊನೆಯ ಎಸೆತದಲ್ಲಿ ಒಂದು ರನ್ ಅಗತ್ಯವಿತ್ತು. ಅಶ್ವಿನ್ ನೇರವಾಗಿ ಬೌಂಡರಿ ಸಿಡಿಸುವ ಮೂಲಕ ಗೆಲುವಿನ ರನ್ ಬಾರಿಸಿದರು. ಅಂತಿಮವಾಗಿ ಭಾರತ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 160 ರನ್ ಗಳಿಸಿ ಗೆಲುವಿನ ನಗೆ ಬೀರಿತು. ಪಾಕಿಸ್ತಾನದ ಪರ ಹ್ಯಾರಿಸ್ ರೌಫ್, ಮೊಹಮ್ಮದ್ ನವಾಜ್ 2, ನಸೀಮ್ ಶಾ 1 ವಿಕೆಟ್ ಉರುಳಿಸಿದರು.

ಸೇಡು ತೀರಿಸಿಕೊಂಡ ಭಾರತ: ಈ ಗೆಲುವಿನೊಂದಿಗೆ ಭಾರತ 2021ರ ಟಿ20 ವಿಶ್ವಕಪ್‌ನಲ್ಲಿ ಆದ ಸೋಲು ಹಾಗೂ ಇತ್ತೀಚೆಗೆ ನಡೆದ ಏಷ್ಯಾಕಪ್ ಸೋಲಿನ ಸೇಡು ತೀರಿಸಿಕೊಂಡಿತು. ಇದಕ್ಕೂ ಮುನ್ನಾ ಇಲ್ಲಿನ ಮೆಲ್ಬರ್ನ್ ಕ್ರಿಕೆಟ್ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 159 ರನ್ ಗಳಿಸಿತು. ಪಾಕಿಸ್ತಾನದ ಪರ ಶಾನ್ ಮಸೂದ್ 52, ಇಫ್ತಿಕರ್ ಅಹಮದ್ 51, ಶಾಹೀನ್ ಅಫ್ರಿದಿ 16 ರನ್ ಗಳಿಸಿದ್ದು ಬಿಟ್ಟರೆ ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ಪೆವಿಲಿಯನ್ ಪರೇಡ್ ನಡೆಸಿದರು. ಭಾರತದ ಪರ ಹರ್ಷದೀಪ್ ಸಿಂಗ್, ಹಾರ್ದಿಕ್ ಪಾಂಡ್ಯ ತಲಾ 3, ಭುವನೇಶ್ವರ್ ಕುಮಾರ್, ಮೊಹಮ್ಮದ್ ಶಮಿ ತಲಾ ಒಂದೊಂದು ವಿಕೆಟ್ ಪಡೆದರು.

ಟೀಂ ಇಂಡಿಯಾ ದಾಖಲೆ: ಟಿ20 ವಿಶ್ವಕಪ್ ಟೂರ್ನಿಯಲ್ಲಿ ಅಂತಿಮ 3 ಓವರ್‌ಗಳಲ್ಲಿ ಗರಿಷ್ಠ ರನ್ ಸಿಡಿಸಿ ಪಂದ್ಯ ಗೆದ್ದ ದಾಖಲೆಗಳಲ್ಲಿ ಭಾರತ ಇದೀಗ ಆಸ್ಟ್ರೇಲಿಯಾ ಜೊತೆ ಮೊದಲ ಸ್ಥಾನ ಹಂಚಿಕೊಂಡಿದೆ. ಪಾಕಿಸ್ತಾನ ವಿರುದ್ಧದ ಪಂದ್ಯದಲ್ಲಿ ಭಾರತ ಅಂತಿಮ 3 ಓವರ್‌ಗಳಲ್ಲಿ 48 ರನ್ ಸಿಡಿಸಿದೆ. ಈ ಮೂಲಕ 4 ವಿಕೆಟ್ ರೋಚಕ ಗೆಲುವು ದಾಖಲಿಸಿದೆ. ಇನ್ನು 2010ರಲ್ಲಿ ಆಸ್ಟ್ರೇಲಿಯಾ ಕೂಡ ಪಾಕಿಸ್ತಾನ ವಿರುದ್ಧ 48 ರನ್ ಸಿಡಿಸಿ ಗೆಲುವು ದಾಖಲಿಸಿತ್ತು.

ಅಂತಿಮ 3 ಓವರ್‌ಗಳಲ್ಲಿ ಗರಿಷ್ಠ ರನ್ ಚೇಸ್

48 ರನ್, ಆಸ್ಟ್ರೇಲಿಯಾ / ಪಾಕಿಸ್ತಾನ, 2010, 48 ರನ್ ಭಾರತ /ಪಾಕಿಸ್ತಾನ, 2022 42 ರನ್ ವೆಸ್ಟ್ ಇಂಡೀಸ್ /ಆಸ್ಟ್ರೇಲಿಯಾ, 2014, 41 ರನ್ ಶ್ರೀಲಂಕಾ / ಭಾರತ, 2010, ಭಾರತ ತಂಡ, ಕೊಹ್ಲಿಗೆ ಗಣ್ಯರ ಶುಭಾಶಯ: ಪಾಕ್ ವಿರುದ್ಧ ಭಾರತ ತಂಡ ಹಾಗೂ ವಿಶೇಷವಾಗಿ ಗೆಲುವಿಗೆ ಕಾರಣರಾದ ವಿರಾಟ್ ಕೊಹ್ಲಿಗೆ ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಅನೇಕ ಸಿನಿ ತಾರೆಯರು ಹಾಗೂ ಹಿರಿಯ ಕ್ರಿಕೆಟ್ ಆಟಗಾರರು ಸೇರಿದಂತೆ ಅನೇಕ ಗಣ್ಯರು ಶುಭಾಶಯ ಕೋರಿದ್ದಾರೆ. ಭಾರತದ ರೋಚಕ ಜಯದ ಬಗ್ಗೆ ಸಂಭ್ರಮಿಸಿ ಟ್ವೀಟ್ ಮಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ದೀಪಾವಳಿ ಶುರು ಎಂದಿದ್ದಾರೆ. ಟಿ-20ಯ ವಿಶ್ವಕಪ್‌ಗೆ ಅದ್ಭುತ ಆರಂಭ, ಇಂತಹ ಉಡುಗೊರೆ ಮೂಲಕ ದೀಪಾವಳಿ ಹಬ್ಬ ಶುರುವಾಗಿದೆ. ವಿರಾಟ್ ಕೊಹ್ಲಿ ಅವರಿಂದ ಎಂತಹ ಅದ್ಭುತ ಇನ್ನಿಂಗ್ಸ್ ಎಂದು ಶಾ ಬಣ್ಣಿಸಿದ್ದಾರೆ.

ಕುಣಿದ ಕುಪ್ಪಳಿಸಿದ ಗವಾಸ್ಕರ್: ಪಾಕ್ ವಿರುದ್ಧ ಭಾರತ ಗೆಲುವು ಸಾಧಿಸುತ್ತಿದ್ದಂತೆ ಹಿರಿಯ ಆಟಗಾರರಾದ ಸುನಿಲ್ ಗವಾಸ್ಕರ್, ಇರ್ಫಾನ್ ಪಠಾಣ್ ಸೇರಿದಂತೆ ಹಲವು ಆಟಗಾರರು ಮೆಲ್ಬೋರ್ನ್ ಅಂಗಳದಲ್ಲಿ ಕುಣಿದು ಕುಪ್ಪಳಿಸಿದರು.

ಮಾತುಗಳೇ ಬರುತ್ತಿಲ್ಲ: ಕೊಹ್ಲಿ

ಬಾಕಿ ಇದೆ. ಹಾಗಾಗಿ, ಹ್ಯಾರಿಸ್ ರೌಫ್ ಬೌಲಿಂಗ್‌ನಲ್ಲಿ ರನ್ ಗಳಿಸಿಕೊಂಡರೆ, ಅವರು ಗೊಂದಲಕ್ಕೀಡಾಗುತ್ತಾರೆ ಎಂದು ಮಾತನಾಡಿಕೊಂಡೆವು. ಅದರಂತೆ ಆಡಿದೆವು, ಎಂಟು ಎಸೆತಗಳಲ್ಲಿ 28 ರನ್ ಬೇಕಿದ್ದಾಗ ಎರಡು ಸಿಕ್ಸರ್ ಬಾರಿಸಿದೆ. ಹಾಗಾಗಿ ಕೊನೆಯ ಆರು ಎಸೆತಗಳಲ್ಲಿ 16 ರನ್ ಬೇಕಾಯಿತು. ಇದನ್ನೆಲ್ಲ ವಿವರಿಸಲು ನನ್ನ ಬಳಿ ಪದಗಳೇ ಇಲ್ಲ ಎಂದು ಹೇಳಿದ್ದಾರೆ.

ಹ್ಯಾರಿಸ್ ಬೌಲಿಂಗ್‌ನಲ್ಲಿ ಸತತ ಎರಡು ಸಿಕ್ಸರ್ ಸಿಡಿಸಿದ್ದು ಹೇಗೆ ಎಂದು ಕೇಳಿದ್ದಕ್ಕೆ, 'ಸಾಕಷ್ಟು ಹಿಂದೆ ಬಿದ್ದ ನಿಧಾನಗತಿ ಎಸೆತವನ್ನು ಲಾಂಗ್ ಆನ್‌ನತ್ತ ಬಾರಿಸಿದ ಮೊದಲ ಸಿಕ್ಸರ್ ಅನಿರೀಕ್ಷಿತವಾಗಿತ್ತು. ಫೈನ್ ಲೆಗ್‌ನಲ್ಲಿ ಬಾರಿಸಿದ ಇನ್ನೊಂದು ಸಿಕ್ಸರ್ ಬ್ಯಾಟನ್ನು ಸುಮ್ಮನೆ ಅತ್ತ ತಿರುಗಿಸಿದೆ ಅಷ್ಟೇ' ಎಂದಿದ್ದಾರೆ. 'ಮೊಹಾಲಿಯಲ್ಲಿ (2016ರಲ್ಲಿ ಆಸ್ಟ್ರೇಲಿಯಾ ವಿರುದ್ಧ) ಆಡಿದ್ದ ಇನಿಂಗ್ಸ್ ಇದುವರೆಗೆ ನನ್ನ ಅತ್ಯುತ್ತಮ ಟಿ20 ಇನಿಂಗ್ಸ್ ಎಂದು ಹೇಳುತ್ತಿದ್ದೆ. ಆಗ ನಾನು 51 ಎಸೆತಗಳಲ್ಲಿ 82 ರನ್ ಗಳಿಸಿದ್ದೆ. ಇಂದು 53 ಎಸೆತಗಳಲ್ಲಿ 82 ರನ್ ಬಾರಿಸಿದ್ದೇನೆ. ಈ ಎರಡೂ ಇನಿಂಗ್ಸ್‌ಗಳು ವಿಶೇಷವಾದವು. ಪಂದ್ಯದ ಸನ್ನಿವೇಶ ಮತ್ತು ನಾವಿದ್ದ ಪರಿಸ್ಥಿತಿಯನ್ನು ಪರಿಗಣಿಸಿ ಇಂದಿನ ಇನಿಂಗ್ಸ್ ಸಹ ಅತ್ಯುತ್ತಮವಾದದ್ದು ಎಂದು ಪರಿಗಣಿಸುತ್ತೇನೆ' ಎಂದು ಅವರು ವಿವರಿಸಿದ್ದಾರೆ.

ಕುಣಿದ ರೋಹಿತ್ ಶರ್ಮಾ

ಈ ಪಂದ್ಯ ನನ್ನ ಜೀವನದಲ್ಲೇ ನಾನು ನೋಡಿದ ಅತ್ಯುತ್ತಮ ಪಂದ್ಯ ಎಂದು ಕೊಂಡಾಡಿದ್ದಾರೆ. ಈ ಬಗ್ಗೆ ಅವರು ಇನ್‌ಸ್ಟಾಗ್ರಾಂನಲ್ಲಿ ಬರೆದುಕೊಂಡಿದ್ದಾರೆ. ನೀನು ತುಂಬಾ ಸುಂದರ ಕೊಹ್ಲಿ, ನಮ್ಮ ಜನರಿಗೆ ನೀನು ನಿಜವಾದ ದೀಪಾವಳಿ ಉಡುಗೊರೆ ನೀಡಿದೆ. ಅದ್ಭುತ ಪಂದ್ಯ ಎಂದು ಮೆಚ್ಚಿ ಬರೆದುಕೊಂಡಿದ್ದಾರೆ. ನಾನು ನನ್ನ ಕೋಣೆಯಲ್ಲಿ ಈ ಪಂದ್ಯ ನೋಡುತ್ತಿದ್ದೆ. ನಾನು ಕುಣಿದು ಕುಪ್ಪಳಿಸಿದೆ. ಆದರೆ ನಮ್ಮ ಮಗುವಿಗೆ ನಾನೇಕೆ ನೃತ್ಯ ಮಾಡಿದೆ ಎಂದು ಗೊತ್ತಿಲ್ಲ. ಆದರೆ, ಮುಂದೊಂದು ದಿನ ಇದು ಗೊತ್ತಾಗುತ್ತದೆ ಎಂದು ಬರೆದುಕೊಂಡಿದ್ದಾರೆ.

ರಾಜ್ಯಪಾಲರ ಅಂಕಿತ

ಇದರೊಂದಿಗೆ ಎಸ್ಸಿ ಸಮುದಾಯದ ಮೀಸಲಾತಿ ಶೇ.15ರಿಂದ ಶೇ.17ಕ್ಕೆ ಹಾಗೂ ಎಸ್ಟಿ ಸಮುದಾಯದ ಮೀಸಲಾತಿ ಶೇ.3ರಿಂದ ಶೇ.7ಕ್ಕೆ ಹೆಚ್ಚಳವಾಗಲಿದೆ. ಶಿಕ್ಷಣ ಮತ್ತು ಉದ್ಯೋಗದಲ್ಲಿ ಎಸ್ಸಿ, ಎಸ್ಟಿಗೆ ಹೆಚ್ಚುವರಿ ಮೀಸಲಾತಿ ದೊರೆಯಲಿದೆ.

ಇತ್ತೀಚೆಗೆ ಮೀಸಲಾತಿ ಪ್ರಮಾಣ ಹೆಚ್ಚಳ ಸಂಬಂಧ ಕೈಗೊಂಡಿರುವ ನಿರ್ಧಾರವನ್ನು ಅನುಷ್ಠಾನಗೊಳಿಸಲು ಸುಗ್ರೀವಾಜ್ಞೆ ಹೊರಡಿಸುವುದಕ್ಕೆ ಸಚಿವ ಸಂಪುಟ ಸಭೆ ಮಹತ್ವದ ತೀರ್ಮಾನ ಕೈಗೊಂಡಿತ್ತು. ಇದೀಗ ಸುಗ್ರೀವಾಜ್ಞೆಗೆ ರಾಜ್ಯಪಾಲರ ಮುದ್ರೆ ಬಿದ್ದಿದೆ.

ಎಕ್ಸಿಕ್ಯೂಟಿವ್ ಆರ್ಡರ್ ತೀರ್ಮಾನವೇ ಸಾಕು ಎಂದು ಭಾವಿಸಲಾಗಿತ್ತು. ಆದರೆ ಯಾರಾದರೂ ನ್ಯಾಯಾಲಯದಲ್ಲಿ ಪ್ರಶ್ನಿಸಿದರೆ ಸಮಸ್ಯೆಯಾಗಬಹುದು ಎನ್ನುವ ದೂರದೃಷ್ಟಿಯಿಂದ ಬೊಮ್ಮಾಯಿ ಸರ್ಕಾರ ಸಚಿವ ಸಂಪುಟದಲ್ಲಿ ಎಸ್‌ಸಿ, ಹಾಗೂ ಎಸ್‌ಟಿ ಸಮುದಾಯಗಳಿಗೆ ಮೀಸಲಾತಿ ಹೆಚ್ಚಳ ಸಂಬಂಧ ಸುಗ್ರೀವಾಜ್ಞೆ ಹೊರಡಿಸಿತ್ತು.

ಹೊಸ ಸುರಕ್ಷಾ ಕಾಲುವೆ ನಿರ್ಮಾಣ

ತೂಬು ಕಾರ್ಯನಿರ್ವಹಿಸುತ್ತಿದೆ: ಕುಕ್ಕರಹಳ್ಳಿಯ ವಾಲ್ವ್‌ಮನ್ ತಮ್ಮಣ್ಣೇಗೌಡ ಮಾತನಾಡಿ, ಕೆರೆಯ ಹೆಚ್ಚುವರಿ ನೀರನ್ನು ಗೇಟ್‌ವಾಲ್ವ್ ಮೂಲಕ ಹೊರ ಬಿಡಲಾಗುತ್ತಿದೆ. ಮೊದಲ ಎರಡು ದಿನ ಸ್ಟ್ರಕ್ ಆಗಿತ್ತು. ಸತತ ಪ್ರಯತ್ನದ ಬಳಿಕ ಅದು ಈಗ ಸರಿಯಾಗಿ ಕೆಲಸ ಮಾಡುತ್ತಿದೆ. ಎರಡು ದಿನದಿಂದ ಕೆರೆಯಿಂದ ಹೆಚ್ಚುವರಿ ನೀರನ್ನು ಹೊರಗೆ ಬಿಡುತ್ತಿರುವುದರಿಂದ ಸಾಕಷ್ಟು ನೀರು ಕಡಿಮೆಯಾಗಿರುವುದನ್ನು ವಾಯುವಿಹಾರಿಗಳು ಗಮನಿಸಿದ್ದಾರೆ. ಕೆರೆ ಹಾಗೂ ಏರಿಗೆ ಯಾವುದೇ ಆತಂಕವಿಲ್ಲ ಎಂದರು.

ಸ್ಥಳೀಯರ ಆತಂಕ: ಕುಕ್ಕರಹಳ್ಳಿ ಕೆರೆ ಏರಿಯಲ್ಲಿ ಕೆಲವೆಡೆ ನೀರು ಜಿನುಗುತ್ತಿರುವುದರಿಂದ ಏರಿ ಅಭದ್ರಗೊಳ್ಳುವ ಸಾಧ್ಯತೆ ಇದೆ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ. ನೀರು ಚರಂಡಿ ಮೂಲಕ ಹರಿಯುತ್ತಿರುವುದರಿಂದ ಸರಸ್ವತಿಪುರಂನ ತಗ್ಗು ಪ್ರದೇಶಕ್ಕೆ ನುಗ್ಗಬಹುದೆಂಬ ಆತಂಕ ಸ್ಥಳೀಯರದ್ದಾಗಿದ್ದು, ಏರಿಯ ಭದ್ರತೆಯ ಬಗ್ಗೆ ವಿಶ್ವಾಸ ಮೂಡಿಸುವಂತೆ ಮನವಿ ಮಾಡಿದ್ದಾರೆ.

ಸಮನ್ವಯತೆ ಬಾಳಿನ ಮುಖ್ಯ ಸೂತ್ರವಾಗಬೇಕು

● ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಕಿವಿಮಾತು


● ಇದು ಸಾಧ್ಯವಾಗದಿದ್ದರೆ ಭವಿಷ್ಯದಲ್ಲಿ ಕಷ್ಟಕರ ಪರಿಸ್ಥಿತಿ ಎದುರಿಸಬೇಕಾಗುತ್ತದೆ

ಮೈಸೂರು, ಅ.23(ಎಸ್‌ಬಿಡಿ)- ಸಮನ್ವಯತೆ ಬಾಳಿನ ಮುಖ್ಯ ಸೂತ್ರವಾಗದಿದ್ದರೆ ಮುಂದಿನ ದಿನಗಳಲ್ಲಿ ಕ್ಲಿಷ್ಟ ಪರಿಸ್ಥಿತಿ ಎದುರಿಸಬೇಕಾಗುತ್ತದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅಶೋಕ ಹಾರನಹಳ್ಳಿ ಎಚ್ಚರಿಸಿದರು.

ಪಂಡಿತರತ್ನಂ ಕೆ.ಎಸ್.ವರದಾಚಾರ್ಯ ಶತಮಾನೋತ್ಸವ ಸಮಿತಿ ವತಿಯಿಂದ ಮೈಸೂರಿನ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಆಯೋಜಿಸಿದ್ದ ವರದಾಚಾರ್ಯರ ಶತಮಾನೋತ್ಸವ ಆಚರಣೆಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಸಿದ್ಧಾಂತಗಳ ಬಗ್ಗೆ ಪರಸ್ಪರ ಖಂಡನೆ ವ್ಯಕ್ತವಾದರೆ ತುಂಬಾ ತೊಂದರೆ ಉಂಟಾಗುತ್ತದೆ ಹಾಗಾಗಿ ಇಂದಿನ ಸಮಾರೋಪ ಸಮಾರಂಭದಲ್ಲಿ ಸಮನ್ವಯತೆಗೆ ಚಾಲನೆ ಸಿಗಬೇಕೆಂದು ಆಶಿಸಿದರು.

ಧರ್ಮ ರಕ್ಷಣೆ: ಹಿಂದಿನಿಂದ ಆಚಾರ್ಯರು ಸೇರಿದಂತೆ ಅನೇಕ ಮಹನೀಯರು ಶ್ರೇಷ್ಠ ಸನಾತನ ಧರ್ಮವನ್ನು ಉಳಿಸಿ, ಬೆಳೆಸಿದ್ದಾರೆ. ಈಗ ಮತ್ತೊಮ್ಮೆ ಸನಾತನ ಧರ್ಮ ರಕ್ಷಣೆಗೆ ಟೊಂಕಕಟ್ಟಿ ನಿಲ್ಲಬೇಕಾದ ಅನಿವಾರ್ಯತೆ ಬಂದಿದೆ. ಸನಾತನ ಧರ್ಮದ ಮೇಲೆ ಅನೇಕ ಕಡೆಗಳಿಂದ ಆಕ್ರಮಣ ನಡೆಯುತ್ತಿದೆ. ಅಲ್ಲದೆ ಸಂಘಟನೆಯ ದೃಷ್ಟಿಯಿಂದ ಕಾರ್ಯಕ್ರಮಗಳಿಗೆ ಹೋದರೆ ಯಾರದ್ದೋ ಹೇಳಿಕೆಗೆ ತಿರುಗೇಟು ನೀಡುವಂತೆ ಆಗ್ರಹಿಸುತ್ತಾರೆ. ಜಾತಿ ಆಧಾರದಲ್ಲಿ ಹಲವು ಸಂಘರ್ಷ ನಡೆದು ಧರ್ಮ ಪರಿಕಲ್ಪನೆ ಬಗ್ಗೆ ತಿಳಿವಳಿಕೆ ಕಡಿಮೆಯಾಗಿದೆ. ಹೀಗಾದರೆ ಧರ್ಮಕ್ಕೆ ಶಕ್ತಿ ತುಂಬಲು ಹೇಗೆ ಸಾಧ್ಯ? ಎಂದು ಪ್ರಶ್ನಿಸಿದರು.

ಏಕರೀತಿ ಸಂದೇಶ: ಧರ್ಮಗಳನ್ನು ಕುರಿತ ಮೂಲ ಗ್ರಂಥಗಳ ಅಧ್ಯಯನದಿಂದ ಮಾತ್ರ ವಾಸ್ತವಾಂಶ ತಿಳಿಯಲು ಸಾಧ್ಯ ಆದರೆ ಎಲ್ಲರೂ ದೊಡ್ಡ ಗ್ರಂಥಗಳನ್ನು ಓದಲು ಸಾಧ್ಯವಿಲ್ಲ. ಅದರಲ್ಲೂ ಪ್ರಸ್ತುತ ಓದುವ ಹವ್ಯಾಸವೇ ಕಡಿಮೆಯಾಗಿದೆ. ಹೀಗಾದರೆ ಧರ್ಮ ಎಲ್ಲಿ ಹೋಗಿ ಮುಟ್ಟುತ್ತದೆ? ಮುಂದಿನ ಪೀಳಿಗೆ ಏನು ಮಾಡಬೇಕು?.



ಮೈಸೂರಿನ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಭಾನುವಾರ ನಡೆದ ಪಂಡಿತರತ್ನಂ ಕೆ.ಎಸ್. ವರದಾಚಾರ್ಯ ಶತಮಾನೋತ್ಸವ ಸಮಾರೋಪ ಸಮಾರಂಭದಲ್ಲಿ ಸಂಸ್ಕೃತ ವಿದ್ವಾಂಸರಾದ ಮಣಿ ದ್ರಾವಿಡ ಶಾಸ್ತ್ರಿ ಹಾಗೂ ವೇದ ವಿದ್ವಾಂಸ ವೇದಮೂರ್ತಿ ಜಂಬುನಾಥನ್ ಘನಪಾಠಿ ಅವರನ್ನು ಪ್ರಶಸ್ತಿಯೊಂದಿಗೆ ಅಭಿನಂದಿಸಲಾಯಿತು.

ಹಾಗಾಗಿ ಸುಲಭ ಮಾರ್ಗದಲ್ಲಿ ಸಾಮಾನ್ಯರಿಗೆ ಧರ್ಮದ ಜಾಗೃತಿ ಮೂಡಿಸಬೇಕಾಗಿದೆ ಈ ನಿಟ್ಟಿನಲ್ಲಿ ಎಲ್ಲಾ ಜಾತಿಗಳನ್ನು ಧರ್ಮದ ವೇದಿಕೆಯಲ್ಲಿ ಒಗ್ಗೂಡಿಸಬೇಕಿದೆ. ಎಲ್ಲಾ ಮಠಮಾನ್ಯರೂ ಒಂದೇ ವೇದಿಕೆಯ ಮೂಲಕ ಏಕರೀತಿಯ ಧರ್ಮ ಸಂದೇಶವನ್ನು ಸಮಾಜಕ್ಕೆ ರವಾನಿಸುವುದು ಅನಿವಾರ್ಯವಾಗಿದೆ ಎಂದು ತಿಳಿಸಿದರು.

ಮೀಸಲಾತಿ ಸಮರ: ರಾಜ್ಯದಲ್ಲಿ ಜಾತಿ ಆಧಾರದಲ್ಲಿ ಶೇ.50ಕ್ಕಿಂತ ಹೆಚ್ಚು ಮೀಸಲಾತಿ ನೀಡಲಾಗುತ್ತಿದೆ. ಒಂದು ವರ್ಗಕ್ಕೆ ಮೀಸಲಾತಿ ಹೆಚ್ಚಿಸಿದ ಹಿನ್ನೆಲೆಯಲ್ಲಿ ಬೇರೆಯವರೂ ಕೇಳುತ್ತಿದ್ದಾರೆ. ಹೀಗಾದರೆ ಶೇ.100ರಷ್ಟು ಮೀಸಲಾತಿ ನೀಡಿ, 110ನೆಯವರಾಗಿ ನಾವು ಹೊರಗುಳಿಯಬೇಕಾಗುತ್ತದೆ. ಆಲೋಚನೆ ಮಾಡದಿದ್ದರೆ ಮುಂದಿನ ದಿನಗಳಲ್ಲಿ ಹಲವು ಕ್ಲಿಷ್ಟಕರ ಪರಿಸ್ಥಿತಿ ಎದುರಿಸಬೇಕಾಗುತ್ತದೆ ಎಂದು ಹೇಳಿದರು.

ಜಾಗೃತಿ ಸಮಿತಿ: ಜಾತಿ ಆಧಾರದಲ್ಲಿ ನಡೆಯುತ್ತಿರುವ ಸಂಘರ್ಷ ನಿಲ್ಲಿಸಿ, ಎಲ್ಲರಲ್ಲೂ ಧರ್ಮದ ತಿಳುವಳಿಕೆ ಮೂಡಬೇಕಿದೆ. ಈ ನಿಟ್ಟಿನಲ್ಲಿ ಭಾನುಪ್ರಕಾಶ್ ಶರ್ಮಾ ಅವರ ನೇತೃತ್ವದಲ್ಲಿ 'ಸನಾತನ ಧರ್ಮ ಜಾಗೃತಿ ಸಮಿತಿ' ರಚನೆ ಮಾಡಲಾಗಿದ್ದು, ಮುಂದಿನ ದಿನಗಳಲ್ಲಿ ಸಂಘಟನಾ ಕಾರ್ಯ ಆರಂಭಿಸಲಾಗುವುದು. ಇದಕ್ಕೆ ಸ್ವಾಮೀಜಿಯವರ ಮಾರ್ಗದರ್ಶನ, ಸಹಕಾರ ಬೇಕು ಎಂದು ಅಶೋಕ ಹಾರನಹಳ್ಳಿ ಮನವಿ ಮಾಡಿದರು.

ಸಾಧಕರಿಗೆ ಸನ್ಮಾನ: ಶಿರಸಿಯ ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನದ ಜಗದ್ಗುರು ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ, ಗುಜರಾತ್‌ನ ಶ್ರೀ ನಾರಾಯಣ ಗುರುಕುಲದ ಸದ್ಗುರು ಶ್ರೀ ಮಾಧವಪ್ರಿಯ ದಾಸ್‌ಜೀ ಸ್ವಾಮೀಜಿ, ಮೇಲುಕೋಟೆ ಶ್ರೀ ಯದುಗಿರಿ ಯತಿರಾಜಮಠದ ಶ್ರೀ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಅವರ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೊಯಮತ್ತೂರಿನ ಹಿರಿಯ ವೇದ ವಿದ್ವಾಂಸ ವೇದಮೂರ್ತಿ ಜಂಬುನಾಥನ್ ಘನಪಾಠಿ ಹಾಗೂ ಸಂಸ್ಕೃತ ವಿದ್ವಾಂಸರೂ ಆದ ಅದ್ವೈತ ವೇದಾಂತ ಮಣಿ ದ್ರಾವಿಡ ಶಾಸ್ತ್ರಿ ಅವರಿಗೆ ಸಾಧನೆಯನ್ನು ಬಿಂಬಿಸುವ ಪ್ರಶಸ್ತಿಯೊಂದಿಗೆ ಅಭಿನಂದಿಸಲಾಯಿತು.

ಮುಡಾ ನಿಕಟಪೂರ್ವ ಅಧ್ಯಕ್ಷ ಹೆಚ್.ವಿ.ರಾಜೀವ್, ಶಾರದಾ ವಿಲಾಸ ವಿದ್ಯಾಸಂಸ್ಥೆಗಳ ಅಧ್ಯಕ್ಷ ಡಾ.ಜಿ.ಎಂ. ಸುಬ್ರಾಯ ಹಾಗೂ ಪಂಡಿತರತ್ನಂ ಕೆ.ಎಸ್.ವರದಾಚಾರ್ಯರ ಪುತ್ರ ಶೇಖರ್ ವರದಾ ಮಾತನಾಡಿದರು. ಮೇಲುಕೋಟೆ ವಂಗೀಪುರಂನ ನಂಬಿಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಶ್ರೀರಂಗಪಟ್ಟಣದ ಶಾಶ್ವತಿ ಧಾರ್ಮಿಕ ಕ್ರಿಯಾ ಸಮಿತಿಯ ಡಾ.ಭಾನುಪ್ರಕಾಶ್ ಶರ್ಮಾ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣರ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಚಾಮರಾಜನಗರದ ಹೆಗ್ಡೆ ಮತ್ತಿತರರು ಉಪಸ್ಥಿತರಿದ್ದರು.

> "ಎಲ್ಲಾ ಭಾಷೆಯ ಪಂಡಿತರಿದ್ದ ಪುಣ್ಯಭೂಮಿ ಈ ಮೈಸೂರು. ಹಿಂದೆ ಮೈಸೂರು ಹಾಗೂ ಕಾಶಿಯಲ್ಲಿ ಮಾತ್ರ ವಿದ್ಯಾರ್ಥಿಗಳು ಅತ್ತಿತ್ತ ನೋಡದಂತೆ ತಲೆ ಮೇಲೆ ನಿಂಬೆಹಣ್ಣಿಟ್ಟು ಪರೀಕ್ಷೆ ನಡೆಸುತ್ತಿದ್ದರಂತೆ. ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಆ ಊರಿನ ಹೆಸರಿನಿಂದಲೇ ಗುರುತಿಸಿಕೊಳ್ಳುತ್ತಿದ್ದರು. ಉದಾಹರಣೆಯಾಗಿ ಕೊಯಮತ್ತೂರಿನಲ್ಲಿ ಮೈಸೂರು ಘನಪಾಠಿ ಎಂಬುವವರಿದ್ದಾರೆ. ನಾನೂ ಕೂಡ ಒಂದೆರಡು ವರ್ಷ ಒಂಟಿಕೊಪ್ಪಲಿನಲ್ಲಿದ್ದೆ. ಗುರುಗಳ ವಾತ್ಸಲ್ಯ, ತಾಯಿ ವಾತ್ಸಲ್ಯಕ್ಕೆ ಸಮ. ವಿಶ್ವಾಸ, ಶ್ರದ್ಧಾಭಕ್ತಿ ಹಾಗೂ ಕೃತಜ್ಞತೆ ನಾವು ಗುರುಗಳಿಗೆ ಸಲ್ಲಿಸಬಹುದಾದ ನಿಜವಾದ ಕಾಣಿಕೆ.
> -ವೇದಮೂರ್ತಿ ಜಂಬುನಾಥನ್ ಘನಪಾಠಿ

ಕಬ್ಬು ದರ ನಿಗದಿಯಲ್ಲಿ ಸರ್ಕಾರದ ವಿಳಂಬ ಧೋರಣೆ ಖಂಡಿಸಿ

ಅ.27ರಂದು ರಾಜ್ಯಾದ್ಯಂತ ರಸ್ತೆ ತಡೆ; 31ರಂದು ಡಿಸಿ ಕಚೇರಿಗಳಿಗೆ ಮುತ್ತಿಗೆ



ಮೈಸೂರು, ಅ.23(ಆರ್‌ಕೆಬಿ)- ಕಬ್ಬು ದರ ನಿಗದಿಪಡಿಸುವಲ್ಲಿ ರಾಜ್ಯ ಸರ್ಕಾರದ ವಿಳಂಬ ಧೋರಣೆಯನ್ನು ಖಂಡಿಸಿ ಕಬ್ಬು ಬೆಳೆಗಾರರು ಅ.27ರಂದು ರಾಜ್ಯಾದ್ಯಂತ ರಸ್ತೆ ತಡೆ ಚಳುವಳಿ ನಡೆಸುವರು. ಸರ್ಕಾರ ಅದಕ್ಕೂ ಮನ್ನಣೆ ನೀಡದಿದ್ದರೆ ಅ.31ರಂದು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳ ಕಚೇರಿಗೆ ರೈತರು ಮುತ್ತಿಗೆ ಹಾಕುವ ಜೊತೆಗೆ ಅಹೋರಾತ್ರಿ ಪ್ರತಿಭಟನೆ ನಡೆಸಲಾಗುವುದು ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಇಂದಿಲ್ಲಿ ತಿಳಿಸಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಕಬ್ಬಿನ ಎಫ್‌ಆರ್‌ಪಿ ದರಕ್ಕೆ ಹೆಚ್ಚುವರಿ ದರ ನಿಗದಿಪಡಿಸಲು ಮಂತ್ರಿಗಳು ನಾಲ್ಕು ಸಭೆಗಳನ್ನು ನಡೆಸಿ, ಯಾವುದೇ ತೀರ್ಮಾನ ಕೈಗೊಳ್ಳದೆ ಮುಂದೂಡುವ ಮೂಲಕ ಕಬ್ಬು ಬೆಳೆಗಾರರಿಗೆ ದ್ರೋಹ ಬಗೆದಿದ್ದಾರೆ. ಕಬ್ಬು ಬೆಳೆಗಾರರು ನಾಲ್ಕು ತಿಂಗಳಿಂದಲೂ ಹೋರಾಟ ನಡೆಸುತ್ತಿದ್ದರೂ ಯಾವುದೇ ಶಾಸಕರಾಗಲೀ, ಸಂಸದರಾಗಲೀ ಚಕಾರ ಎತ್ತುತ್ತಿಲ್ಲ ಎಂಬುದನ್ನು ನೋಡಿದರೆ ಅವರ ಬಗ್ಗೆ ಅನುಮಾನ ಉಂಟಾಗುತ್ತಿದೆ ಎಂದರು.

30 ಲಕ್ಷ ಕಬ್ಬು ಬೆಳೆಗಾರರ 40 ಸಾವಿರ ಕೋಟಿ ವಹಿವಾಟು ನಡೆಸುವ ಈ ಉದ್ಯಮ ಸರ್ಕಾರಕ್ಕೆ ಲಾಭ ತರುತ್ತಿಲ್ಲವೇ? 5 ಸಾವಿರ ಕೋಟಿ ವ್ಯವಹಾರ ನಡೆಸುವ ಅಡಿಕೆ ಬೆಳೆಗಾರರ ಬಗ್ಗೆ ಕೇಂದ್ರಕ್ಕೆ ನಿಯೋಗ ಹೋಗಿ ಮನವಿ ಮಾಡುವ ರಾಜ್ಯದ ಗೃಹ ಸಚಿವರಿಗೆ ಹಾಗೂ ಸಂಸತ್ ಸದಸ್ಯರಿಗೆ ಕಬ್ಬು ಬೆಳೆಗಾರರ ಗೋಳು ಕಾಣುತ್ತಿಲ್ಲವೇಕೇ ಎಂದು ಪ್ರಶ್ನಿಸಿದರು.

ಪಂಜಾಬ್‌ನಲ್ಲಿ 3800, ಉತ್ತರ ಪ್ರದೇಶದಲ್ಲಿ 3500, ಗುಜರಾತ್‌ನಲ್ಲಿ 4400 ರೂ. ದರ ನಿಗದಿ ಮಾಡಿದ್ದಾರೆಂಬ ಬಗ್ಗೆ ರಾಜ್ಯ ಸರ್ಕಾರ ವರದಿ ತರಿಸಿಕೊಂಡಿದೆ ಎನ್ನಲಾಗಿದ್ದು, ಇದನ್ನು ಗಮನಿಸಿ ಎಫ್‌ಆರ್‌ಪಿ ದರ ಪ್ರತಿ ಟನ್‌ಗೆ ಕನಿಷ್ಠ 3500 ರೂ. ನಿಗದಿಪಡಿಸಬೇಕು ಎಂದು ಆಗ್ರಹಿಸಿದರು.

ಸಕ್ಕರೆ ಉದ್ದಿಮೆ ಸಂಪೂರ್ಣವಾಗಿ ಗಣಕೀಕರಣ ಮಾಡಬೇಕು ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘ ಕಳೆದ ಏ.26 ರಂದು ಒತ್ತಾಯಿಸಿತ್ತು. ರೈತನ ಕಬ್ಬಿನ ನಾಟಿ ಒಪ್ಪಂದ, ಜೇಷ್ಠತೆ ಆಧಾರದಲ್ಲಿ ಕಟಾವು ಅನುಮತಿ, ಕಬ್ಬಿನ ತೂಕ, ಕಬ್ಬಿನ ಹಣ ಪಾವತಿ, ಸಕ್ಕರೆ ಇಳುವರಿ, ಎಲ್ಲವೂ ಗಣಕೀಕರಣವಾಗಿ ರೈತರ ಮೊಬೈಲ್ ಆ್ಯಪ್ ಮೂಲಕ ನೋಂದಾಯಿಸುವ ಅವಕಾಶ ಕಲ್ಪಿಸಬೇಕೆಂದು ಒತ್ತಾಯಿಸಲಾಗಿತ್ತು. ಈಗ ರಾಜ್ಯ ಸರ್ಕಾರ ಜಾರಿಗೆ ತರಲು ಮುಂದಾಗಿರುವುದು ಕಬ್ಬು ಬೆಳೆಗಾರರ ಬಹುತೇಕ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ ಎಂದು ಕುರುಬೂರು ಶಾಂತಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳಾದ ಅತ್ತಹಳ್ಳಿ ದೇವರಾಜ್, ಪಿ.ಸೋಮಶೇಖರ್, ಬರಡನಪುರ ನಾಗರಾಜು ಇನ್ನಿತರರು ಉಪಸ್ಥಿತರಿದ್ದರು.

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಲ್.ನಾಗೇಂದ್ರ ಚಾಲನೆ



ಮೈಸೂರು, ಅ.23(ಆರ್‌ಕೆಬಿ)- ಶಾಸಕರ ಸ್ಥಳೀಯಾಭಿವೃದ್ಧಿ ಯೋಜನೆ ಅನುದಾನ, ಸಮಾಜ ಕಲ್ಯಾಣ ಇಲಾಖೆ ವಿಶೇಷ ಘಟಕ ಯೋಜನೆ ಅನುದಾನ, ಮಹಾತ್ಮಗಾಂಧಿ ನಗರ ಅನುದಾನ ಹಾಗೂ ಮೈಸೂರು ನಗರಪಾಲಿಕೆ ಸಾಮಾನ್ಯ ಅನುದಾನದಡಿ ಒಟ್ಟು 70 ಲಕ್ಷ ರೂ.ಗಳಲ್ಲಿ ಕೈಗೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಲ್.ನಾಗೇಂದ್ರ ಇಂದು ಚಾಲನೆ ನೀಡಿದರು. ಗೋಕುಲಂ 4ನೇ ಹಂತ ಮಂಜುನಾಥಪುರ 1ನೇ ಮುಖ್ಯರಸ್ತೆಯಲ್ಲಿರುವ ಸಮುದಾಯ ಭವನದ ಒಂದನೇ ಮಹಡಿಯಲ್ಲಿ ಡಾ.ಬಾಬು ಜಗಜೀವನರಾಂ ಸಮುದಾಯ ಭವನದ ಕಟ್ಟಡ ನಿರ್ಮಾಣ, ಗೋಕುಲಂನ ಶ್ರೀಚಾಮುಂಡೇಶ್ವರಿ ಅಮ್ಮನವರ ಸೇವಾ ಟ್ರಸ್ಟ್ ಸಮುದಾಯ ಭವನ, ಮಂಜುನಾಥಪುರ ಕಟ್ಟಡ ನಿರ್ಮಾಣದ ಮುಂದುವರಿದ ಕಾಮಗಾರಿ, ದೊಡ್ಡಮ್ಮ ತಾಯಿ ದೇವಸ್ಥಾನದ ರಸ್ತೆ ಅಭಿವೃದ್ಧಿ, ಬೋವಿ ಕ್ಷೇಮಾಭಿವೃದ್ಧಿ ಸಂಘದ ಸಮುದಾಯ ಭವನ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಅವರು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ 18ನೇ ವಾರ್ಡ್‌ನ ಪಾಲಿಕೆ ಸದಸ್ಯ ರವೀಂದ್ರ, ಚಾಮರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಸೋಮಶೇಖರರಾಜು, ಪಾಲಿಕೆ ಮಾಜಿ ಸದಸ್ಯ ಗುರುವಿನಾಯಕ, ಆಶ್ರಯ ಸಮಿತಿ ಸದಸ್ಯ ಮಹೇಶ್, ಮುಖಂಡರಾದ ದಿನೇಶ್‌ಗೌಡ, ಷಣ್ಮುಗಂ, ಶ್ರೀನಿವಾಸ್, ಮುರುಗೇಶ್, ಹರೀಶ್, ಕವಿತಾ, ರೂಪ, ನಾಗರತ್ನ, ವೆಂಕಟರಾಮು, ದ್ವಾರಕೀಶ್, ಮಲ್ಲಿಕಾರ್ಜುನ, ಪ್ರಕಾಶ್, ಗೋವಿಂದ, ಶಿವಕುಮಾರ್, ರವಿ, ಮಹದೇವ್, ಮಣಿ, ನಾರಾಯಣ, ಸುಬ್ರಮಣ್ಯ, ನಾಗರಾಜು, ಗಂಗಾಧರ್, ಶ್ರೀನಿವಾಸ್, ಹೇಮಕುಮಾರ್, ನಾರಾಯಣ, ರಾಮಚಂದ್ರ ಇನ್ನಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಅ.23- ನಂಜನಗೂಡು ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಮೆಟ್ರಿಕ್ ನಂತರದ ಬಾಲಕ ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಂದ 2022-23ನೇ ಸಾಲಿನಲ್ಲಿ ಆನ್‌ಲೈನ್ ಮೂಲಕ ಅರ್ಜಿಯನ್ನು ನವೆಂಬರ್ 10ರೊಳಗಾಗಿ ಸಲ್ಲಿಸಲು ತಿಳಿಸಿದೆ.

ಹೊಸ ವಿದ್ಯಾರ್ಥಿಗಳು ವಿದ್ಯಾರ್ಥಿನಿಲಯಕ್ಕೆ ಅರ್ಜಿ ಸಲ್ಲಿಸಲು ನವೆಂಬರ್ 10 ಕೊನೆಯ ದಿನಾಂಕವಾಗಿದೆ, ಹೊಸ ಅರ್ಜಿಗಳನ್ನು ತಾಲೂಕು ಕಲ್ಯಾಣ ಅಧಿಕಾರಿಗಳು ಪರಿಶೀಲನೆ ಮಾಡಲು ನ.16 ಅಂತಿಮ ದಿನಾಂಕವಾಗಿದೆ, ಕೌನ್ಸಿಲಿಂಗ್ ಮೂಲಕ ಆಯ್ಕೆಯಾದ ಹೊಸ ವಿದ್ಯಾರ್ಥಿಗಳ ಆಯ್ಕೆ ಪಟ್ಟಿ ನ.21 ರಂದು ಪ್ರಕಟಣೆ ಆಗಲಿದೆ.

ಆಯ್ಕೆಯಾದ ವಿದ್ಯಾರ್ಥಿಗಳು ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶ ಪಡೆಯಲು ನ.28 ಅಂತಿಮ ದಿನಾಂಕವಾಗಿದೆ ಎಂದು ನಂಜನಗೂಡು ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಿತ್ತೂರು ರಾಣಿ ಚೆನ್ನಮ್ಮ ನಮ್ಮ ಮಹಿಳಾ ಸಮುದಾಯದ ಆದರ್ಶವಾಗಲಿ

ಮೈಸೂರು, ಅ.23(ಪಿಎಂ)- ಬ್ರಿಟಿಷರಲ್ಲಿ ನಡುಕ ಹುಟ್ಟಿಸಿದ್ದ ವೀರನಾರಿ ಕಿತ್ತೂರು ರಾಣಿ ಚೆನ್ನಮ್ಮ ನಮ್ಮ ಮಹಿಳಾ ಸಮುದಾಯದ ಆದರ್ಶವಾಗಬೇಕು ಎಂದು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಹೇಳಿದರು.

ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಯುವ ಭಾರತ್ ಸಂಘಟನೆ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಕಿತ್ತೂರು ರಾಣಿ ಚೆನ್ನಮ್ಮನವರ ಜಯಂತಿಯಲ್ಲಿ ರಾಣಿ ಚೆನ್ನಮ್ಮನವರ ಫೋಟೋಗೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ನಗರ ಪಾಲಿಕೆ ನಾಮನಿರ್ದೇಶಿತ ಸದಸ್ಯ ಜಗದೀಶ್, ಪತ್ರಕರ್ತ ಅನಿಲ್‌ಕುಮಾರ್, ಕರ್ನಾಟಕ ಕ್ಷತ್ರಿಯ ಒಕ್ಕೂಟದ ಅಧ್ಯಕ್ಷ ಸವಿತಾ ಘಾಟ್ಕೆ, ಕೆಆರ್ ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಚಾಮರಾಜ ಬಿಜೆಪಿ ಯುವಮೋರ್ಚಾ ಅಧ್ಯಕ್ಷ ಸಚಿನ್, ಮುಖಂಡರಾದ ವಿದ್ಯಾ, ಸ್ವಾತಿ, ಎಸ್.ಎನ್.ರಾಜೇಶ್, ಸುರೇಶ್, ಚರಣ್, ಮಹದೇವ ಪ್ರಸಾದ್, ಸದಾಶಿವ, ಪನೀಶ್ ಮತ್ತಿತರರು ಹಾಜರಿದ್ದರು.



ಹೆಣ್ಣುಮಕ್ಕಳ ಆತ್ಮರಕ್ಷಣೆಗೆ ತರಬೇತಿ, ಅರಿವು ಅತ್ಯಗತ್ಯ

ಸಾಧಕ ಮಕ್ಕಳು, ಮಹಿಳೆಯರಿಗೆ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮೇಯರ್ ಅಭಿಮತ

ಮೈಸೂರು, ಅ.23(ಆರ್‌ಕೆಬಿ)- ಹೆಣ್ಣು ಮಕ್ಕಳು ಯಾವ ರೀತಿ ತಮ್ಮ ಆತ್ಮರಕ್ಷಣೆ ಮಾಡಿಕೊಳ್ಳಬೇಕು ಎಂಬ ಬಗ್ಗೆ ಅವರಿಗೆ ತರಬೇತಿ ಜೊತೆಗೆ ಅರಿವು ಮೂಡಿಸುವುದು ಅತ್ಯಂತ ಅವಶ್ಯಕ ಎಂದು ಮೇಯರ್ ಶಿವಕುಮಾರ್ ತಿಳಿಸಿದರು.

ಮೈಸೂರಿನ ವಿಜಯನಗರ ಮೊದಲ ಹಂತದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ರಾಸಾ ಕನ್ನಡ ಮತ್ತು ಕಲಾ ಸಂಸ್ಕೃತಿ ಚಾರಿಟಬಲ್ ಟ್ರಸ್ಟ್ ಆಯೋಜಿಸಿದ್ದ ಸಾಧಕ ಮಕ್ಕಳು, ಮಹಿಳೆಯರು, ಕಲಾವಿದರಿಗೆ ರಾಜ್ಯ ಮಟ್ಟದ ಪ್ರಶಸ್ತಿ ಪ್ರದಾನ ಮಾಡಿ, ಮಾತನಾಡಿದರು. ಮಹಿಳೆಯರು ಮತ್ತು ಮಕ್ಕಳ ಆತ್ಮರಕ್ಷಣೆ ಕಾರ್ಯಕ್ರಮ ಮೇಲಿಂದ ಮೇಲೆ ಹೆಚ್ಚು ನಡೆಯಬೇಕು. ಇದರಿಂದ ತಮ್ಮ ಆತ್ಮರಕ್ಷಣೆ ಆಗುತ್ತದೆಂಬ ಅರಿವು, ವಿಶ್ವಾಸ ಅವರಲ್ಲಿ ಮೂಡುತ್ತದೆ. ಆ ನಿಟ್ಟಿನಲ್ಲಿ ರಾಸಾ ಟ್ರಸ್ಟ್ ಕಾರ್ಯಕ್ರಮ ಆಯೋಜಿಸುತ್ತಿರುವುದು ಶ್ಲಾಘನೀಯ ಕಾರ್ಯ ಎಂದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಸರಿಯಾದ ವೇದಿಕೆ, ಮಾರ್ಗದರ್ಶನ ಸಿಕ್ಕಿದರೆ ಮಕ್ಕಳಲ್ಲಿರುವ ಪ್ರತಿಭೆ ಪ್ರದರ್ಶನಕ್ಕೆ ಅವಕಾಶ ನೀಡಿದಂತಾಗುತ್ತದೆ ಎಂದು ಹೇಳಿದರು.



ಇದೇ ಸಂದರ್ಭದಲ್ಲಿ ಶೈಕ್ಷಣಿಕ ಕ್ಷೇತ್ರದ ಬೆಳಗಾವಿಯ ರೇಖಾ ಜಿ. ನಾಯಕ್ ಅವರಿಗೆ ಕರ್ನಾಟಕ ಸೇವಾ ರತ್ನ ಪ್ರಶಸ್ತಿ, ಬಹುಮುಖ ಪ್ರತಿಭೆಗಳಾದ ದಕ್ಷಿಣ ಕನ್ನಡದ ಸುಳ್ಯದ ಎಂ.ಜಿ.ಶ್ರೇಯಾ, ಶಿವಮೊಗ್ಗದ ಬಿ.ಎಸ್.ಸಿದ್ದಾರ್ಥ್ ಶೆಟ್ಟಿ, ಮೈಸೂರಿನ ಹೆಚ್.ಶ್ರೇಯಸ್, ವಿವಿಧ ಜಿಲ್ಲೆಗಳ ಶಿವರಾಜು, ಸಂಜನ, ಅಮಿತ್ ಫ್ರಾನ್ಸಿಸ್, ಶ್ರೇಯಸ್ ಪತ್ತಾರ್, ಪ್ರಜ್ಞಾ ಅವರಿಗೆ ಕರ್ನಾಟಕ ಬಾಲರತ್ನ ಪ್ರಶಸ್ತಿ ನೀಡಲಾಯಿತು.

ಶ್ರೀ ಕೃಷ್ಣ ಜನ್ಮಾಷ್ಟಮಿಯಲ್ಲಿ ಶ್ರೀ ಕೃಷ್ಣ ವೇಷಧಾರಿ ಮಕ್ಕಳ ರಾಜ್ಯ ಮಟ್ಟದ ಫೋಟೋಸ್ಪರ್ಧೆ ವಿಜೇತರಾದ ದಕ್ಷಿಣ ಕನ್ನಡ ಜಿಲ್ಲೆ ಸುಳ್ಯದ ಹಾರ್ತಿಕ್, ಉಡುಪಿ ಜಿಲ್ಲೆಯ ಪಡುಬಿದ್ರೆ ಎಂ.ಎನ್.ಮಾನ್ಯ, ಮಂಗಳೂರಿನ ಮಯನ್ ಎ.ರಾವ್ ಅವರಿಗೆ ಪ್ರಶಸ್ತಿ ನೀಡಲಾಯಿತು. ನಂತರ ನಡೆದ ಭರತನಾಟ್ಯ ಕಾರ್ಯಕ್ರಮದಲ್ಲಿ ಶ್ರೀಮಾರಿಕಾಂಬ ನೃತ್ಯ ಕಲಾಕೇಂದ್ರದ ವಿದೂಷಿ ಸ್ಮಿತಾ ಪ್ರಕಾಶ್ ಅವರ ತಂಡದ ತನ್ವಿ ಪ್ರಕಾಶ್, ನಂದಿನಿ ಶಿವಕುಮಾರ್, ಶ್ರೀಆದ್ಯ ಪ್ರಕಾಶ್, ಜೆ.ಯುಕ್ತ, ಸಂಗೀತಾ ಆಚಾರ್ಯ ಮತ್ತು ಶೃತಿ ಅವರಿಂದ ಭರತನಾಟ್ಯ ಪ್ರದರ್ಶನ ನಡೆಯಿತು.

ನಂತರ ಮಂಡ್ಯದ ಡಾ.ಅಪ್ಪಾಜಿ, ಮಾದೇಶ್, ಚಾಮರಾಜನಗರದ ಎಂ.ರಾಜೇಶ್, ಮಹದೇವಸ್ವಾಮಿ ಮೈಸೂರಿನ ವಿಶೇಷ ಚೇತನ ಲಕ್ಷ್ಮೀಕಾಂತ್, ಮೈಸೂರಿನ ಗೀತಾ ಶ್ರೀಧರ್, ಬೆಂಗಳೂರಿನ ಕೋಮಲ್‌ರಾಜ್, ಅವರಿಂದ ಗಾಯನ ಕಾರ್ಯಕ್ರಮ ನಡೆಯಿತು.

ರಾಸಾ ಸಂಸ್ಥೆಯ ಅಧ್ಯಕ್ಷ ರಾಸಾ ಆರ್.ಈಶ್ವರ್ ಅಧ್ಯಕ್ಷತೆ ವಹಿಸಿದ್ದರು. 47ನೇ ವಾರ್ಡ್ ಕಾಂಗ್ರೆಸ್ ಅಧ್ಯಕ್ಷ ಎನ್.ಶಿವಶಂಕರ್, ಟ್ರಸ್ಟಿ ಹೇಮಾ ಇನ್ನಿತರರು ಉಪಸ್ಥಿತರಿದ್ದರು.

ನದಿಯಲ್ಲಿ ಕಾಲು ಜಾರಿ ಬಿದ್ದಿದ್ದ ಕೂಲಿ ಕಾರ್ಮಿಕನ ಶವ ಪತ್ತೆ

ಯಳಂದೂರು, ಅ.23- ಪಟ್ಟಣದಲ್ಲಿ ಹರಿಯುವ ಸುವರ್ಣಾವತಿ ನದಿಯಲ್ಲಿ ಕಾಲು ಜಾರಿ ಬಿದ್ದು ನಾಪತ್ತೆಯಾಗಿದ್ದ ಕೂಲಿ ಕಾರ್ಮಿಕನ ಮೃತದೇಹ ಭಾನುವಾರ ಪತ್ತೆಯಾಗಿದೆ.



ಪಟ್ಟಣದ ಬಳೇಪೇಟೆಯ ದಾಸಿಗೇರಿ ನಿವಾಸಿ ಶಂಕರ (45) ಮೃತಪಟ್ಟವರು. ಮೃತರಿಗೆ ಪತ್ನಿ, ಪುತ್ರ-ಪುತ್ರಿ ಇದ್ದಾರೆ.

ಶಂಕರ ಅ.18 ರಂದು ಮಧ್ಯಾಹ್ನ ಗಾರೆ ಕೆಲಸ ಮುಗಿಸಿ ಊಟದ ಸಮಯದಲ್ಲಿ ಸುವರ್ಣಾವತಿ ನದಿ ತೀರದಲ್ಲಿ ಕೈಕಾಲು, ಮುಖ ತೊಳೆಯಲು ತೆರಳುತ್ತಿದ್ದ ಸಂದರ್ಭದಲ್ಲಿ ಕಾಲು ಜಾರಿ ನದಿಯಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ ಎಂದು ಶಂಕಿಸಲಾಗಿದೆ.

ಭಾನುವಾರ ಬೆಳಗ್ಗೆ ನದಿಯಲ್ಲಿ ನೀರಿನ ಮಟ್ಟ ಕಡಿಮೆಯಾಗಿದ್ದರಿಂದ ಶವ ಪತ್ತೆಯಾಗಿದೆ. ಸ್ಥಳಕ್ಕೆ ಪಟ್ಟಣ ಪೊಲೀಸರು ಭೇಟಿ ನೀಡಿ ಶವವನ್ನು ಮೇಲೆತ್ತಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ, ದೂರು ದಾಖಲಿಸಿಕೊಂಡಿದ್ದು, ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ದೇಹ ಹಸ್ತಾಂತರಿಸಲಾಯಿತು.

ತಿ.ನರಸೀಪುರದಲ್ಲಿ ಪರಿಶಿಷ್ಟ ಜಾತಿ/ ಪಂಗಡದ ತ್ರೈಮಾಸಿಕ ಸಭೆ

ನಾಲೆ ಅತಿಕ್ರಮಣ ಸೇರಿದಂತೆ ಹಲವು ಸಮಸ್ಯೆ ಅನಾವರಣ



ತಿ.ನರಸೀಪುರ, ಅ.23– ಪಟ್ಟಣದ ತಾಪಂ ಸಭಾಂಗಣದಲ್ಲಿ ತಹಸೀಲ್ದಾರ್ ಸಿ.ಜಿ.ಗೀತಾ ಅಧ್ಯಕ್ಷತೆಯಲ್ಲಿ ನಡೆದ ತಾಲೂಕು ಪರಿಶಿಷ್ಟ ಜಾತಿ/ಪಂಗಡದ ತ್ರೈಮಾಸಿಕ ಸಭೆಯಲ್ಲಿ ನಾಲೆ ಅತಿಕ್ರಮಣ, ಸ್ಮಶಾನ, ಕಸವಿಲೇವಾರಿ ಘಟಕ ಮತ್ತು ಕೆಎಸ್‌ಐಸಿ ನಿಗಮದ ಅಕ್ರಮ ಸೇರಿದಂತೆ ಹಲವು ಸಮಸ್ಯೆಗಳು ಅನಾವರಣಗೊಂಡವು.

ಸಭೆಯಲ್ಲಿ ಭಾಗವಹಿಸಿದ್ದ ಸಮುದಾಯದ ಮುಖಂಡರು ಪರಿಶಿಷ್ಟ ಜಾತಿ/ಪಂಗಡಕ್ಕೆ ಸಂಬಂಧಿಸಿದ ಹತ್ತು ಹಲವು ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿದರು.

ಸ್ಮಶಾನ ಸಮಸ್ಯೆ ಬಗೆಹರಿಸಿ: ತಾಲೂಕಿನ ದಲಿತ ಸಮುದಾಯದ ಊರುಗಳಿಗೆ ಸ್ಮಶಾನ ಒದಗಿಸುವಂತೆ ತಾಲೂಕು ಬಾಬು ಜಗಜೀವನ್ ರಾಂ ಸಂಘದ ಅಧ್ಯಕ್ಷ ಪುಟ್ಟಯ್ಯ ಒತ್ತಾಯಿಸಿದರು. ತಾಲೂಕಿನ ಹಲವು ಗ್ರಾಮಗಳಲ್ಲಿ ದಲಿತ ಸಮುದಾಯಗಳಿಗೆ ಸ್ಮಶಾನ ಇಲ್ಲ. ಈಗಲೂ ಶವವನ್ನು ನದಿ ತಟದಲ್ಲಿ ಹೂಳುತ್ತಿದ್ದು, ಮಳೆ ಮತ್ತು ಪ್ರವಾಹದ ಸಮಯದಲ್ಲಿ ಶವ ಹೂಳಲು ಸಮಸ್ಯೆ ಆಗುತ್ತಿದೆ ಎಂದರು.

ಸ್ಥಳಾಂತರಕ್ಕೆ ಗಡುವು: ತಾಲೂಕಿನ ಕಿರಗಸೂರು ಗ್ರಾಮದ ಚೆನ್ನಮ್ಮ ವಸತಿ ಶಾಲೆ ಪಕ್ಕದಲ್ಲಿರುವ ಘನತ್ಯಾಜ್ಯ ವಿಲೇವಾರಿ ಘಟಕವನ್ನು ಸ್ಥಳಾಂತರ ಮಾಡುವಂತೆ ಸಭೆಯಲ್ಲಿದ್ದ ಮುಖಂಡರು ಒಕ್ಕೊರಲಿನಿಂದ ಒತ್ತಾಯಿಸಿದರು. ಅಲ್ಲದೇ ಘಟಕವನ್ನು ತಕ್ಷಣ ಸ್ಥಳಾಂತರ ಮಾಡಬೇಕೆಂದು ಸೋಸಲೆ ಶಿವಕುಮಾರ್ ಪಟ್ಟು ಹಿಡಿದರು.

ವಸತಿ ನಿಲಯ ಪಕ್ಕದಲ್ಲಿ ಕಸ ವಿಲೇವಾರಿ ಘಟಕ ಇರುವುದರಿಂದ ವಿದ್ಯಾರ್ಥಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಹಲವು ವಿದ್ಯಾರ್ಥಿಗಳ ಆರೋಗ್ಯ ಹದಗೆಟ್ಟು ಅವರ ವ್ಯಾಸಂಗ ಕುಂಠಿತವಾಗಿದೆ. ಹಾಗಾಗಿ ಮಕ್ಕಳ ಆರೋಗ್ಯ ಹಿತದೃಷ್ಟಿಯಿಂದ ಕಸವಿಲೇವಾರಿ ಘಟಕ ಸ್ಥಳಾಂತರಿಸಿದರು. ಈ ವೇಳೆ ತಾಪಂ ಮಾಜಿ ಸದಸ್ಯ ರಾಮಲಿಂಗಯ್ಯ ಧ್ವನಿಗೂಡಿಸಿದರು.

ನಾಲೆ ತೆರವಿಗೆ ಒತ್ತಾಯ: ಪಟ್ಟಣದ ಹೃದಯ ಭಾಗದಲ್ಲಿರುವ ಹುಲ್ಲಹಳ್ಳಿ ನಾಲೆಯನ್ನು ಹಲವು ಪ್ರಭಾವಿ ಮತ್ತು ರಾಜಕೀಯ ಮುಖಂಡರು ಅತಿಕ್ರಮಣ ಮಾಡಿಕೊಂಡು ಬಹುಮಹಡಿ ಸಂಕೀರ್ಣ ನಿರ್ಮಿಸಿಕೊಂಡಿದ್ದಾರೆ. ಈ ಬಗ್ಗೆ ಜಿಲ್ಲಾಧಿಕಾರಿಗಳು 2010 ರಲ್ಲೇ ಅತಿಕ್ರಮ ತೆರವಿಗೆ ಆದೇಶಿಸಿದ್ದಾರೆ. ಆದರೆ ಇದುವರೆವಿಗೂ ನಾಲಾ ತೆರವಿಗೆ ಪುರಸಭೆ ಮುಂದಾಗಿಲ್ಲ. ಸರ್ಕಾರಿ ಅಧಿಕಾರಿಗಳ ನಿರ್ಲಕ್ಷ್ಯದಿಂದ ಸರ್ಕಾರಿ ನಾಲೆ ಭೂಗಳ್ಳರ ಪಾಲಾಗುತ್ತಿದೆ ಎಂದು ಆರೋಪಿಸಿದರು.

ವಿದ್ಯಾರ್ಥಿ ವೇತನದ ಸಮಸ್ಯೆ: ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ವಿದ್ಯಾರ್ಥಿ ವೇತನ ಸಿಗುತ್ತಿಲ್ಲ. ಸಂಬಂಧಪಟ್ಟ ಅಧಿಕಾರಿ ವರ್ಗ ಈ ಬಗ್ಗೆ ಗಮನಹರಿಸುವಂತೆ ತಾಲೂಕು ನಾಯಕ ಸಂಘದ ಅಧ್ಯಕ್ಷ ಚಿಕ್ಕಯ್ಯ ತಿಳಿಸಿದರು. ನಮ್ಮ ಸಮುದಾಯಕ್ಕೆ ಜಾತಿ ಪ್ರಮಾಣ ಪತ್ರ ನೀಡಲು ಸಮಸ್ಯೆ ಎದುರಾದರೆ ಸ್ಥಳ ಪರಿಶೀಲನೆ ನಡೆಸಿ ಪ್ರಮಾಣ ಪತ್ರ ನೀಡುವಂತೆ ಅಧಿಕಾರಿಗೆ ಆಗ್ರಹಿಸಿದರು.

ಸಭೆಯಲ್ಲಿ ಸಮಾಜ ಕಲ್ಯಾಣಾಧಿಕಾರಿ ರಾಮೇಗೌಡ, ತಾಪಂ ಇಓ ಕೃಷ್ಣ, ನರೇಗಾ ಎಡಿ ಶಶಿಕುಮಾರ್, ತಾಲೂಕು ವೈದ್ಯಾಧಿಕಾರಿ ಡಾ. ರವಿಕುಮಾರ್, ಪುರಸಭೆ ಮುಖ್ಯಾಧಿಕಾರಿ ಬಸವರಾಜು, ಸಿಪಿಐ ಕೃಷ್ಣಪ್ಪ, ಬನ್ನೂರು ಎಸ್‌ಐ ದಿನೇಶ್ ಕುಮಾರ್, ಸರ್ವೆ ಇಲಾಖೆ ಸಹಾಯಕ ನಿರ್ದೇಶಕ ಪಂಚಲಿಂಗಪ್ಪ, ಹಿಂದುಳಿದ ವರ್ಗದ ಸಹಾಯಕ ನಿರ್ದೇಶಕ, ವಿಶ್ವನಾಥ್, ಎಇಇ ಲಕ್ಷ್ಮಣ್‌ರಾವ್, ನೀರಾವರಿ ಎಇಇ ಶಿವಮಾಧವನ್, ಕೃಷಿ ಸಹಾಯಕ ನಿರ್ದೇಶಕಿ ಸುಹಾಸಿನಿ, ಪಿಡಬ್ಲ್ಯುಡಿ ಎಇಇ ನಟೇಶ್, ಸಿಡಿಪಿಓ ಭವ್ಯಶ್ರೀ, ಬಿಸಿಯೂಟ ಮದ್ದಾನಪ್ಪ, ಪರಿಶಿಷ್ಟ ಪಂಗಡಗಳ ಅಧಿಕಾರಿ ಕೋಮಲ, ಎಇಗಳಾದ ರವೀಂದ್ರ, ಮೋಹನ್ ಕುಮಾರ್, ತಹಸೀಲ್ದಾರ್–2 ರಾಜಣ್ಣ, ಶಿರಸ್ತೇದಾರ್ ಪ್ರಭುರಾಜ್, ಅರಣ್ಯಾಧಿಕಾರಿ ಉಮೇಶ್, ಪಶು ಸಂಗೋಪನಾ ಸಹಾಯಕ ನಿರ್ದೇಶಕ ಲಿಂಗರಾಜು, ಸೋಸಲೆ ಶಶಿಕಾಂತ್, ತಾಲೂಕು ಅಂಬೇಡ್ಕರ್ ಸಂಘದ ಅಧ್ಯಕ್ಷ ಮಹದೇವಯ್ಯ, ರಾಜಶೇಖರ್, ಸೋಮಶೇಖರ್, ಪುಟ್ಟಮಲ್ಲಯ್ಯ, ಸೋಸಲೆ ಆರ್‌ಐ ಶ್ಯಾಮ್, ಸಿದ್ದರಾಜು, ಶಿವಕುಮಾರ್ (ಬಡ್ಡು), ಜಯಪ್ಪ, ಉಮಾ ಮಹದೇವ, ಬಿ.ಎಲ್. ಮಹದೇವ, ಪುಟ್ಟಯ್ಯ, ಮಹದೇವಯ್ಯ, ಸೋಮಣ್ಣ, ನಾಗರಾಜು, ಗಣೇಶ್, ಜಯಪ್ಪ, ರಾಜಣ್ಣ, ಪ್ರಸನ್ನ, ಜಯರಾಮು ಡಿಎಸ್‌ಎಸ್, ತಾಲೂಕು ನಾಯಕ ಸಂಘದ ಅಧ್ಯಕ್ಷ ಚಿಕ್ಕಯ್ಯ, ಕಾರ್ಯದರ್ಶಿ ನಾಗರಾಜು, ಮಂಜುನಾಥ್ ಹಾಜರಿದ್ದರು.

ಕೆಎಸ್‌ಐಸಿಯಲ್ಲಿ ಅಕ್ರಮ

"ಪಟ್ಟಣದ ಭೈರಾಪುರ ಸಮೀಪದ ಕೆಎಸ್‌ಐಸಿಯಲ್ಲಿ ಅಕ್ರಮ ನೇಮಕಾತಿ ನಡೆಯುತ್ತಿದ್ದು, ಈ ಬಗ್ಗೆ ತಾಲೂಕು ಆಡಳಿತ ಗಮನಹರಿಸಬೇಕು. ಇತ್ತೀಚೆಗೆ ಕಾರ್ಖಾನೆಯಲ್ಲಿ ಕೆಲಸದ ವೇಳೆ ಬಿದ್ದು ಗಾಯಗೊಂಡಿದ್ದ ಆಲಗೂಡಿನ ಶಿವಕುಮಾರ್ ಎಂಬುವರು ಮೃತಪಟ್ಟಿದ್ದು, ಅವರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು. ಕಾರ್ಖಾನೆಯಲ್ಲಿ ಕುಟುಂಬಸ್ಥರಿಗೆ ಉದ್ಯೋಗ ಕಲ್ಪಿಸಬೇಕು.

- ಚಿಕ್ಕಯ್ಯ, ತಾಲೂಕು ನಾಯಕ ಸಂಘದ ಅಧ್ಯಕ್ಷ.

ಕಟ್ಟಡ ಕಾರ್ಮಿಕರಿಗೆ ಉಚಿತ ಬಸ್‌ಪಾಸ್ ವಿತರಣೆ




ಹುಣಸೂರು, ಅ.23– ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಹಾಗೂ ಕಾರ್ಮಿಕ ಇಲಾಖೆಯಿಂದ ಹುಣಸೂರಿನ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಉಚಿತ ಬಸ್‌ಪಾಸ್‌ಗಳನ್ನು ಶಾಸಕ ಹೆಚ್.ಪಿ.ಮಂಜುನಾಥ್ ವಿತರಿಸಿದರು.

ನಗರದ ಬಸ್ ನಿಲ್ದಾಣದಲ್ಲಿ ಆಯೋಜಿಸಿದ್ದ ಸರಳ ಸಮಾರಂಭದಲ್ಲಿ ಬಸ್‌ಪಾಸ್ ವಿತರಿಸಿ ಮಾತನಾಡಿದ ಅವರು, ಸರ್ಕಾರವು ಉಚಿತ ಬಸ್‌ಪಾಸ್‌ಗಳನ್ನು ಕಾರ್ಮಿಕ ಇಲಾಖೆಯ ಕರ್ನಾಟಕ ರಾಜ್ಯ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ನೋಂದಾಯಿಸಿರುವ ಫಲಾನುಭವಿಗಳಿಗೆ ವಿತರಿಸುತ್ತಿದ್ದು, ಪಾಸ್ ಪಡೆದ ಸ್ಥಳದಿಂದ 45 ಕಿಮೀ ವ್ಯಾಪ್ತಿಯಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶವಿದೆ ಎಂದರು.

ಮಂಡಳಿಯಲ್ಲಿ ಈಗಾಗಲೇ ನೋಂದಾಯಿಸಿರುವ ಫಲಾನುಭವಿಗಳು ತಮ್ಮ ವಾಸಸ್ಥಳಕ್ಕೆ ಹತ್ತಿರದಲ್ಲಿರುವ ಕರ್ನಾಟಕ ಒನ್ ಹಾಗೂ ಗ್ರಾಮ ಸೇವಾ ಒನ್ ಸೆಂಟರ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಉಚಿತವಾಗಿ ಪಡೆಯಬೇಕು. ತಾಲೂಕಿನಲ್ಲಿ 13,400 ಕಾರ್ಮಿಕರು, ಕಾರ್ಮಿಕ ಇಲಾಖೆಯಲ್ಲಿ ಹೆಸರು ನೋಂದಾಯಿಸಿಕೊಂಡಿದ್ದಾರೆ. ಆದರೆ ಇಂದು ಕೇವಲ 110 ಮಂದಿ ಮಾತ್ರ ಉಚಿತ ಪಾಸ್ ಪಡೆಯುತ್ತಿದ್ದು, ಕನಿಷ್ಠ 5000 ಮಂದಿ ಕಾರ್ಮಿಕರು ಉಚಿತ ಬಸ್‌ಪಾಸ್ ಪಡೆಯಲು ಮುಂದಾಗಬೇಕೆಂದು ಸಲಹೆ ನೀಡಿದರು.

ಹುಣಸೂರು ಸಾರಿಗೆ ಘಟಕ ವ್ಯವಸ್ಥಾಪಕ ಸುಬ್ರಹ್ಮಣ್ಯ ಮಾತನಾಡಿ, ಉಚಿತ ಬಸ್ ಪಾಸುದಾರರು ಮೂಲ ಪಾಸ್‌ಗಳನ್ನು (ಒರಿಜಿನಲ್ ಪಾಸ್ ಕಾರ್ಡ್) ಮಾತ್ರ ಜೊತೆಯಲ್ಲಿಟ್ಟುಕೊಂಡು ಪ್ರಯಾಣಿಸುವುದು ಕಡ್ಡಾಯ. ಪಾಸಿನ ನಕಲು ಪ್ರತಿ, ಕಲರ್ ಜೆರಾಕ್ಸ್ ಅಥವಾ ಇತರೆ ಮಾರ್ಪಡಿಸಿದ ಪಾಸ್‌ಗಳನ್ನು ನಿಗಮದ ಬಸ್ಸಿನಲ್ಲಿ ಮಾನ್ಯ ಮಾಡುವುದಿಲ್ಲವೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕಾರ್ಮಿಕ ಇಲಾಖೆಯ ಇನ್ಸ್‌ಪೆಕ್ಟರ್ ಲಕ್ಷ್ಮೀಶ, ಸಾರಿಗೆ ಘಟಕದ ಸುಮಾ, ರಾಜೇಶ್ವರಿ ಸೇರಿದಂತೆ ಕಾರ್ಮಿಕರಿದ್ದರು.

ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚು ಒತ್ತು



ಮಲ್ಕುಂಡಿ, ಅ.23– ನನ್ನ ಅಧಿಕಾರವಧಿಯಲ್ಲಿ ಕ್ಷೇತ್ರದ ಪ್ರತಿ ಗ್ರಾಮಗಳಿಗೂ ಲಕ್ಷಾಂತರ ರೂ. ಅನುದಾನ ನೀಡಿ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿದ್ದೇನೆ ಎಂದು ಶಾಸಕ ಬಿ ಹರ್ಷವರ್ಧನ್ ತಿಳಿಸಿದರು.

ಇಲ್ಲಿಗೆ ಸಮೀಪದ ಕಣೇನೂರು ಗ್ರಾಮದಲ್ಲಿ 10 ಲಕ್ಷ ರೂ. ವೆಚ್ಚದ ಶಾಲಾ ಕಟ್ಟಡ, ಇಬ್ಜಾಲ ಗ್ರಾಮದಲ್ಲಿ ನಿರ್ಮಿತಿ ಕೇಂದ್ರದಿಂದ 21 ಲಕ್ಷ ರೂ. ವೆಚ್ಚದಲ್ಲಿ ಶಾಲೆ ಕಟ್ಟಡ ನಿರ್ಮಾಣಕ್ಕೆ ಚಾಲನೆ ಹಾಗೂ 7 ಲಕ್ಷ ರೂ. ವೆಚ್ಚದ ನೂತನ ಶಾಲೆ ಕಟ್ಟಡ ಉದ್ಘಾಟನೆ, ಎಂ.ಕೊಂಗಳ್ಳಿ 10 ಲಕ್ಷ ರೂ. ವೆಚ್ಚದ ಕನಕ ಭವನ ನಿರ್ಮಾಣ, ಅಕಳ ಗ್ರಾಮದಲ್ಲಿ 4.50 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಕ್ಷೇತ್ರದ ಎಲ್ಲಾ ಗ್ರಾಮಗಳ ರಸ್ತೆಗಳನ್ನು ಕಾಂಕ್ರೀಟ್ ರಸ್ತೆಗಳನ್ನಾಗಿ ಅಭಿವೃದ್ಧಿಪಡಿಸಲಾಗಿದೆ. ಪ್ರತಿ ಗ್ರಾಮಗಳಲ್ಲೂ ಶಾಲೆ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿದ್ದೇನೆ. ದೇಶದ ಉತ್ತಮ ಪ್ರಜೆಯಾಗಲು ಶಿಕ್ಷಣ ಬಹಳ ಮುಖ್ಯ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ತಮ್ಮ ಮಕ್ಕಳಿಗೆ ಆಸ್ತಿಗಿಂತ ಹೆಚ್ಚಾಗಿ ಶಿಕ್ಷಣ ಕೊಡಿಸಿ ಎಂದು ಕಿವಿಮಾತು ಹೇಳಿದರು. ಈ ವೇಳೆ ಗ್ರಾಪಂ ಅಧ್ಯಕ್ಷ ಮಹದೇವಸ್ವಾಮಿ, ಹುಲ್ಲಹಳ್ಳಿ ಶಕ್ತಿ ಕೇಂದ್ರದ ಅಧ್ಯಕ್ಷ ಪರಶಿವಮೂರ್ತಿ, ಮಹೇಶ್, ಶಂಕರ್, ಕುರಿಹುಂಡಿ ಗ್ರಾಪಂ ಅಧ್ಯಕ್ಷೆ ವಿದ್ಯಾ, ಗ್ರಾಪಂ ಸದಸ್ಯ ಗಂಗಾಧರ್, ಮಲ್ಲೇಶ್, ವೈರಮುಡಿ, ರಾಜೇಂದ್ರ, ಇಂಜಿನಿಯರ್ ಯಶವಂತ್, ವೆಂಕಟೇಶ್ ಸೇರಿದಂತೆ ಇತರರಿದ್ದರು.

ರಾಮಮಂದಿರ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ

ಪಿರಿಯಾಪಟ್ಟಣ, ಅ.23– ಅಭಿವೃದ್ಧಿ ಕಾರ್ಯಗಳಿಗಾಗಿ ಶ್ರಮಿಸುತ್ತಿರುವ ಜನಪ್ರತಿನಿಧಿಯನ್ನು ಜನತೆ ಎಂದಿಗೂ ಕೈ ಬಿಡಬಾರದು ಎಂದು ಶಾಸಕ ಕೆ.ಮಹದೇವ್ ಮನವಿ ಮಾಡಿದರು.



ಪಟ್ಟಣದ ದೊಡ್ಡ ನಾಯಕರ ಬೀದಿಯಲ್ಲಿ 40 ಲಕ್ಷ ರೂ. ವೆಚ್ಚದ ನೂತನ ರಾಮ ಮಂದಿರ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ನಾನು ಪಪಂ ಅಧ್ಯಕ್ಷನಾಗಿದ್ದ ವೇಳೆ ಪಟ್ಟಣದ ಅಭಿವೃದ್ಧಿಗಾಗಿ 6 ಕೋಟಿ ರೂ. ವೆಚ್ಚದಲ್ಲಿ ಕುಡಿಯುವ ನೀರು, ರಸ್ತೆ, ಚರಂಡಿ ಮತ್ತು ನಿರ್ಗತಿಕರಿಗೆ ನಿವೇಶನ, ವಸತಿ ಸೌಲಭ್ಯ ಸೇರಿದಂತೆ ಸಾಕಷ್ಟು ಯೋಜನೆಗಳನ್ನು ರೂಪಿಸಿದ್ದೆ. ಈ ಯೋಜನೆಗಳನ್ನು ನಂತರ ಬಂದ ಆಡಳಿತ ಮಂಡಳಿ ನಿರ್ಲಕ್ಷಿಸಿದೆ. ನಾನು ಶಾಸಕನಾದ ಬಳಿಕ ಪಟ್ಟಣ ವ್ಯಾಪ್ತಿಯಲ್ಲಿ ಒಳಚರಂಡಿ, 150 ಕೋಟಿ ರೂ. ವೆಚ್ಚದ ಕುಡಿಯುವ ನೀರಿನ ಯೋಜನೆ ಸೇರಿದಂತೆ ಮತ್ತಿತರ ಮೂಲ ಸೌಲಭ್ಯ ಕಲ್ಪಿಸಲು ಶ್ರಮಿಸಿದ್ದೇನೆ. ಒಕ್ಕಲಿಗ ಮತ್ತು ಅಲ್ಪಸಂಖ್ಯಾತ ಸಮುದಾಯದ ಭವನಕ್ಕೂ 40 ಲಕ್ಷ ರೂ. ಅನುದಾನ ನೀಡಿದ್ದೇನೆ. ಇದನ್ನು ಪಟ್ಟಣದ ಜನತೆ ಅರಿಯಬೇಕು. 3 ಬಾರಿ ಶಾಸಕ ಸ್ಥಾನಕ್ಕೆ ಸ್ಪರ್ಧಿಸಿದ ವೇಳೆ ಪಟ್ಟಣದ ಜನತೆ ಅಲ್ಪ ಪ್ರಮಾಣದ ಮತ ನೀಡಿದ್ದರು. ಆದರೂ ಕೂಡ ನಾನು ಅವರಿಗೆ ಮೋಸ ಮಾಡಿಲ್ಲ. ಪ್ರತಿ ವಾರ್ಡ್‌ಗಳಿಗೆ ಮೂಲ ಸೌಲಭ್ಯ ಕಲ್ಪಿಸುವಲ್ಲಿ ಶ್ರಮಿಸುತ್ತಿದ್ದೇನೆ ಎಂದರು.

ನನ್ನ ರಾಜಕೀಯ ಜೀವನ ಪ್ರಾರಂಭವಾಗಿದ್ದು, ನಾಯಕ ಸಮುದಾಯದ ಮತಗಳಿಂದ. ನನ್ನನ್ನು ಪಪಂ ಸದಸ್ಯರಾಗಿ ಆಯ್ಕೆ ಮಾಡಿದ್ದರ ಫಲವಾಗಿ ಇಂದು ಶಾಸಕನಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗಿದೆ. ಆದ್ದರಿಂದ ನಾನು ಎಂದಿಗೂ ಈ ಬೀದಿಯನ್ನು ಮರೆಯುವುದಿಲ್ಲ ಎಂದು ಕೃತಜ್ಞತೆ ಸಲ್ಲಿಸಿದ ಅವರು, ಭವನದ ಮೇಲಿನ ಅಂತಸ್ತಿಗೂ ಮತ್ತಷ್ಟು ಅನುದಾನ ನೀಡುತ್ತೇನೆ ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಪುರಸಭೆ ಅಧ್ಯಕ್ಷ ಕೆ.ಮಹೇಶ್, ಸ್ಥಾಯಿ ಸಮಿತಿ ಅಧ್ಯಕ್ಷ ಪಿ.ಸಿ.ಕೃಷ್ಣ, ಪುರಸಭಾ ಮಾಜಿ ಸದಸ್ಯ ಸಣ್ಣಪ್ಪ ನಾಯಕ, ಭಾರತಿ, ಮಂಜುನಾಥ್ ಸಿಂಗ್, ತಿಮ್ಮನಾಯಕ, ಚಾಮರಾಜು, ಮುಖಂಡರಾದ ತಾಯಮ್ಮ, ಪಿ.ಬಿ.ಸ್ವಾಮಿ, ಜಾಕಿ ಸುರೇಶ್ ಸೇರಿದಂತೆ ಮತ್ತಿತರರಿದ್ದರು.

ಸರಗೂರಲ್ಲಿ ಗುರುವಂದನಾ ಕಾರ್ಯಕ್ರಮ



ಕಾರ್ಯಕ್ರಮದಲ್ಲಿ ಗುರುಗಳಿಗೆ ಹಳೇ ವಿದ್ಯಾರ್ಥಿಗಳು ಗುರುವಂದನೆ ಸಲ್ಲಿಸಿದರು. ಶಿಕ್ಷಕರು ತಮ್ಮ ಮನದಾಳದ ಮಾತುಗಳನ್ನು ನುಡಿದರೆ, ಮಕ್ಕಳು ಶಿಕ್ಷಕರ ಶಿಕ್ಷಣದ ಕುರಿತು ಹಳೇ ನೆನಪನ್ನು ಹಂಚಿಕೊಂಡರು.

ಸರಗೂರು, ಅ.23– ಅಕ್ಷರ ಕಲಿಸಿ ಬದುಕಿಗೆ ದಾರಿ ತೋರಿಸುವವರೇ ಗುರುಗಳು. ನಿಸ್ವಾರ್ಥದಿಂದ ತನ್ನ ಶಿಷ್ಯ ಉನ್ನತಿ ಸಾಧಿಸುವುದನ್ನು ನೋಡಿ ಸಂತಸ ಪಡುವ ಏಕೈಕ ಜೀವವೆಂದರೆ ಅದು ಶಿಕ್ಷಕ ಮಾತ್ರ ಎಂದು ಹಳೇ ವಿದ್ಯಾರ್ಥಿ ಎಂ.ನಾಗರಾಜು ಅಭಿಪ್ರಾಯಪಟ್ಟರು.

2000–2001ನೇ ಸಾಲಿನ ಹಳೇ ವಿದ್ಯಾರ್ಥಿಗಳು ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕರ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಗುರುವಂದನಾ ಕಾರ್ಯಕ್ರಮವನ್ನು ಶಿಕ್ಷಕರಿಂದ ಶಾಲಾ ಆವರಣದಲ್ಲಿ ಗಿಡ ನೆಡಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮೀಣ ಸರ್ಕಾರಿ ಶಾಲೆಯ ಮಕ್ಕಳು ವಿದ್ಯಾವಂತರಾಗಬೇಕೆಂಬ ಹಂಬಲ ಹೊಂದಿದ್ದವರೂ ನಮ್ಮ ಶಿಕ್ಷಕರು. 21 ವರ್ಷಗಳ ಹಿಂದೆ ವಿದ್ಯೆ ಕಲಿಸಿದ ಶಾಲೆಯಲ್ಲೇ ಹಳೇ ವಿದ್ಯಾರ್ಥಿಗಳು ಸೇರಿ ಎಲ್ಲಾ ಶಿಕ್ಷಕರನ್ನು ಆಹ್ವಾನಿಸಿ ಅವರನ್ನು ಸನ್ಮಾನಿಸಿ ಗುರುವಂದನೆ ಸಲ್ಲಿಸಲಾಗಿದೆ. ಇದು ನಮ್ಮೆಲ್ಲರ ಭಾಗ್ಯ ಎಂದು ತಿಳಿಸಿದರು.

ಶಿಕ್ಷಕಿ ಕಾತ್ಯಾಯಿನಿ ಮಾತನಾಡಿ, ಪ್ರಾಥಮಿಕ ಹಂತದಲ್ಲೇ ಮಕ್ಕಳಿಗೆ ಉತ್ತಮ ಬೋಧನೆ ನೀಡಿ ಅವರ ಮುಂದಿನ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಪ್ರಮುಖವಾದದು. ಇಂತಹ ಶಿಕ್ಷಕರನ್ನು ಅಭಿನಂದಿಸಿದ ನಮ್ಮೆಲ್ಲಾ ಹಳೇ ವಿದ್ಯಾರ್ಥಿಗಳಿಗೆ ಅಭಿನಂದನೆ ಎಂದರು.

ಶಿಕ್ಷಕ ಸಾಂಬಮೂರ್ತಿ ಮಾತನಾಡಿ, ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕರ ಶಾಲೆ ಮಾದರಿ ಶಾಲೆಯಾಗಿದೆ. ಇಲ್ಲಿ ಓದಿದ ಮಕ್ಕಳು ವಿವಿಧ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. 136 ವರ್ಷ ಕಳೆದಿರುವ ಈ ಶಾಲೆಗೆ ಇನ್ನು ಶತಮಾನೋತ್ಸವದ ಭಾಗ್ಯ ಬಂದಿಲ್ಲ. ಇನ್ನಾದರೂ ಸರ್ಕಾರ, ಶಿಕ್ಷಣ ಇಲಾಖೆ ಇತ್ತ ಗಮನಹರಿಸಲಿ ಎಂದರು.

ಕಾರ್ಯಕ್ರಮದಲ್ಲಿ ಶಿಕ್ಷಕರಾದ ಗೋವಿಂದಯ್ಯ, ನಂಜಯ್ಯ, ನಾಗರಾಜು, ಶಿವಣ್ಣ, ರಂಗಸ್ವಾಮಿ, ಕೆ.ಎಂ.ನಾಗೇಂದ್ರಪ್ಪ, ಜಗದೀಶ್, ಡಿ.ಆರ್.ಶಿವಪ್ಪ, ನಾಗರಾಮಶೆಟ್ಟಿ, ಜಿ.ನಾಗೇಶ್, ರೇವಣ್ಣ, ಜಿ.ಎಸ್.ರಾಜಮ್ಮ, ಎಸ್.ಗಿರಿಜಾ, ಮಹಾಲಕ್ಷ್ಮೀ, ಪದ್ಮ, ಲಕ್ಷಮ್ಮ, ಎಂ. ಮೀನಾಕ್ಷಿ, ಹೆಚ್.ಸಿ.ಸುಮಂತ, ವಸಂತ ಕುಮಾರಿ, ಮೈಸೂರು ಮೀನಾಕ್ಷಿ ಎಂ.ಎನ್, ಲತಾಮಣಿ, ಶೀಲಾ, ಶಾಂತಮ್ಮ ಹಂಪಣ್ಣವರ್ ಅವರನ್ನು ಸನ್ಮಾನಿಸಲಾಯಿತು.

ಇದೇ ವೇಳೆ ಹಳೇ ವಿದ್ಯಾರ್ಥಿಗಳಾದ ಪ್ರಮೋದ್, ರವಿ, ರವಿಕುಮಾರ್.ಎನ್, ಮಂಜುನಾಥ, ಎಂ.ನಾಗರಾಜು, ಮುನಿಪುಂಗವಾನ್, ಕಾಳಿಪ್ರಸಾದ್, ಉಮೇಶ್, ರವಿಪ್ರಸಾದ್, ಸೂರ್ಯ, ರಾಜೇಂದ್ರ, ನಾರಾಯಣ, ಚಂದ್ರ ದ್ರಾವಿಡ್, ಬಸವರಾಜ್, ಪುಟ್ಟರಾಜು, ಶ್ರೀಕಾಂತ, ಮೋಹನ್, ಸುರೇಶ, ಕಾಳಿದಾಸ, ಶ್ರೀನಿವಾಸ್, ಚಿನ್ನಸ್ವಾಮಿ, ಸುರೇಶ್, ನಾಗರಾಜು, ಕೃಷ್ಣಮೂರ್ತಿ ಇತರರಿದ್ದರು. ಶಿಕ್ಷಕರಿಗೆ ಊಟ ಬಡಿಸಿದ ವಿದ್ಯಾರ್ಥಿಗಳಿಗೆ ಶಿಕ್ಷಕರು ಸಹ ಊಟಬಡಿಸಿ ಸಂಭ್ರಮಿಸಿದರು.

ಸಮಾಜಸೇವೆ ಮೂಲಕ ಪವರ್‌ಸ್ಟಾರ್ ಜೀವಂತ

ಹುಣಸೂರು, ಅ.23– ತಮ್ಮ ಜೀವಿತಾವಧಿಯಲ್ಲಿ ತಾವು ಮಾಡಿದ ಹಲವು ಸಮಾಜಸೇವೆ ಮೂಲಕ ನಟ ಪುನೀತ್ ರಾಜ್‌ಕುಮಾರ್ ಜನಮಾನಸದಲ್ಲಿ ಜೀವಂತವಾಗಿ ಉಳಿದಿದ್ದಾರೆ ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ತಿಳಿಸಿದರು.



ನಗರದ ಆಂಜನೇಯಸ್ವಾಮಿ ದೇವಾಲಯದ ಆವರಣದಲ್ಲಿ ಪುನೀತ್ ರಾಜ್‌ಕುಮಾರ್ ಅಭಿಮಾನಿ ಬಳಗ, ಪುನೀತ್ ರಾಜ್‌ಕುಮಾರ್ ಅವರ ಮೊದಲ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಆಯೋಜಿಸಿದ್ದ ನಾಡ ಕಾಟಕುಸ್ತಿ ಜೊತೆ ಕಟ್ಟುವಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪುನೀತ್ ಅವರು ತಮ್ಮ ಜೀವಿತಾವಧಿಯಲ್ಲಿ ಸಾಕಷ್ಟು ಜನಪರ ಕೆಲಸ ಮಾಡಿದ್ದಾರೆ. ಅವರು ಇಂದು ನಮ್ಮೊಂದಿಗೆ ಇಲ್ಲದಿದ್ದರೂ ಅವರು ಮಾಡಿದ ಕೆಲಸಗಳು ಅಪಾರ. ಅವರ ಹೆಸರಿನಲ್ಲಿ ದೇಶಿಯ ಕ್ರೀಡೆ ನಾಡ ಕಾಟಕುಸ್ತಿ ಪಂದ್ಯಾವಳಿ ಏರ್ಪಡಿಸಿರುವುದು ಶ್ಲಾಘನೀಯ. ಇದೇ ರೀತಿ ಪುನೀತ್ ಹೆಸರಿನಲ್ಲಿ ಇನ್ನು ಹತ್ತು ಹಲವು ಜನಪರ ಕಾರ್ಯಕ್ರಮಗಳನ್ನು ಸಂಘ ಮಾಡಲಿ. ಇದಕ್ಕೆ ನಾನು ಕೈಜೋಡಿಸುತ್ತೇನೆ ಎಂದರು. ಈ ವೇಳೆ ಮೈಮುಲ್ ನಿರ್ದೇಶಕ ಕೆ.ಎಸ್.ಕುಮಾರ್, ನಗರಸಭಾ ಸದಸ್ಯ ಶ್ರೀಕಾಂತ್, ಪೈಲ್ವಾನ್ ರಾಕಿ ಸೇರಿದಂತೆ ಪುನೀತ್ ರಾಜ್ ಕುಮಾರ್ ಅಭಿಮಾನಿಗಳ ಬಳಗದ ಸದಸ್ಯರು, ಪದಾಧಿಕಾರಿಗಳು ಉಪಸ್ಥಿತರಿದ್ದರು.

ವಾಲ್ಮೀಕಿಯವರ ತತ್ವಾದರ್ಶಗಳನ್ನು ಮೈಗೂಡಿಸಿಕೊಳ್ಳಿ

ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ



ಬೆಳಲೆ, ಅ.23– ಮಹರ್ಷಿ ವಾಲ್ಮೀಕಿ ರಚಿಸಿರುವ ರಾಮಾಯಣದಲ್ಲಿ ಕೌಟುಂಬಿಕ, ಸಾಮಾಜಿಕ ಸಂದೇಶಗಳನ್ನು ಸಾರುವಂತಹ ಅಂಶಗಳು ಅಡಗಿವೆ. ಅವುಗಳು ನಮ್ಮ ಬದುಕಿಗೆ ಆದರ್ಶವಾಗಬೇಕಿದೆ ಎಂದು ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ತಿಳಿಸಿದರು.

ನಂಜನಗೂಡು ತಾಲೂಕಿನ ಬೆಳಲೆ ಗ್ರಾಮದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ನಾಯಕ ಸಮುದಾಯದಲ್ಲಿ ಅನೇಕ ಐತಿಹಾಸಿಕ ಪುರುಷರು ಜನ್ಮತಾಳಿ ದೇಶಕ್ಕೆ, ಸಮಾಜಕ್ಕೆ ಮಾದರಿಯಾಗಿದ್ದಾರೆ. ದೈವಭಕ್ತಿಗಾಗಿ ಕಣ್ಣುಕೊಟ್ಟ ಬೇಡರ ಕಣ್ಣಪ್ಪ, ಬೆರಳನ್ನೇ ಕೊಟ್ಟ ಏಕಲವ್ಯ, ದೇಶ ಕಟ್ಟಿದ ಅಕ್ಕಬುಕ್ಕರು, ದೇಶದ ರಕ್ಷಣೆಗಾಗಿ ಖಡ್ಗ ಹಿಡಿದ ಮದಕರಿ ನಾಯಕ, ಮಹಾಭಾರತ ಬರೆದ ವ್ಯಾಸರಾಜರು, ರಾಮಾಯಣ ಬರೆದ ಮಹರ್ಷಿ ವಾಲ್ಮೀಕಿಯಂತಹ ಐತಿಹಾಸಿಕ ಪುರುಷರು ನಮಗೆ ಆದರ್ಶವಾಗಬೇಕು. ಮನಸ್ಸಿದ್ದರೆ ಜೀವನದಲ್ಲಿ ಏನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ಮಹರ್ಷಿ ವಾಲ್ಮೀಕಿರವರ ಬದುಕು ನಮಗೆ ಆದರ್ಶ. ರಾಮಾಯಣದಲ್ಲಿ ವ್ಯಕ್ತಿ ಜೀವನದಲ್ಲಿ ತನ್ನ ವ್ಯಕ್ತಿತ್ವ ಹೇಗಿರಬೇಕೆಂಬುದರ ಎಲ್ಲಾ ರೀತಿಯ ಸಂದೇಶ ಅಡಕವಾಗಿದೆ. ಅವುಗಳನ್ನು ಅನುಸರಿಸಿ ನಡೆದರೆ, ನಮ್ಮ ದೇಶ ರಾಮರಾಜ್ಯವಾಗಲಿದೆ. ಇಂದಿನ ಯುವಕರು ವಾಲ್ಮೀಕಿಯವರ ತತ್ವ, ಆದರ್ಶಗುಣಗಳನ್ನು ಮೈಗೂಡಿಸಿಕೊಳ್ಳಬೇಕು. ಜೊತೆಗೆ ನಿಮ್ಮ ಮಕ್ಕಳಿಗೆ ಕಡ್ಡಾಯವಾಗಿ ವಿದ್ಯಾವಂತರನ್ನಾಗಿಸಿ ಎಂದು ಕರೆ ನೀಡಿದರು.

ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು ಮಾತನಾಡಿ, ವಾಲ್ಮೀಕಿ ಅವರು 7 ಖಂಡಗಳನ್ನು ಒಳಗೊಂಡ ರಾಮಾಯಣವನ್ನು ಸಂಸ್ಕೃತ ಭಾಷೆಯಲ್ಲಿ ರಚಿಸಿದ್ದಾರೆ. ಶೋಷಿತ ಸಮುದಾಯದವರು ಸಂಸ್ಕೃತದಲ್ಲಿ ಕಾವ್ಯ ರಚಿಸುವುದು ಮನುವಾದಿಗಳಿಗೆ ಸಹಿಸಲು ಆಗದೆ ಮಹರ್ಷಿ ವಾಲ್ಮೀಕಿ ಅವರನ್ನು ಬ್ರಾಹ್ಮಣರೆಂದು ಬಿಂಬಿಸುವಂತಹ ಪ್ರಯತ್ನ ನಡೆದಿತ್ತು. ಆದರೆ ನ್ಯಾಯಾಲಯ ವಾಲ್ಮೀಕಿ ಬ್ರಾಹ್ಮಣರಲ್ಲ ಎಂದು ತೀರ್ಪು ನೀಡಿದೆ. ಆದ್ದರಿಂದ ಯುವಕರು ವಿದ್ಯಾವಂತರಾಗಿ ಸಮುದಾಯವನ್ನು ಒಗ್ಗೂಡಿಸಿ ಸಮಾಜ ಕಟ್ಟುವಂತಹ ಕೆಲಸ ಮಾಡಿ ಎಂದರು.

ನಾಟಕಗಳ ಮೂಲಕ ರಾಮಾಯಣವನ್ನು ಸಾಮಾನ್ಯ ಜನರಿಗೆ ತಿಳಿಸುವ ಕಾರ್ಯ ನಡೆಯುತ್ತಿತ್ತು. ಆದರೆ ನಾಟಕ ಕಲೆಗಳು ಮಾಯವಾಗುತ್ತಿರುವ ಕಾರಣ ಇಂದಿನ ಪೀಳಿಗೆಯವರಿಗೆ ರಾಮಾಯಣ ಕಾವ್ಯ ತಿಳಿಯುತ್ತಿಲ್ಲ. ಆದ್ದರಿಂದ ಇಂತಹ ಜಯಂತಿ ಕಾರ್ಯಕ್ರಮಗಳಲ್ಲಿ ರಾಮಾಯಣದ ಬಗ್ಗೆ ಮಹರ್ಷಿ ವಾಲ್ಮೀಕಿ ಅವರ ಬಗ್ಗೆ ತಿಳುವಳಿಕೆ ಮೂಡಿಸುವಂತಹ ವಿದ್ವಾಂಸರನ್ನು ಕರೆಸಿ ಮುಂದಿನ ಪೀಳಿಗೆಯವರಿಗೆ ಅರಿವು ಮೂಡಿಸುವಂತಹ ಕೆಲಸ ಮಾಡಿ ಎಂದು ಸಲಹೆ ನೀಡಿದರು.

ಇದೇ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ, ತಾಪಂ ಮಾಜಿ ಸದಸ್ಯರಾದ ಶಿವಣ್ಣ, ಗ್ರಾಪಂ ಅಧ್ಯಕ್ಷ ಮಹದೇವಶೆಟ್ಟಿ, ಮುಖಂಡರಾದ ಸಂತೋಷ್, ಗೋಪಾಲನಾಯಕ, ಶಿವನಂಜನಾಯಕ, ಎನ್.ಮಹದೇವು, ಅರುಣ, ಹನುಮನಾಯಕ, ಸೋಮನಾಯಕ, ಬಿಳಿಶೆಟ್ಟಿ, ಚೆನ್ನಬಸಪ್ಪ ಇದ್ದರು.

ಪುನೀತ್ ನಿಂದನೆ: ಅಭಿಮಾನಿಗಳಿಂದ ಪ್ರತಿಭಟನೆ



ತಿ.ನರಸೀಪುರ, ಅ.23– ನಟ ಪುನೀತ್ ರಾಜಕುಮಾರ್ ಅವರನ್ನು ಅವಹೇಳನಕಾರಿಯಾಗಿ ನಿಂದಿಸಿರುವ ಲಿಂಗದೇವರುಕೊಪ್ಪಲಿನ ಯುವಕ ಪುಟ್ಟು ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಪುನೀತ್ ರಾಜಕುಮಾರ್ ಅಭಿಮಾನಿ ಬಳಗದ ಕಾರ್ಯಕರ್ತರು ಪಟ್ಟಣದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಪಟ್ಟಣದ ವಿದ್ಯೋದಯ ಕಾಲೇಜು ವೃತ್ತದಲ್ಲಿ ಜಮಾಯಿಸಿದ ಪುನೀತ್ ಅಭಿಮಾನಿಗಳು, ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿ ಮಿನಿ ವಿಧಾನಸೌಧಕ್ಕೆ ತೆರಳಿ ಶಿರಸ್ತೇದಾರರಿಗೆ ಮನವಿ ಸಲ್ಲಿಸಿದರು.

ಕಸಾಪ ತಾಲೂಕು ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ ಮಾತನಾಡಿ, ನಾಡು ಕಂಡ ಮೇರು ನಟ ಪುನೀತ್ ರಾಜಕುಮಾರ್ ತಮ್ಮ ಸಮಾಜಮುಖಿ ಸೇವಾ ಕಾರ್ಯಗಳಿಂದ ಭೌತಿಕವಾಗಿ ಮರೆಯಾಗಿದ್ದರೂ, ಜನರ ಮನಸ್ಸಿನಲ್ಲಿದ್ದಾರೆ. ಆದರೆ ಮೈಸೂರಿನ ಲಿಂಗದೇವರುಕೊಪ್ಪಲು ಗ್ರಾಮದ ನಿವಾಸಿ ಮಲ್ಲಿಕಾರ್ಜುನ ಅಲಿಯಾಸ್ ಪುಟ್ಟು ಎಂಬಾತ ಸಾಮಾಜಿಕ ಜಾಲತಾಣದಲ್ಲಿ ಪುನೀತ್ ರಾಜಕುಮಾರ್ ಅವರ ಕುರಿತು ಅವಹೇಳನಕಾರಿ ಹೇಳಿಕೆ ನೀಡಿರುವುದು ಕನ್ನಡಿಗರಿಗೆ ಅಪಮಾನ ಮಾಡಿದಂತಾಗಿದೆ. ಹಾಗಾಗಿ ಕೂಡಲೇ ಆತನನ್ನು ಬಂಧಿಸಿ, ಗಡೀಪಾರು ಮಾಡುವ ಮೂಲಕ ಇಂತಹ ಘಟನೆ ಪುನರಾವರ್ತನೆಯಾಗದಂತೆ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಸೇವಾಶ್ರಯ ಫೌಂಡೇಶನ್ ಅಧ್ಯಕ್ಷ ಆರ್.ಮಣಿಕಂಠರಾಜ್ ಗೌಡ, ಡಾ.ಪ್ರದೀಪ್, ಆರ್ಯ ಈಡಿಗರ ಸಂಘದ ಅಧ್ಯಕ್ಷ ಮಂಜು ಕುಮಾರ್, ಬೃಂದಾ ಆಸ್ಪತ್ರೆ ಮಾಲೀಕ ಗುರು, ಕಬ್ಬು ಬೆಳೆಗಾರರ ಸಂಘದ ಕಾರ್ಯದರ್ಶಿ ಶಂಕರ್, ಕಸಾಪ ಸಂಚಾಲಕ ಮಲ್ಲೇಶ್, ಮುಖಂಡರಾದ ನಾಗೇಂದ್ರ, ಕೃಷ್ಣಮೂರ್ತಿ, ಕಾಂತರಾಜು, ಬಸವರಾಜು, ಮಹದೇವ ಪ್ರಸಾದ್, ಶಂಕರ್, ಕುಮಾರಸ್ವಾಮಿ, ಶ್ರೀಕಂಠರಾಜ ಅರಸ್, ಮಂಜುನಾಥ್ ಮತ್ತಿತರರಿದ್ದರು.

ನೈಋತ್ಯ ರೈಲ್ವೆ

ಇ–ಟೆಂಡರ್ ಸೂಚನೆ ಸಂ.: Y/E.29/2022-23/29
ದಿನಾಂಕ: 19.10.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಮೈಸೂರು ವಿಭಾಗದ ಹಂತ 1ರಲ್ಲಿ ಸರ್ವೀಸ್ ಕಟ್ಟಡದ ಮೇಲೆ ಸೋಲಾರ್ ಸ್ಥಾವರಗಳ ವ್ಯವಸ್ಥೆಯ ಪೂರೈಕೆ ಹಾಗೂ ಹಂತ 2ರಲ್ಲಿ ರೈಲ್ವೇ ನಿಲ್ದಾಣಗಳ ಮೇಲೆ ಸೋಲಾರ್ ಸ್ಥಾವರಗಳ ವ್ಯವಸ್ಥೆಯ ಪೂರೈಕೆ.	ರೂ. 2,56,49,712/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10.11.2022, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್
ಮೈಸೂರು

PUB/438/AAD/PRB/SWR/2022-23

S.W.Railways SWRRLY SWRRLY

ಮೈಸೂರು ಮಿತ್ರ 43

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕ ಪ್ರಕಟಣೆ

ಮಧೂಸ್ ಟೈರ್ಸ್

(Since 1951)

ಗೋಪಾಲಗೌಡ ಆಸ್ಪತ್ರೆ / ನಜರ್‌ಬಾದ್‌ನಲ್ಲಿ ನಮ್ಮ ಯಾವುದೇ ಶಾಖೆ (Branch) ಇರುವುದಿಲ್ಲ